**ಶುಭಾಶಯಗಳು**

ಭಾವೈಕ್ಯತೆಯ ಸಂಕೇತವಾದ
ಶ್ರೀ ಗಣೇಶ ಚತುರ್ಥಿಯ ಈ ಶುಭ ಸಂದರ್ಭದಲ್ಲಿ
ಸಮಸ್ತರಿಗೆ ಹಾರ್ದಿಕ ಶುಭಾಶಯಗಳು.

**- ಸಂಪಾದಕರು**

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

**ಬಿಡುವು**

ಶ್ರೀ ಗಣೇಶ ಚತುರ್ಥಿಯ ಪ್ರಯುಕ್ತ ಇಂದು
ನಮ್ಮ ಕಚೇರಿಗೆ ಬಿಡುವು. ಕಾರಣ, ನಾಳೆ ಭಾನುವಾರದ
'ಜನತಾವಾಣಿ' ಸಂಚಿಕೆ ಪ್ರಕಟಗೊಳ್ಳುವುದಿಲ್ಲ.


**- ವ್ಯವಸ್ಥಾಪಕರು**

**ಸಂಪಾದಕರು :**
**ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ**

**ದಾವಣಗೆರೆ**
ಶನಿವಾರ, ಆಗಸ್ಟ್ 22, 2020

ಸಂಪುಟ : 47 ಸಂಚಿಕೆ : 103 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 12 ರೂ : 3.00 www.janathavani.com janathavani@mac.com









# ಸರಳ ಮೈಸೂರು ದಸರಾ



ಬೆಂಗಳೂರು, ಆ. 21 - ಕೊರೊನಾ ಸಾಂಕ್ರಾಮಿಕ ರೋಗದ ಭೀತಿಯ ನಡುವೆಯೂ ಮೈಸೂರು ದಸರಾ ಮಹೋತ್ಸವವನ್ನು ಸರಳವಾಗಿ ಆಚರಿಸುವುದಾಗಿ ಮುಖ್ಯ ಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದ್ದಾರೆ.

ಕೃಷ್ಣರಾಜಸಾಗರ ಹಾಗೂ ಕಬಿನಿ ಜಲಾಶಯಗಳಿಗೆ ಬಾಗಿನ ಅರ್ಪಿಸಲು ತೆರಳುವುದಕ್ಕೂ ಮುನ್ನ ತಮ್ಮ ಕಾವೇರಿ ನಿವಾಸದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಉತ್ತಮ ಮಳೆಯಾಗಿ, ಎಲ್ಲಾ ಜಲಾಶ ಯಗಳು ಭರ್ತಿಯಾಗಿವೆ ಎಂದಿದ್ದಾರೆ.

ರೈತರು ಮತ್ತು ಜನತೆ ಸಂತೃಪ್ತ ದಿಂದ ಇದ್ದಾರೆ. ಇಂತಹ ಸನ್ನಿವೇಶದಲ್ಲಿ ನಾಡ ಹಬ್ಬ ದಸರಾ ವನ್ನು ವಿಜೃಂಭಣೆಯಿಂದ ಆಚರಿಸಲು ಸಾಧ್ಯವಾಗುತ್ತಿಲ್ಲ. ಕರ್ನಾಟಕದಲ್ಲಿ ಕೊರೋನಾ ಸೋಂಕು ಇನ್ನೂ ತಹಬದಿಗೆ ಬಂದಿಲ್ಲ. ಸಾರ್ವಜನಿಕ ಹಿತದೃಷ್ಟಿಯಿಂದ ನಾಡಹಬ್ಬವನ್ನು ಸರಳವಾಗಿ ಆಚರಿಸಬೇಕಾಗಿದೆ ಎಂದು ಹೇಳಿದ್ದಾರೆ.

ದಸರಾ ಮಹೋತ್ಸವವನ್ನು ಸರಳವಾಗಿ ಆಚರಣೆ ಮಾಡಲು ತೀರ್ಮಾನ ಕೈಗೊಂಡಿದ್ದರೂ, ಇದರ ಬಗ್ಗೆ ಮುಂದಿನ ದಿನಗಳಲ್ಲಿ ಚರ್ಚೆ ಮಾಡುತ್ತೇವೆ. ಉನ್ನತ ಮಟ್ಟದ ಸಭೆಗೆ ಶೀಘ್ರದಲ್ಲೇ ದಿನಾಂಕ ನಿಗದಿ ಮಾಡುವುದಾಗಿ ತಿಳಿಸಿದರು.

# ಅವಳಿ ತಾಲ್ಲೂಕುಗಳನ್ನು ಧೂಳುಮುಕ್ತ ತಾಲ್ಲೂಕುಗಳನ್ನಾಗಿಸುವೆ:ರೇಣುಕಾಚಾರ್ಯ



ಹೊನ್ನಾಳಿ, ಆ.21- ಹೊನ್ನಾಳಿ ಮತ್ತು ನ್ಯಾಮತಿ ಅವಳಿ ತಾಲ್ಲೂಕಿನಾದ್ಯಂತ ನೂರಾರು ಕೋಟಿ ರೂ.ಗಳ ವೆಚ್ಚದಲ್ಲಿ ಸಿಸಿ ರಸ್ತೆಗಳನ್ನು ಅಭಿವೃದ್ಧಿಪಡಿಸಿದ್ದು, ಇನ್ನುಳಿದ ಹಳ್ಳಿಗಳಲ್ಲೂ ಮುಂದಿನ ದಿನಗಳಲ್ಲಿ ಸಿಸಿ ರಸ್ತೆ ಮಾಡಿಸುವ ಮೂಲಕ ಅವಳಿ ತಾಲ್ಲೂಕುಗಳನ್ನು ಧೂಳು ಮುಕ್ತ ತಾಲ್ಲೂಕುಗಳನ್ನಾಗಿ ಮಾಡುತ್ತೇನೆಂದು ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಶಾಸಕ ಎಂ.ಪಿ. ರೇಣುಕಾಚಾರ್ಯ ತಿಳಿಸಿದ್ದಾರೆ.

ಪಟ್ಟಣದ ಕೋರ್ಟ್ ರಸ್ತೆಯನ್ನು ಒಂದು ಕೋಟಿ ಎಪ್ಪತ್ತು ಲಕ್ಷ ರೂಪಾಯಿ ವೆಚ್ಚದಲ್ಲಿ ಸಿಸಿ ರಸ್ತೆ ಮಾಡುತ್ತಿದ್ದು, ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿಯ ಗುಣಮಟ್ಟ ಪರಿಶೀಲನೆ ನಡೆಸಿ ಅಧಿಕಾರಿಗಳಿಗೆ ಕಾಮಗಾರಿಯ ಗುಣಮಟ್ಟ ಕಾಯ್ದು ಕೊಳ್ಳುವಂತೆ ಎಚ್ಚರಿಕೆ ನೀಡಿ ಸುದ್ದಿಗಾರೊಂದಿಗೆ ಮಾತನಾಡಿದರು.

ಈ ಸಂದರ್ಭದಲ್ಲಿ ನ್ಯಾಮತಿ ತಾಲ್ಲೂಕು ಪಂಚಾಯಿತಿ ಅಧ್ಯಕ್ಷ ಎಸ್.ಪಿ ರವಿಕುಮಾರ್, ಬಿಜೆಪಿ ಮುಖಂಡ ಅಜಯ್ ಕುಮಾರ್, ರವಿಕುಮಾರ್ ಸೇರಿದಂತೆ ಪಟ್ಟಣ ಪಂಚಾಯಿತಿ ಸದಸ್ಯರು, ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

**ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಅವರನ್ನು ಬದಲಾಯಿಸುವಂತೆ ಜಿಲ್ಲೆಯ ಯಾವೊಬ್ಬ ಶಾಸಕರೂ ಕೂಡ ಮಾತನಾಡಿಲ್ಲ. ಆದರೆ ಜಿಲ್ಲೆಗೊಂದು ಸಚಿವ ಸ್ಥಾನ ನೀಡ ಬೇಕೆಂದು ಸಿಎಂ ಬಳಿ ಮನವಿ ಮಾಡಿದ್ದೇವೆ ಎಂದರು.**

**ಭೈರತಿ ಬಸವರಾಜ್ ಉತ್ತಮವಾಗಿ ಕೆಲಸ ಮಾಡುತ್ತಿದ್ದು, ಇಂತಹ ಉಸ್ತುವಾರಿ ಸಚಿವರು ನಮ್ಮ ಜಿಲ್ಲೆಗೆ ಸಿಕ್ಕಿದ್ದು ನಮ್ಮ ಹೆಮ್ಮೆ ಎಂದ ಶಾಸಕರು, ಜಿಲ್ಲೆಗೆ ಸಚಿವ ಸ್ಥಾನ ನೀಡಬೇಕೆಂದು ಒತ್ತಾಯ ಮಾಡಿದ್ದೇವೆಯೇ ವಿನಃ ಉಸ್ತುವಾರಿ ಸಚಿವರನ್ನು ಬದಲಾಯಿಸಿ ಎಂದು ಎಲ್ಲಿಯೂ ಕೇಳಿಲ್ಲ ಎಂದು ರೇಣುಕಾಚಾರ್ಯ ಸ್ಪಷ್ಟ ಪಡಿಸಿದರು.**

# ವೈದ್ಯಾಧಿಕಾರಿ ಡಾ.ನಾಗೇಂದ್ರ ಆತ್ಮಹತ್ಯೆ : ಮೇಲಾಧಿಕಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹ

ಹರಪನಹಳ್ಳಿ, ಆ.21- ಮೇಲಾಧಿಕಾರಿಗಳ ಕಿರುಕುಳ ಹಾಗೂ ಒತ್ತಡದಿಂದ ತಾಲ್ಲೂಕು ವೈದ್ಯಾಧಿಕಾರಿ ಡಾ.ನಾಗೇಂದ್ರ ಆತ್ಮಹತ್ಯೆ ಮಾಡಿಕೊಂಡಿದ್ದು, ಮೇಲಾಧಿಕಾರಿಗಳ ಮೇಲೆ ಕೂಡಲೇ ಸೂಕ್ತ ಕ್ರಮ ಜರುಗಿಸಬೇಕು ಎಂದು ಕೆಪಿಸಿಸಿ ವೈದ್ಯ ಘಟಕದ ಉಪಾಧ್ಯಕ್ಷ ಡಾ.ಮಹಾಂತೇಶ್ ಆರ್. ಚರಂತಿಮಠ ಖಂಡಿಸಿದ್ದಾರೆ.

ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೈಸೂರಿನ ನಂಜನಗೂಡಿನ ವೈದ್ಯರಾಗಿ ಅವರು, ಕೊರೊನಾ ವಾರಿಯರ್ಸ್ ಆಗಿ ಕೆಲಸ ನಿರ್ವಹಿಸುತ್ತಿರುವ ವೈದ್ಯರು ಹಲವಾರು ಗಂಟೆಗಳ ಕಾಲ ಪಿಪಿಸಿ ಕಿಟ್ ಧರಿಸಿ ಕೆಲಸ ನಿರ್ವಹಿಸಿ ದೈಹಿಕವಾಗಿ ಸಂಕಷ್ಟ ಅನುಭವಿಸುತ್ತಿರುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಮೇಲಾಧಿಕಾರಿಗಳು ಕಿರುಕುಳ ನೀಡಿದರೆ ಮಾನಸಿಕ ನೆಮ್ಮದಿಯೂ ಹಾಳಾಗುತ್ತದೆ. ಕೊರೊನಾ ವೈರಸ್ ಹೆಮ್ಮಾರಿಯನ್ನು ನಿಯಂತ್ರಿಸುವಲ್ಲಿ ವೈದ್ಯರು ಹೆಣಗಾಡುತ್ತಿದ್ದಾರೆ. ಇಂತಹ ಸೇವೆ ನೀಡುತ್ತಿರುವ ಕೊರೊನಾ ವಾರಿಯರ್ಸ್ ಮೇಲೆ ಕಿರುಕುಳ, ದಬ್ಬಾಳಿಕೆ ಮರುಕಳಿಸದಂತೆ ಸರ್ಕಾರ ಎಚ್ಚರಿಕೆ ವಹಿಸಬೇಕು ಎಂದು ಆಗ್ರಹಿಸಿದ್ದಾರೆ.

## ಕಕ್ಕರಗೊಳ್ಳ : 25ರಂದು ವಿಶೇಷ ಪೂಜೆ

ದಾವಣಗೆರೆ, ಆ.21- ಕಕ್ಕರಗೊಳ್ಳ ಕೆರೆಏರಿ ಶ್ರೀ ಭರಮದೇವರ ದೇವಸ್ಥಾನ ಸಮಿತಿ ವತಿಯಿಂದ ಇದೇ ದಿನಾಂಕ 25ರ ಭಾನುವಾರ ಶ್ರಾವಣದ ವಿಶೇಷ ಪೂಜೆಯನ್ನು ಹಮ್ಮಿಕೊಂಡಿದ್ದು, ಅಂದು ಬೆಳಿಗ್ಗೆ 6 ಗಂಟೆಗೆ ಅಭಿಷೇಕ ನೆರವೇರಲಿದೆ. ಬೆಳಿಗ್ಗೆ 11 ಗಂಟೆಗೆ ಪ್ರಸಾದ ಸೇವೆ ಹಮ್ಮಿಕೊಳ್ಳಲಾಗಿದೆ.

## ಕಾನೂನು ಪದವೀಧರರ ತರಬೇತಿಗೆ ಅರ್ಜಿ

ದಾವಣಗೆರೆ, ಆ.19- ಅಲ್ಪಸಂಖ್ಯಾತರ ಜನಾಂಗಕ್ಕೆ ಸೇರಿದ ಜಿಲ್ಲೆಯ 5 ನಿರುದ್ಯೋಗಿ ಕಾನೂನು ಪದವೀಧರರಿಗೆ ಆಡಳಿತ ನ್ಯಾಯಾಧೀಕರಣದಲ್ಲಿ ತರಬೇತಿ ನೀಡಲು ಅರ್ಹ ಅಭ್ಯರ್ಥಿಗಳಿಂದ ತರಬೇತಿ/ಶಿಷ್ಯವೇತನ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ಅಭ್ಯರ್ಥಿಗಳು ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಕೊಠಡಿ ಸಂಖ್ಯೆ 44 ಎರಡನೇ ಮಹಡಿ, ಜಿಲ್ಲಾಡಳಿತ ಭವನ, ಕರೂರು ರಸ್ತೆ, ದಾವಣಗೆರೆ, ಇಲ್ಲಿ ಅರ್ಜಿಗಳನ್ನು ಪಡೆದು ಭರ್ತಿ ಮಾಡಿದ ಅರ್ಜಿಯನ್ನು ಅವಶ್ಯಕ ದಾಖಲೆಗಳೊಂದಿಗೆ ಆಗಸ್ಟ್ 31 ರೊಳಗೆ ಸಲ್ಲಿಸುವುದು.

# ಅಂಚೆ ನೌಕರನಿಗೆ ಗಿಫ್ಟ್ ನೆಪದಲ್ಲಿ ಅಮೆರಿಕಾ ಮಹಿಳೆ ವಂಚನೆ

ದಾವಣಗೆರೆ, ಆ.21- ವೈವಾಹಿಕ ಜೀವನದ ಸಮಸ್ಯೆಗೆ ಪರಿಹಾರ ನೀಡಿದ್ದರಿಂದ ಗಿಫ್ಟ್ ರೂಪದಲ್ಲಿ ಹಣ ಕಳಿಸಿರುವುದಾಗಿ ನಂಬಿಸಿ ಆನ್ ಲೈನ್ ಮುಖೇನ ಸುಮಾರು 9 ಲಕ್ಷಕ್ಕೂ ಅಧಿಕ ಹಣವನ್ನು ವಂಚಿಸಿರುವುದಾಗಿ ಜ್ಯೋತಿಷಿಯೂ ಆಗಿರುವ ಅಂಚೆ ನೌಕರ ಇಲ್ಲಿನ ಸಿಇಎನ್ ಅಪರಾಧ ಪೊಲೀಸ್ ಠಾಣೆಯಲ್ಲಿ ಅಮೆರಿಕಾ ಮೂಲದ ಮಹಿಳೆ ಸೇರಿ ಐವರ ವಿರುದ್ಧ ದೂರು ದಾಖಲಿಸಿದ್ದಾರೆ.

ಜಗಳೂರು ತಾಲ್ಲೂಕು ಗಡಿಮಾಕುಂಟೆಯ ಬಿ. ಎಮ್. ವಿರುಪಾಕ್ಷಯ್ಯ ವಂಚನೆಗೊಳಗಾದ ಪೋಸ್ಟ್ ಮ್ಯಾನ್.

ದಾವಣಗೆರೆ ತಾಲ್ಲೂಕು ಅಣಜಿ ಗ್ರಾಮದಲ್ಲಿ ಗುತ್ತಿಗೆ ಅಧಾರದ ಮೇಲೆ ಪೋಸ್ಟ್ ಮ್ಯಾನ್ ಕೆಲಸ ಮಾಡುತ್ತಿದ್ದು, ಜ್ಯೋತಿಷಿ ಕುಟುಂಬವಾದ್ದರಿಂದ ಫೇಸ್ ಬುಕ್ ನಲ್ಲಿ ಜ್ಯೋತಿಷ್ಯದ ಗ್ರೂಪ್ ವೊಂದರಲ್ಲಿ ಸೇರಿದ್ದು, ಅದರಲ್ಲಿ ಅಮೆರಿಕಾದ ಕ್ಯಾಲಿಪೋರ್ನಿಯಾದ ರಾಕೆಲ್ ಡಿನಿಜ್ ಎಂಬ ಮಹಿಳೆ ತಮ್ಮ ವೈವಾಹಿಕ ಜೀವನದಲ್ಲಿ ಡೈವರ್ಸ್ ಸಮಸ್ಯೆ ಪರಿಹಾರದ ಬಗ್ಗೆ ಯಾರು ಸರಿಯಾದ ಪರಿಹಾರ ನೀಡುತ್ತಿಲ್ಲ ಎಂದು ಪೋಸ್ಟ್ ಮಾಡಿದ್ದರು. ಆಗ ನಾನು ಸಮಸ್ಯೆಗೆ ಪರಿಹಾರದ ಬಗ್ಗೆ ಸಲಹೆ ನೀಡಿದ್ದೆ. ಪುನಃ ಆ ಮಹಿಳೆಯು ಪೋಸ್ಟ್ ಮಾಡಿ ತನ್ನ ವೈವಾಹಿಕ ಜೀವನದಲ್ಲಿ ಡೈವರ್ಸ್ ಸಮಸ್ಯೆಗೆ ಸೂಕ್ತ ಪರಿಹಾರ ನೀಡಿರುವುದಾಗಿ ಬರೆದು ಒಳ್ಳೆಯದಾಗಿದ್ದರಿಂದ ಕಾಣಿಕೆಯಾಗಿ 20 ಸಾವಿರ ಡಾಲರ್ ಹಣವನ್ನು ನಿಮ್ಮ ಖಾತೆಗೆ ಕಳುಹಿಸುವುದಾಗಿ ಹೇಳಿ ಖಾತೆ ನಂಬರ್ ಹಾಗೂ ಬ್ಯಾಂಕಿನ ವಿವರ ನೀಡಲು ಕೇಳಿದಾಗ, ಖಾತೆಯುಳ್ಳ ಬ್ಯಾಂಕಿನ ಮಾಹಿತಿ ಕಳುಹಿಸಿದೆ. ನಂತರ ಆ ಮಹಿಳೆಯು ಹಣವನ್ನು ಖಾತೆಗೆ ಜಮಾ ಮಾಡಿರುವುದಾಗಿ ತಿಳಿಸಿದ್ದರು.

ಸ್ವಲ್ಪ ಸಮಯದ ನಂತರ ಅಪರಿಚಿತ ಮಹಿಳೆ ದೂರವಾಣಿ ಮುಖೇನ ಸಂಪರ್ಕಿಸಿ ನವದೆಹಲಿಯ ರಾಯಲ್ ಬ್ಯಾಂಕ್ ಆಫ್ ಸ್ಕಾಟ್ ಲ್ಯಾಂಡ್ ಸಿಬ್ಬಂದಿ ಎಂದು ಪರಿಚಿತಳಾಗಿ ನಿಮಗೆ ಪರಿಚಯವಿರುವ ರಾಕೆಲ್ ಡಿನಿಜ್ ಎಂಬ ಮಹಿಳೆಯು ನಿಮ್ಮ ಹೆಸರಿಗೆ 20 ಸಾವಿರ ಡಾಲರ್ ಹಣ ಕಳುಹಿಸಿರುವುದಾಗಿ ಹೇಳಿ ನಿಮ್ಮ ಹೆಸರಿಗೆ ಖಾತೆ ತೆರಯಬೇಕೆಂದು ನಂಬಿಸಿ ಖಾತೆಗೆ ಡೆಪಾಜಿಟ್ ರೂಪದಲ್ಲಿ ಹಣ ಜಮಾ ಮಾಡಬೇಕೆಂದು ಹಂತ ಹಂತವಾಗಿ ಸುಮಾರು 9 ಲಕ್ಷದ 20 ಸಾವಿರದಷ್ಟು ಹಣವನ್ನು ಆನ್ ಲೈನ್ ಮೂಲಕ ವಂಚಿಸಿರುವುದಾಗಿ ವಿರುಪಾಕ್ಷಯ್ಯ ದೂರಿದ್ದಾರೆ.

# ರಾಣೇಬೆನ್ನೂರಿನಲ್ಲಿ ಅರಸು ಜನ್ಮದಿನೋತ್ಸವ



ರಾಣೇಬೆನ್ನೂರು, ಆ. 21 - ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ 105 ನೇ ಜನ್ಮ ದಿನೋತ್ಸವವನ್ನು ಅವರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಮಾಡುವುದರ ಮೂಲಕ ಶಾಸಕ ಅರುಣಕುಮಾರ ಪೂಜಾರ ಉದ್ಘಾಟಿಸಿದರು.

ಅರಸು ಅವರು ಧ್ವನಿ ಇಲ್ಲದವರಿಗೆ ಧ್ವನಿ ನೀಡಿದರು. ಅಧಿಕಾರ ಅಂತಸ್ತಿನಲ್ಲಿ ಎಲ್ಲರಿಗೂ ಸಮಾನತೆ ನೀಡಿದ ಹರಿಕಾರ. ಅವರ ಸ್ಮರಣೆ ನಮ್ಮೆಲ್ಲರ ಕರ್ತವ್ಯ ಎಂದು ಶಾಸಕರು ಹೇಳಿದರು.

ಉತ್ತರ ಕರ್ನಾಟಕದ ಜನರಿಗೆ ಎಲ್ಲಾ ರೀತಿಯಲ್ಲೂ ಅವಕಾಶ ಕಲ್ಪಿಸಿ ನಾಡಿನಲ್ಲಿದ್ದ ಅಸಮಾನತೆಯನ್ನು ಕಡಿಮೆ ಮಾಡುವ ಪ್ರಯತ್ನ ನಡೆಸಿದ ಧೀಮಂತ ನಾಯಕ ದೇವರಾಜ ಅರಸು ಅವರು ಎಂದು ತಾಪಂ ಮಾಜಿ ಅಧ್ಯಕ್ಷ ನೀಲಕಂಠಪ್ಪ ಕುಸಗೂರ ಹೇಳಿದರು

ಕಾರ್ಯಕ್ರಮದಲ್ಲಿ ತಾ.ಪಂ. ಅಧ್ಯಕ್ಷೆ ಗೀತಾ ಲಮಾಣಿ, ಉಪಾಧ್ಯಕ್ಷೆ ಕಸ್ತೂರಿಮ ಹೊನ್ನಾಳಿ, ಜಿ.ಪಂ. ಸದಸ್ಯೆ ಮಂಗಳಗೌರಿ ಪೂಜಾರ, ಈ.ಓ.ಎಸ್.ಎಂ. ಕಾಂಬಳೆ, ಪೌರಾಯುಕ್ತ ಡಾ. ಮಹಾಂತೇಶ, ಇಲಾಖಾಧಿಕಾರಿ ಎಸ್. ಎಸ್. ಹಿರೇಮಠ ಮುಂತಾದವರಿದ್ದರು. ಹೆಚ್ಚು ಅಂಕ ಪಡೆದ ವಸತಿ ನಿಲಯದ ಎಸ್ಸೆಸ್ಸೆಲ್ಸಿ, ಪಿಯುಸಿ ವಿದ್ಯಾರ್ಥಿಗಳಿಗೆ ಹಾಗೂ ತರಬೇತಿ ಪಡೆದ ಫಲಾನುಭವಿಗಳಿಗೆ ಹೊಲಿಗೆ ಯಂತ್ರ ವಿತರಿಸಲಾಯಿತು.

## ಹೆಲ್ಪಿಂಗ್ ಹ್ಯಾಂಡ್ಸ್‌ನಿಂದ ಕುಂಬಳೂರು ಶಾಲೆಗೆ ಕೊಡುಗೆ



ಮಲೇಬೆನ್ನೂರು, ಆ.21- ಹೆಲ್ಪಿಂಗ್ ಹ್ಯಾಂಡ್ಸ್ ಚಾರಿಟೇಬಲ್ ಟ್ರಸ್ಟ್ ಬೆಂಗಳೂರು ವತಿಯಿಂದ ಎಕ್ಕೆಗೊಂದಿ ಮತ್ತು ಕುಂಬಳೂರು ಗ್ರಾಮಗಳ ಸರ್ಕಾರಿ ಶಾಲೆಗಳಿಗೆ ಸ್ಯಾನಿಟೈಸ್ ಹಾಗೂ ಥರ್ಮಲ್ ಸ್ಕ್ರೀನಿಂಗ್ ಮತ್ತು ಸ್ಪೀಕರ್‌ಗಳನ್ನು ಉಚಿತವಾಗಿ ವಿತರಿಸಲಾಯಿತು. ಸಂಸ್ಥೆ ಅಧ್ಯಕ್ಷ ಮೂರ್ತಿ ಹಾಗೂ ಕಾರ್ಯದರ್ಶಿ ಮಂಜುನಾಥ್ ವಿತರಣೆ ಮಾಡಿದರು. ಈ ಸಂದರ್ಭದಲ್ಲಿ ಕುಂಬಳೂರು ಶಾಲೆ ಎಸ್ ಡಿ ಎಂ ಸಿ ಅಧ್ಯಕ್ಷ ಎಂ. ಎಚ್. ಶರಣ್ ಹಾಗೂ ಶಿಕ್ಷಕರು ಹಾಜರಿದ್ದರು.

## ಮಾರ್ಗದ ಮಲ್ಲಿಕಾರ್ಜುನಪ್ಪ ಅವರಿಗೆ ಪತ್ನಿ ವಿಯೋಗ



ದಾವಣಗೆರೆ,ಆ.21- ಸಿರಿಗೆರೆಯ ಶ್ರೀಮತ್ ಸಾಧು ಸದ್ಧರ್ಮ ವೀರಶೈವ ಸಮಾಜದ ಉಪಾಧ್ಯಕ್ಷರಾದ ಕಡೂರು ತಾಲ್ಲೂಕು ಬೀರೂರಿನ ಮಾರ್ಗದ ಎಂ. ಮಲ್ಲಿಕಾರ್ಜುನಪ್ಪ (ಅಣ್ಣಯ್ಯ) ಅವರು ಧರ್ಮಪತ್ನಿ ಶ್ರೀಮತಿ ಶಾಂತಮ್ಮ ಅವರು ಇಂದು ಸಂಜೆ 3.30ರ ಸಮಯದಲ್ಲಿ ನಿಧನರಾದರು. ಶಾಂತಮ್ಮ ಮಾಜಿ ಶಾಸಕ ಬೆನಕನಹಳ್ಳಿಯ ದಿ. ಡಿ.ಜಿ. ಬಸವನಗೌಡ ಮತ್ತು ಹೊನ್ನಾಳಿ ಮಾಜಿ ಶಾಸಕ ಡಿ.ಜಿ.ಶಾಂತನಗೌಡ ಅವರ ಸಹೋದರಿ. ಮೃತರಿಗೆ ಸುಮಾರು 78 ವರ್ಷ ವಯಸ್ಸಾಗಿತ್ತು. ಪತಿ, ಮೂವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ನಾಳೆ ದಿನಾಂಕ 22ರ ಶನಿವಾರ ಮಧ್ಯಾಹ್ನ 12 ಗಂಟೆಗೆ ಬೀರೂರಿನಲ್ಲಿರುವ ಅವರ ತೋಟದಲ್ಲಿ ನಡೆಯಲಿದೆ.

## ಸಿ.ಹೆಚ್. ಮನೋಹರರಾವ್ ಘಾಟ್ಗೆ ನಿಧನ



ದಾವಣಗೆರೆ ಆಂಜನೇಯ ಬಡಾವಣೆ 5ನೇ ಕ್ರಾಸ್ ವಾಸಿ, ದಿ.ಸಿ.ಎಸ್.ಹನುಮಂತರಾವ್ ಘಾಟ್ಗೆ ಇವರ ಪುತ್ರ, **ಕೊಟ್ರೇಶ್ವರ ಲಾರಿ ಟ್ರಾನ್ಸ್‌ಪೋರ್ಟ್** ಮಾಲೀಕರಾಗಿದ್ದ

**ಸಿ.ಹೆಚ್. ಮನೋಹರರಾವ್ ಘಾಟ್ಗೆ** (56)

ಅವರು ದಿನಾಂಕ : 21.08.2020ರಂದು ಶುಕ್ರವಾರ ನಿಧನರಾಗಿದ್ದಾರೆ. ಪತ್ನಿ, ಓರ್ವ ಪುತ್ರ, ಸೊಸೆಯಂದಿರು, ಸಹೋದರರು, ಸಹೋದರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 21.08.2020 ರಂದು ನಗರದ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಿತು.

ಇಂತಿ ದುಃಖತಪ್ತರು : **ಪತ್ನಿ: ಶ್ರೀಮತಿ ಮಮತಾ ಬಾಯಿ, ಪುತ್ರ : ಮನೀಷ್ ಘಾಟ್ಗೆ ಮತ್ತು ಕುಟುಂಬ ವರ್ಗದವರು.**

॥ಶ್ರೀ ಅಂಬಾಭವಾನಿ ಪ್ರಸನ್ನ ॥

## ವೈಕುಂಠ ಸಮಾರಾಧನೆ ಆಹ್ವಾನ



ದಾವಣಗೆರೆ ಸಿಟಿ, ನರಸರಾಜ ಪೇಟೆ ವಾಸಿ

**ಶ್ರೀಮತಿ ಕಸ್ತೂರಿಬಾಯಿ**

**ಶ್ರೀ ಶಂಕರ್‌ರಾವ್ ನವಲೆ**

ಇವರು ಮಾಡುವ ವಿಜ್ಞಾಪನೆಗಳು.

ನನ್ನ ಸಹೋದರನಾದ **ಶ್ರೀ ಶ್ರೀನಿವಾಸ ನವಲೆ** ಇವರ ಧರ್ಮಪತ್ನಿಯಾದ

**ಶ್ರೀಮತಿ ಗೀತಾಬಾಯಿ ನವಲೆ**

ಇವರು ದಿನಾಂಕ : 13.08.2020ನೇ ಗುರುವಾರ ಮಧ್ಯಾಹ್ನ 1.34ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ದಿ.:22.08.2020ನೇ ಶನಿವಾರ ಬೆಳಿಗ್ಗೆ 9.00 ಗಂಟೆಗೆ 10ನೇ ದಿನದ ದಶಪಿಂಡ ಕಾರ್ಯಕ್ರಮವನ್ನು ಹರಿಹರ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನದ ಹತ್ತಿರ ನದಿದಂಡೆಯಲ್ಲಿ ನೇರವೇರಿಸಲಾಗುವುದು ಹಾಗೂ ದಿ.:23.8.2020 ನೇ ಭಾನುವಾರದಂದು 11ನೇ ದಿನದ

**'ವೈಕುಂಠ ಸಮಾರಾಧನೆ'ಯನ್ನು**

ಭಾವಸಾರ ಸಭಾ ಭವನ, ವಿಠ್ಠಲ ಮಂದಿರ, ಮಹರಾಜ ಪೇಟೆ, ದಾವಣಗೆರೆಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ..

ಇಂತಿ ದುಃಖತಪ್ತರು :

**ನವಲೆ ವಂಶಸ್ಥರು ಹಾಗೂ ಅಪಾರ ಬಂಧು-ಮಿತ್ರರು**

ಫೋ.: 94484 43181, 86602 09345

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 11.8.2020ರಂದು ನಿಧನರಾದ ಉಪ್ಪಾರ ಜನಾಂಗದ ಸಂಘಟಕರೂ ಹಾಗೂ ಅಸಿಸ್ಟೆಂಟ್ ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ ಆಗಿದ್ದ ಹರಪನಹಳ್ಳಿ ತಾಲ್ಲೂಕಿನ ಹಳೇ ಓಬಳಾಪುರದ

**ಶ್ರೀ ಎ. ಪರಶುರಾಮ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.


ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.

**ಎನ್.ಎಸ್. ಚಂದ್ರಣ್ಣ,**

ಅಧ್ಯಕ್ಷರು ಮತ್ತು ಸದಸ್ಯರು

**ದಾವಣಗೆರೆ ಜಿಲ್ಲಾ ಭಗೀರಥ ನೌಕರರ ಸಂಘ ಹಾಗೂ ಉಪ್ಪಾರ ಸಮಾಜ ಬಾಂಧವರು**


## ಅಲ್‌ಹಾಜ್ ಹೆಚ್. ಬಾಷಾಸಾಬ್ ನಿಧನ



ದಾವಣಗೆರೆ ನಗರ ಶಂಕರ ವಿಹಾರ ಬಡಾವಣೆ ವಾಸಿ, **ಅಲ್‌ಹಾಜ್ ಹೆಚ್.ಬಾಷಾಸಾಬ್** ಅವರು ದಿನಾಂಕ 21.08.2020 ಶುಕ್ರವಾರ ಸಂಜೆ 5 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 76 ವರ್ಷ ವಯಸ್ಸಾಗಿತ್ತು. ಪತ್ನಿ, ಮೂವರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 22.8.2020ರ ಶನಿವಾರ ಬೆಳಿಗ್ಗೆ 10 ಗಂಟೆಗೆ ನಗರದ ಪಿ.ಬಿ.ರಸ್ತೆಯ ಹಳೇ ಖಬರಸ್ತಾನದಲ್ಲಿ ನೆರವೇರಲಿದೆ.

- ದುಃಖತಪ್ತ ಕುಟುಂಬ ವರ್ಗ

## ಹನುಮಂತರಾವ್ ಕಾಟೆ ನಿಧನ



ದಾವಣಗೆರೆ ದುರ್ಗಾಂಬಿಕಾ ಸರ್ಕಲ್, ಶಿವಾಜಿ ನಗರದ ದಿಳ್ಳೆಪ್ಪನ ಗಲ್ಲಿ ವಾಸಿ ಎಂ.ಕೆ. ಹನುಮಂತರಾವ್ ಕಾಟೆ (90) ಅವರು ದಿನಾಂಕ 21.8.2020ರ ಶುಕ್ರವಾರ ಮಧ್ಯಾಹ್ನ 12.20ಕ್ಕೆ ನಿಧನರಾದರು. ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿಯನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 22.8.2020ರ ಶನಿವಾರ ಬೆಳಿಗ್ಗೆ 11 ಗಂಟೆಗೆ ರುದ್ರಭೂಮಿಯಲ್ಲಿ ನಡೆಯಲಿದೆ.

## ಸ್ಯಾಮುಯೆಲ್ ಎಸ್. ಪ್ರಕಾಶ್ ನಿಧನ



ದಾವಣಗೆರೆ ಎಂ.ಸಿ.ಸಿ. 'ಎ' ಬ್ಲಾಕ್ 4ನೇ ಮೇನ್, 4ನೇ ಕ್ರಾಸ್ ವಾಸಿ

**ದಿ॥ ಸುಮತಿಪಾಲ್ ಅವರ ಪುತ್ರ**

**ಶ್ರೀ ಸ್ಯಾಮುಯೆಲ್ ಎಸ್.ಪ್ರಕಾಶ್** (70)


ಅವರು ದಿ: 21-8-2020ರ ಶುಕ್ರವಾರ ಬೆಳಿಗ್ಗೆ 9.00 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪತ್ನಿ, ಓರ್ವ ಪುತ್ರ, ಸೊಸೆ, ಮೊಮ್ಮಗ, ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 21-8-20ರ ಶುಕ್ರವಾರದಂದೇ ಸಂಜೆ 6 ಗಂಟೆಗೆ ನಗರದ ಎಸ್.ಎಸ್.ಆಸ್ಪತ್ರೆ ಹಿಂಭಾಗದಲ್ಲಿರುವ ಕ್ರೈಸ್ತ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

ದುಃಖತಪ್ತ ಕುಟುಂಬ ವರ್ಗ

ಪತ್ನಿ : **ಶ್ರೀಮತಿ ಮಂಜುಳಾ ಪ್ರಕಾಶ್ ಮತ್ತು ಕುಟುಂಬದವರು**

**ಮೊ: 99646 92823**

## ಅಸಗೋಡು ಅನ್ನಪೂರ್ಣಮ್ಮ ನಿಧನ



ಜಗಳೂರು ತಾಲ್ಲೂಕು ಅಸಗೋಡು ಗ್ರಾಮದ ವಾಸಿ ದೊಡ್ಡ ಬಸವನಾಳು ಶಂಭುಲಿಂಗಪ್ಪನರ ಧರ್ಮಪತ್ನಿ ಶ್ರೀಮತಿ ಅನ್ನಪೂರ್ಣಮ್ಮ (65) ದಿನಾಂಕ 21.08.2020ರಂದು ಶುಕ್ರವಾರ ಮಧ್ಯಾಹ್ನ 3.10ಕ್ಕೆ ನಿಧನರಾಗಿದ್ದಾರೆ. ಪತಿ, ಇಬ್ಬರು ಪುತ್ರರು, ಮೂವರು ಪುತ್ರಿಯರು ಅಪಾರ ಬಂಧ-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 22.08.2020ರ ಶನಿವಾರ ಮಧ್ಯಾಹ್ನ 12 ಗಂಟಗೆ ಅಸಗೋಡು ಗ್ರಾಮದಲ್ಲಿ ನೆರವೇರಿಲಾಗುವುದು.

## ಕತ್ತಲಗೆರೆ ಶಾರದಮ್ಮ ನಿಧನ



ದಾವಣಗೆರೆ ಎಂ.ಸಿ.ಸಿ 'ಬಿ' ಬ್ಲಾಕ್ 2ನೇ ಮೇನ್ 3ನೇ ಕ್ರಾಸ್ ವಾಸಿ, ದಿ. ಬಸವನಗೌಡ ಇವರ ಧರ್ಮಪತ್ನಿ ಶ್ರೀಮತಿ ಕತ್ತಲಗೆರೆ ಶಾರದಮ್ಮ (74) ಅವರು ದಿನಾಂಕ 20.08.2020ರಂದು ಗುರುವಾರ ನಿಧನರಾಗಿದ್ದಾರೆ. ಇಬ್ಬರು ಪುತ್ರರು, ಓರ್ವ ಪುತ್ರಿ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 20.08.2020ರ ಗುರುವಾರ ದಾವಣಗೆರೆ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

## ನೀಲಗುಂದ ಶಿವಣ್ಣ ನಿಧನ




ದಾವಣಗೆರೆ ಭದ್ರ ಕಾಲೋನಿ ಜಯವಿಭವ ನಿಲಯ ವಾಸಿ, ನೀಲಗುಂದ ಶಿವಣ್ಣ (70) ದಿನಾಂಕ 21.08.2020ರ ಶುಕ್ರವಾರ 5 ಗಂಟೆಗೆ ಹೃದಯಾಘಾತ ದಿಂದ ನಿಧನರಾದರು. ಇಬ್ಬರು ಪುತ್ರರು, ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯ ಕ್ರಿಯೆಯು ದಿನಾಂಕ 22.08.2020ರ ಶನಿವಾರ ಬೆಳಿಗ್ಗೆ 10 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಲಿದೆ.

## ಕೆ.ಎಸ್. ಅನ್ವರಪಾಷ ನಿಧನ



ದಾವಣಗೆರೆ ಕುವೆಂಪುನಗರ ಎಂ.ಸಿ.ಸಿ 'ಬಿ' ಬ್ಲಾಕ್ (#3993/43) 20ನೇ ಮೇನ್, 21ನೇ ಕ್ರಾಸ್ ವಾಸಿ, ಕೆ.ಎಸ್. ಅನ್ವರಪಾಷ (74) ಅವರು ದಿನಾಂಕ:21.08.2020 ರಂದು ಶುಕ್ರವಾರ ರಾತ್ರಿ 8.30ಕ್ಕೆ ನಿಧನರಾಗಿದ್ದಾರೆ. ಪತ್ನಿ, ಓರ್ವ ಪುತ್ರ, ಸೊಸೆ, ಮೊಮ್ಮಕ್ಕಳು ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 22.08.2020ರ ಶನಿವಾರ ಬೆಳಿಗ್ಗೆ 11 ಗಂಟೆಗೆ ನಗರದ ಪಿ.ಬಿ.ರಸ್ತೆ ಹಳೇ ಖಬರಸ್ತಾನದಲ್ಲಿ ನೆರವೇರಲಿದೆ.

## ಕೈಲಾಸ ಶಿವಗಣಾರಾಧನೆ ಆಹ್ವಾನ



**ಶ್ರೀ ಮುಗದ ಬಸವರಾಜಪ್ಪ**

**(ಅಕ್ಕಮಹಾದೇವಿ ಸಮಾಜದ ಸಹಾಯಕ ವ್ಯವಸ್ಥಾಪಕರು)**

ಇವರು ದಿನಾಂಕ : 15.08.2020ರ ಶನಿವಾರದಂದು ನಿಧನರಾದ ಪ್ರಯುಕ್ತ

**'ಕೈಲಾಸ ಶಿವಗಣಾರಾಧನೆ'ಯನ್ನು**

**ದಿನಾಂಕ : 23.08.2020ರ ಭಾನುವಾರದಂದು ಮಧ್ಯಾಹ್ನ 12.30ಕ್ಕೆ ಕೆಟಿಜೆ ನಗರ, 2ನೇ ತಿರುವಿನಲ್ಲಿರುವ ಮೃತರ ಸ್ವಗೃಹದಲ್ಲಿ**

ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತ ಕುಟುಂಬ ವರ್ಗ :

ಪತ್ನಿ : **ಸಾವಿತ್ರಮ್ಮ ಮತ್ತು ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ಸಹೋದರರು ಮತ್ತು ಸಹೋದರಿಯರು, ಮುಗದ ವಂಶಸ್ಥರು ಹಾಗೂ ಬಂಧು-ಮಿತ್ರರು ಫೋ. : 9844765830**

## ಕೈಲಾಸ ಶಿವಗಣಾರಾಧನೆ ಆಹ್ವಾನ



ಹರಿಹರ ತಾಲ್ಲೂಕು ಸಾರಥಿ ಗ್ರಾಮದ ವಾಸಿ

**ಶ್ರೀ ಕೋಟೇಗೌಡ್ರು ಮಲ್ಲಿಕಾರ್ಜುನಪ್ಪನವರು ಮತ್ತು ಮಕ್ಕಳು**

**ಇವರು ಮಾಡುವ ವಿಜ್ಞಾಪನೆಗಳು.**

ದಿನಾಂಕ : 15.08.2020ನೇ ಶನಿವಾರ ಬೆಳಿಗ್ಗೆ 7.30ಕ್ಕೆ ನನ್ನ ದ್ವಿತೀಯ ಪುತ್ರನಾದ, ಸಾರಥಿಯಲ್ಲಿನ **ಶ್ರೀ ಶೈಲ ಅಗ್ರಿ ಕ್ಲಿನಿಕ್ ಮಾಲೀಕರಾದ**

**ಶ್ರೀ ಕೆ.ಎಂ. ರುದ್ರೇಶ,** ಬಿ.ಎಸ್.ಸಿ. ಅಗ್ರಿ

ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**'ಕೈಲಾಸ ಶಿವಗಣಾರಾಧನೆ'ಯನ್ನು**

**ದಿನಾಂಕ : 23.08.2020ನೇ ಭಾನುವಾರ ಬೆಳಿಗ್ಗೆ ಹರಿಹರ ತಾಲ್ಲೂಕಿನ ಸಾರಥಿ ಗ್ರಾಮದಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುತ್ತಾರೆ.** ತಾವುಗಳು ಆಗಮಿಸಿ ಮೃತರ ಆತ್ಮಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :

**ಮೃತರ ಧರ್ಮಪತ್ನಿ, ಮಕ್ಕಳು ಹಾಗೂ ಕೋಟೇಗೌಡ್ರು ವಂಶಸ್ಥರು ಸಾರಥಿ ಮತ್ತು ಬಂಧು-ಮಿತ್ರರು, ಫೋ. : 89048 98654**

## ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ನಿಟ್ಟುವಳ್ಳಿ, ಹೊಸ ಬಡಾವಣೆ ವಾಸಿ, ಶ್ರೀಮತಿ ಜಿ.ರುದ್ರಮ್ಮನವರು ಮತ್ತು ಮಕ್ಕಳು ಇವರು ಮಾಡುವ ವಿಜ್ಞಾಪನೆಗಳು. ದಿನಾಂಕ 16.08.2020ನೇ ಭಾನುವಾರ ಬೆಳಗಿನ ಜಾವ ನನ್ನ ಪೂಜ್ಯ ಪತಿಯವರಾದ

**ಜಿ.ರಾಮನಗೌಡ**

ನಿವೃತ್ತ ರೆವಿನ್ಯೂ ಇನ್ಸ್‌ಪೆಕ್ಟರ್

ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**'ಕೈಲಾಸ ಶಿವಗಣಾರಾಧನೆ'ಯನ್ನು**

**ದಿನಾಂಕ 24.08.2020ನೇ ಸೋಮವಾರ ಬೆಳಿಗ್ಗೆ ಧೂಳೇಹೊಳೆ ಮೃತರ ಸ್ವಗ್ರಾಮದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಈ ಕಾರ್ಯಕ್ರಮಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.**

ಇಂತಿ ದುಃಖತಪ್ತರು

**ಮೃತರ ಧರ್ಮಪತ್ನಿ , ಮಕ್ಕಳು ಹಾಗೂ ಗೌಡ್ರ ವಂಶಸ್ಥರು ಮತ್ತು ಬಂಧು-ಮಿತ್ರರು.**

**95356 11486 93410 06952**


ಶ್ರೀಯುತರಿಗೆ ಜನ್ಮದಿನದ ಶುಭಾಶಯಗಳು
ನಮ್ಮೆಲ್ಲಾ ಗ್ರಾಹಕರಿಗೆ ಗೌರಿಗಣೇಶ ಹಬ್ಬದ
ಹಾರ್ದಿಕ ಶುಭಾಶಯಗಳು
ದಾವಣಗೆರೆ ಷುಗರ್ ಕಂಪನಿಯ ಕಾರ್ಯನಿರ್ವಾಹಕ ನಿರ್ದೇಶಕರು, ಖ್ಯಾತವಾಣೀಜ್ಯೋದ್ಯಮಿಗಳು ಪ್ರಖ್ಯಾತ ಕೈಗಾರಿಕೋದ್ಯಮಿಗಳು ಆಗಿರುವ ಶ್ರೀಯುತರಾದ ಎಸ್.ಎಸ್. ಗಣೇಶಣ್ಣನವರು ತಮ್ಮ ನವ ವಸಂತಕ್ಕೆ ಪಾದಾರ್ಪಣೆ ಮಾಡುತ್ತಿರುವ ಈ ಶುಭ ಸಂದರ್ಭದಲ್ಲಿ ಶ್ರೀಯುತರಿಗೆ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು. ಭಗವಂತನು ಆರೋಗ್ಯ, ಐಶ್ವರ್ಯ, ನೆಮ್ಮದಿಯನ್ನು ದಯಪಾಲಿಸಲಿ.
ನೆಕ್ಕಂಟಿ ಸುರೇಶ್
NEKKANTI
ಶ್ರೀ ವೆಂಕಟೇಶ್ವರ ಆಗ್ರೋ ಸರ್ವಿಸ್
PREET
ಅಥೋರೈಸಡ್ ಡೀಲರ್, ಕರ್ನಾಟಕ & ಗೋವಾ ಸ್ಟೇಟ್ ಪ್ರೀತ್ ಸೇಲ್ಸ್ ಅಂಡ್ ಸರ್ವೀಸ್ ಸ್ಪೇರ್ ಪಾರ್ಟ್ಸ್
ನೆಕ್ಕಂಟಿ ಫಾರ್ಮ್ ಎಕ್ಯುಪ್‌ಮೆಂಟ್ಸ್, ಕೃಷಿ ಉಪಕರಣಗಳ ತಯಾರಕರು
Tirumala Agency


ಅಣ್ಣನ ಜನ್ಮದಿನಕ್ಕೆ
ಶುಭಕಾಮನೆಗಳು
ಶ್ರೀನಿವಾಸ್ ಶಿವಗಂಗಾ
ಗೌರಿ ಗಣೇಶ ಚತುರ್ಥಿಯಂದು ತಮ್ಮ ಜನ್ಮದಿನ ಆಚರಿಸಿಕೊಳ್ಳುತ್ತಿರುವ, ಗಣೇಶಣ್ಣ ಎಂದೇ ದೇವನಗರಿಯಲ್ಲಿ ಖ್ಯಾತಿಯಾಗಿರುವ, ವಾಣಿಜ್ಯೋದ್ಯಮಿಗಳು, ಇಂದಿರಾ ಪ್ರಿಯದರ್ಶಿನಿ ಪ್ರಶಸ್ತಿ ಪುರಸ್ಕೃತರು ನಮ್ಮ ಮಾರ್ಗದರ್ಶಕರು, ಸ್ನೇಹ ಜೀವಿಗಳು ಆಗಿರುವ ನಮ್ಮ ಪ್ರೀತಿಯ ಗಣೇಶಣ್ಣ ಅವರಿಗೆ ಹುಟ್ಟು ಹಬ್ಬದ ಶುಭಾಶಯಗಳು.
ಭಗವಂತನು ಶ್ರೀಯುತರಿಗೆ ಇನ್ನೂ ಹೆಚ್ಚಿನ ಆರೋಗ್ಯ, ನೆಮ್ಮದಿಯನ್ನು ದಯಪಾಲಿಸುವುದರ ಮೂಲಕ ಯುವ ಜನತೆಗೆ ಉದ್ಯಮದಲ್ಲಿ ಸ್ಫೂರ್ತಿಯ ಸೆಲೆಯಾಗಲಿ ಎಂದು ಮನಪೂರ್ವಕವಾಗಿ ಪ್ರಾರ್ಥಿಸುವ.
ಎಸ್.ಎಸ್.ಜಿ. ಕನ್ಸ್‌ಟ್ರಕ್ಷನ್ಸ್ ಹೆಬ್ಬಾಳ್,
ಎಸ್.ಎಸ್.ಜಿ. ಟ್ರಾನ್ಸ್‌ಪೋರ್ಟ್ಸ್,
ಜಿ.ಎಂ.ಎಂ. ಎಂಟರ್‌ಪ್ರೈಸಸ್ಸ್,
ಎಸ್.ಎಸ್.ಜಿ. ರೋಡ್ ಲೈನ್ಸ್,
ಶಿವ ಇನ್‌ಫ್ರಾಟೆಕ್, ಶಿವ ಎಂಟರ್‌ಪ್ರೈಸಸ್,
ಶಿವ ಆರ್.ಎಂ.ಸಿ. ಸ್ಟೇಡಿಯಂ ಫ್ರೇಂಡ್ಸ್ ಹಾಗೂ
ಶಿವಗಂಗಾ ಗ್ರೂಪ್ಸ್, ವಿದ್ಯಾನಗರ ದಾವಣಗೆರೆ.
ಬಸವರಾಜು ವಿ. ಶಿವಗಂಗಾ
ಹಿರೇಕೋಗಲೂರು, ಚನ್ನಗಿರಿ ವಿಧಾನಸಭಾ ಕ್ಷೇತ್ರ.
ಅಧ್ಯಕ್ಷರು, ಜಿಲ್ಲಾ ಕಿಸಾನ್ ಕಾಂಗ್ರೆಸ್, ದಾವಣಗೆರೆ.


BAPUJI EDUCATIONAL ASSOCIATION (R)
BAPUJI SMT. PARVATHAMMA SHAMANUR SHIVASHANKARAPPA P U COLLEGE
&
SMT. P S SHIVASHANKARAPPA ENGLISH MEDIUM RESIDENTIAL SCHOOL (CAIE)
CBSE/ IGCSE, PUC- (SCIENCE & COMMERCE)
TOLAHUNSE, DAVANGERE.
23 YEARS OF EXCELLENCE
Residential School & College on 45acres with Modern Amenities for both Boys and Girls
INAUGURATION OF NEW ACADEMIC BLOCK
Happy Birthday to
our Hon. Chairman
Shri S. S. GANESH
Shri Shamanur Shivashankarappa
Hon. Secretary
Shri S. S. Ganesh
Hon. Chairman
Shri S. S. Mallikarjun
Hon. Joint Secretary
PSSEMRS
ADMISSION OPENS FOR
P. U. C.
(SCIENCE & COMMERCE, JEE / NEET)
2020-21
With The Best Wishes From
GOVERNING COUNCIL MEMBERS OF BEA
SHRI MANJUNATHA RANGARAJU
DEAN
PSSEMRS & PU COLLEGE, BHPEMS, Dr. SSNPS
SMT. J. S. VANITHA
PRINCIPAL,
PSSEMRS & PU COLLEGE
TO KNOW MORE
+91-9900069255
Shri Bisleri Gangadhar,
Class A Civil Contractor
Constructed By :
NANDI ASSOCIATES
Sd/-
Chairman

# ಕೇಂದ್ರ ಸರ್ಕಾರ ಕಾಯ್ದೆ ತಿದ್ದುಪಡಿ ಬಿಟ್ಟು ಅಭಿವೃದ್ಧಿ ಚಿಂತನೆ ಮಾಡಲಿ

## ಹರಿಹರ : ಜನವಿರೋಧಿ ನೀತಿ ಖಂಡಿಸಿ ನಡೆದ ಪ್ರತಿಭಟನೆಯಲ್ಲಿ ಶಾಸಕ ಎಸ್. ರಾಮಪ್ಪ

ಹರಿಹರ, ಆ. 21- ಕೇಂದ್ರ ಸರ್ಕಾರ ಭೂ ಸುಧಾರಣೆ ಕಾಯ್ದೆ ತಿದ್ದುಪಡಿ ಸೇರಿದಂತೆ ಹಲವಾರು ತಿದ್ದುಪಡಿ ಮಾಡುವುದಕ್ಕೆ ಕೈ ಹಾಕಿರುವುದು ರೈತರ ವಿರುದ್ಧವಾಗಿದ್ದು, ಇದು ಸರಿಯಾದ ಬೆಳವಣಿಗೆಯಲ್ಲ. ಸರ್ಕಾರ ಈ ಪ್ರವೃತ್ತಿಯನ್ನು ಕೈ ಬಿಟ್ಟು ಅಭಿವೃದ್ಧಿ ಕಡೆ ಚಿಂತನೆ ಮಾಡುವುದು ಸೂಕ್ತ ಎಂದು ಶಾಸಕ ಎಸ್. ರಾಮಪ್ಪ ಹೇಳಿದರು.



ನಗರದ ತಹಶೀಲ್ದಾರ್ ಕಚೇರಿ ಮುಂಭಾಗದಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರದ ಜನ ವಿರೋಧಿ ನೀತಿಯನ್ನು ಖಂಡಿಸಿ ನಿನ್ನೆ ಹಮ್ಮಿಕೊಂಡಿದ್ದ ಧರಣಿ ಸತ್ಯಾಗ್ರಹದ ವೇಳೆ ಅವರು ಮಾತನಾಡಿದರು.

ದೇಶದ ಜನತೆಗೆ ಭೂ ಸುಧಾರಣೆ ತಿದ್ದುಪಡಿ, ಎಪಿಎಂಸಿ ತಿದ್ದುಪಡಿ, ಕಾರ್ಮಿಕ ಕಾಯ್ದೆ ತಿದ್ದುಪಡಿ ಸೇರಿದಂತೆ ದಿನಕ್ಕೊಂದು ಇಲಾಖೆಯನ್ನು ತಮಗೆ ಇಷ್ಟ ಬಂದಂತೆ ತಿದ್ದುಪಡಿ ಮಾಡಲಾಗುತ್ತಿದೆ. ಬಿಜೆಪಿ ಪಕ್ಷದವರು ತಮ್ಮ ಅನುಕೂಲಕ್ಕೆ ಬೇಕಾಗುವ ಹಾಗೆ ಆಡಳಿತದ ಬದಲಾವಣೆ ಮಾಡಿಕೊಳ್ಳುತ್ತಿದ್ದಾರೆಯೇ ವಿನಃ ಸಾರ್ವಜನಿಕರ ಒಳಿತಿಗಾಗಿ ಯಾವುದೇ ರೀತಿಯ ತಿದ್ದುಪಡಿಯನ್ನು ಮಾಡುವುದಕ್ಕೆ ಮುಂದಾಗಿಲ್ಲ ಎಂದು ಆರೋಪಿಸಿದರು.

ಎಪಿಎಂಸಿ ಸದಸ್ಯ ಮಂಜುನಾಥ್ ಪಾಟೀಲ್ ಕುಮಾರನಹಳ್ಳಿ ಮಾತನಾಡಿ, ರಾಜ್ಯದಲ್ಲಿ 160 ಕೃಷಿ ಉತ್ಪನ್ನ ಮಾರುಕಟ್ಟೆಗಳು, 250 ಉಪ ಮಾರುಕಟ್ಟೆ ಇದ್ದು ವಾರ್ಷಿಕ 600 ಕೋಟಿ ತೆರಿಗೆ ರೂಪದಲ್ಲಿ ಸಂಗ್ರಹಿಸುತ್ತಿತ್ತು. ಸೆಕ್ಷನ್ 8 ಮತ್ತು 117 ತಂದಿರುವ ತಿದ್ದುಪಡಿಯಿಂದಾಗಿ ದೊಡ್ಡ ವ್ಯಾಪಾರಿಗಳು ಮತ್ತು ಕಂಪನಿಗಳು ನೇರವಾಗಿ ರೈತರಿಂದ ಖರೀದಿಸಲು ಅವಕಾಶ ಮಾಡಿಕೊಡಲಾಗಿದೆ. ಮಧ್ಯವರ್ತಿಗಳು ಮತ್ತು ದಲ್ಲಾಳಿಗಳನ್ನು ದೂರವಿಡಬೇಕು ಎಂಬ ಉದ್ದೇಶ ವಿಫಲವಾಗಿ ಮತ್ತೆ ದಲ್ಲಾಳಿಗಳ, ಮಧ್ಯವರ್ತಿಗಳ ಮರ್ಜಿಗೆ, ದಬ್ಬಾಳಿಕೆಗೆ ರೈತರು ಬಲಿಯಾಗುವ ಎಲ್ಲಾ ಸಾಧ್ಯತೆಗಳು ಇವೆ. ರೈತರು ಮೋಸ ವಂಚನೆಗೆ ಒಳಗಾದರೆ ಬಗೆಹರಿಸುವ ಯಾವುದೇ ವ್ಯವಸ್ಥೆ ಇಲ್ಲದೆ ಶೋಷಣೆಗೊಳಗಾಗುವ ಸಾಧ್ಯತೆಗಳು ಇದೆ ಎಂದು ಆತಂಕ ವ್ಯಕ್ತಪಡಿಸಿದರು.

ಜಿ.ಪಂ. ಮಾಜಿ ಸದಸ್ಯ ಎಂ. ನಾಗೇಂದ್ರಪ್ಪ ಮಾತನಾಡಿ, ಕೇಂದ್ರ ಮತ್ತು ರಾಜ್ಯದ ಬಿಜೆಪಿ ಸರ್ಕಾರ ಅಕ್ರಮವಾಗಿ ಹಣವನ್ನು ಗಳಿಸಲು ಭೂ ಸುಧಾರಣೆ ಕಲಾಂ 63 ತಿದ್ದುಪಡಿ ಕೆಲಸಕ್ಕೆ ಕೈ ಹಾಕಿದೆ. ಹಸಿರು ಬಣ್ಣದ ಶಾಲು ಹಾಕಿಕೊಂಡು ರೈತರಿಗೆ ಅನುಕೂಲ ಮಾಡುವುದಾಗಿ ಹೇಳಿದ್ದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ರೈತರಿಗೆ ಬೆನ್ನಿಗೆ ಚಾಕು ಹಾಕುವ ಕೆಲಸವನ್ನು ಮಾಡುವುದರ ಜೊತೆಯಲ್ಲಿ ಎಲ್ಲಾ ವರ್ಗದ ರೈತ ಸಮುದಾಯಕ್ಕೆ ಅನ್ಯಾಯ ಮಾಡುವುದಕ್ಕೆ ಮುಂದಾಗಿದ್ದಾರೆ ಎಂದು ಹೇಳಿದರು.

ಮುಖಂಡ ಜಿಗಳಿ ಆನಂದಪ್ಪ ಮಾತನಾಡಿ, ರಾಜ್ಯದ ಆರೋಗ್ಯ ಸೇವೆ ಕುಸಿದು ಬಿದ್ದಿದ್ದು ಕೊರೊನಾ ಬಾಧಿತರು ಆಸ್ಪತ್ರೆಯಲ್ಲಿ ನರಕ ಯಾತನೆ ಅನುಭವಿಸುತ್ತಿದ್ದಾರೆ. ಇತರೆ ರೋಗಗಳಿಂದ ನರಳುತ್ತಿರುವ ರೋಗಿಗಳಿಗೆ ಚಿಕಿತ್ಸೆಗೆ ಅವಕಾಶ ಸಿಗುತ್ತಿಲ್ಲ. ಕೊರೊನಾ ವಿಚಾರದಲ್ಲಿ ಸರ್ಕಾರ ವ್ಯಾಪಕವಾಗಿ ಭ್ರಷ್ಟಾಚಾರ ನಡೆಸುತ್ತಿದೆ. ಈ ಕುರಿತು ಕೇಂದ್ರ ಸರ್ಕಾರವು ಗಮನವನ್ನು ಹರಿಸುವುದನ್ನು ಬಿಟ್ಟು ರೈತರಿಗೆ ತೊಂದರೆ ಕೊಡುವ ಉದ್ದೇಶದಿಂದ ಭೂ ಸುಧಾರಣೆ ತಿದ್ದುಪಡಿ ತರುವುದಕ್ಕೆ ಮುಂದಾಗಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ. ಇದರಿಂದ ಮುಂದೆ ಅವರು ದೊಡ್ಡ ಪ್ರಮಾಣದಲ್ಲಿ ರೈತರ ವಿರೋಧವನ್ನು ಎದುರಿಸಬೇಕಾಗುತ್ತದೆ ಎಂದು ಹೇಳಿದರು.

ಮಾಜಿ ನಗರಸಭೆ ಅಧ್ಯಕ್ಷ ಬಿ. ರೇವಣಸಿದ್ದಪ್ಪ, ಕೆ.ಪಿ ಗಂಗಾಧರ್ ಮಲೇಬೆನ್ನೂರು, ಎಲ್. ಬಿ. ಹನುಮಂತಪ್ಪ, ಅಭಿದಾಲಿ, ಸಿ.ಎನ್. ಹುಲಗೇಶ್, ಕೆ. ಜಡಿಯಪ್ಪ, ಹನುಮಂತಪ್ಪ ರೆಡ್ಡಿ, ತಿಪ್ಪೇಶ್, ಆನಂದ್ ಮತ್ತಿತರರು ಧರಣಿ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು.

# ಕೋವಿಡ್-19ರ ಸಾಮಗ್ರಿಗಳ ಖರೀದಿಯಲ್ಲಿ ಭಾರೀ ಅವ್ಯವಹಾರ

## ಬಸವಾಪಟ್ಟಣದಲ್ಲಿ ಜಿ.ಪಂ. ಸದಸ್ಯ ಬಸವಂತಪ್ಪ ಖಂಡನೆ



ಮಾಯಕೊಂಡ, ಆ.21- ರಾಜ್ಯದಲ್ಲಿ ಕೋವಿಡ್-19ರ ಸಾಮಗ್ರಿಗಳ ಖರೀದಿಯಲ್ಲಿ ಭಾರೀ ಅವ್ಯವಹಾರ ನಡೆದಿದ್ದು, ಹೆಣದ ಮೇಲೆ ಹಣ ಮಾಡಲು ಹೊರಟಂತಿರುವ ರಾಜ್ಯ ಸರ್ಕಾರದ ಕ್ರಮವನ್ನು ಜಿಲ್ಲಾ ಪಂಚಾಯತ್ ಸದಸ್ಯ ಕೆ.ಎಸ್. ಬಸವಂತಪ್ಪ ಬಸವಾಪಟ್ಟಣದಲ್ಲಿನ ಪ್ರತಿಭಟನೆಯಲ್ಲಿ ಖಂಡಿಸಿದರು.

ಭೂ ಒಡೆತನದ ಮಿತಿಯನ್ನು ದ್ವಿಗುಣಗೊಳಿಸಿ, ಕಾರ್ಪೋರೇಟ್ ಗುಲಾಮಗಿರಿ ನಿಲ್ಲಿಸಲು ಭೂ ಸುಧಾರಣಾ ತಿದ್ದುಪಡಿ ಕಾಯ್ದೆಯನ್ನು ಹಿಂಪಡೆಯಲು ಆಗ್ರಹಿಸಿದ ಅವರು, ಕೃಷಿ ವಿರೋಧಿ ನೀತಿಗೆ ಕೈಗನ್ನಡಿಯಾಗಿರುವ ಭೂ ಸುಧಾರಣಾ ತಿದ್ದುಪಡಿ ಕಾಯ್ದೆಯನ್ನು ರದ್ದುಗೊಳಿಸಲು ಒತ್ತಾಯಿಸಿದರು.

ರೈತರ ಹಾಗೂ ಕೃಷಿ ಕಾರ್ಮಿಕರ ಬದುಕಿಗೆ ಮಾರಕವಾಗಿರುವ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಹಿತಕಾಯುವ ಎಪಿಎಂಸಿ ತಿದ್ದುಪಡಿ ಕಾಯ್ದೆಯ ವಿರುದ್ಧ ಹಾಗೂ ಕಾರ್ಮಿಕ ಕಾಯ್ದೆಯನ್ನು ಹಿಂಪಡೆದು, ಕಾರ್ಮಿಕರನ್ನು ಮಾಲೀಕರ ಗುಲಾಮರನ್ನಾಗಿ ಮಾಡಲು ಹೊರಟಿರುವುದು ವಿಷಾಧನೀಯವಾದ ಸಂಗತಿಯಾಗಿದೆ.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಜಿ.ನಾಗರಾಜ್, ಮಹಿಳಾ ಮುಖಂಡರಾದ ಶ್ರೀಮತಿ ಶಶಿಕಲಾ, ಕತ್ತಲಗೆರೆ ತಿಪ್ಪಣ್ಣ ಅವರುಗಳು ಮಾತನಾಡಿದರು.

ಪ್ರತಿಭಟನೆಯಲ್ಲಿ ತಾ.ಪಂ. ಸದಸ್ಯರಾದ ಶ್ರೀಮತಿ ಜ್ಯೋತಿ ಪ್ರಕಾಶ್, ಹನುಮಂತಪ್ಪ, ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಹಿದಾಯತ್, ಮುಖಂಡರಾದ ಆಲಂಪಾಷಾ ಹಾಗೂ ಮತ್ತಿತರರಿದ್ದರು.

# ಜಿಗಳಿ-ಗುಳದಹಳ್ಳಿಯಲ್ಲಿ 103 ಜನರಿಗೆ ಕೊರೊನಾ ತಪಾಸಣೆ, 6 ಜನರಿಗೆ ಪಾಸಿಟಿವ್



ಮಲೇಬೆನ್ನೂರು, ಆ.21- ಹೋಬಳಿಯಲ್ಲಿ ಶುಕ್ರವಾರ 6 ಕೊರೊನಾ ಪಾಸಿಟಿವ್ ಪ್ರಕರಣಗಳು ದೃಢಪಟ್ಟಿದ್ದು, ಜಿಗಳಿ-ಗುಳದಹಳ್ಳಿಯಲ್ಲಿ 103 ಜನರಿಗೆ ಕೊರೊನಾ ಟೆಸ್ಟ್ ಮಾಡಲಾಗಿದೆ.

ಇಲ್ಲಿನ ಪೊಲೀಸ್ ಠಾಣೆಯಲ್ಲಿ 40 ವರ್ಷದ ಪೊಲೀಸ್ ಪೇದೆಯೊಬ್ಬರಿಗೆ ಮತ್ತು ಪಟ್ಟಣದ 36 ವರ್ಷದ ಮಹಿಳೆಗೆ ಹಾಗೂ ಕುಂಬಳೂರಿನಲ್ಲಿ 30 ವರ್ಷದ ವ್ಯಕ್ತಿಗೆ, ನಂದಿತಾವರೆಯಲ್ಲಿ 45 ವರ್ಷದ ಮಹಿಳೆಗೆ, ಜಿಗಳಿಯಲ್ಲಿ 32 ವರ್ಷದ ಯುವಕನಿಗೆ, ಕಮಲಾಪುರದಲ್ಲಿ 30 ವರ್ಷದ ಮಹಿಳೆಗೆ ಕೊರೊನಾ ಸೋಂಕು ತಗುಲಿದೆ.

**104 ಜನರಿಗೆ ಟೆಸ್ಟ್ :** ಶುಕ್ರವಾರ ಜಿಗಳಿ ಗ್ರಾಮದ 2 ಕಂಟೈನ್ಮೆಂಟ್ ಜೋನ್‌ನಲ್ಲಿ 62 ಜನರಿಗೆ ಗಂಟಲು ದ್ರವ ಪರೀಕ್ಷೆ ಮಾಡಲಾಯಿತು. ಪರೀಕ್ಷಾ ಸ್ಥಳಕ್ಕೆ ಭೇಟಿ ನೀಡಿದ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಅವರು ಕೊರೊನಾ ಟೆಸ್ಟ್ ಮಾಡಿಸಿಕೊಳ್ಳಲು ಜಿಗಳಿ ಗ್ರಾಮಸ್ಥರು ತೋರಿಸಿದ ಆಸಕ್ತಿ ಇತರರಿಗೆ ಮಾದರಿಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

**ಜಿಗಳಿ ಗ್ರಾಮಸ್ಥರನ್ನು ಅಭಿನಂದಿಸಿದ ತಹಶೀಲ್ದಾರ್**

ಉಪ ತಹಶೀಲ್ದಾರ್ ಆರ್. ರವಿ, ಸಿರಿಗೆರೆ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ರೇಖಾ, ಹಿರಿಯ ಆರೋಗ್ಯ ಸಹಾಯಕ ಎಂ. ಉಮ್ಮಣ್ಣ, ಜಿಗಳಿ ಗ್ರಾ.ಪಂ. ಪಿಡಿಓ ದಾಸರ ರವಿ, ಗ್ರಾಮ ಲೆಕ್ಕಾಧಿಕಾರಿ ಸುಭಾನಿ ಸೇರಿದಂತೆ ಆರೋಗ್ಯ ಇಲಾಖೆ ಸಿಬ್ಬಂದಿ, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು ಈ ವೇಳೆ ಹಾಜರಿದ್ದರು. ಇದೇ ದಿನ ಗುಳದಹಳ್ಳಿಯಲ್ಲಿ 41 ಜನರಿಗೆ ಕೊರೊನಾ ಟೆಸ್ಟ್ ಮಾಡಲಾಯಿತು.

# ನಗರದಲ್ಲಿ ಗಣೇಶ ಮೂರ್ತಿಗಳ ವಿಸರ್ಜನೆಗೆ ಟ್ರ್ಯಾಕ್ಟರ್ ಟ್ರೇಲರ್‌ಗಳ ವ್ಯವಸ್ಥೆ

ದಾವಣಗೆರೆ, ಆ. 21 - ಮಹಾನಗರ ಪಾಲಿಕೆಯಿಂದ ನಾಳೆ ದಿನಾಂಕ 22, ಇದೇ ದಿನಾಂಕ 24 ಮತ್ತು 26 ರಂದು ಶ್ರೀ ಗಣೇಶ ವಿಗ್ರಹಗಳನ್ನು ವಿಸರ್ಜನೆ ಮಾಡಲು ತಾತ್ಕಾಲಿಕವಾಗಿ ಟ್ರ್ಯಾಕ್ಟರ್ ಟ್ರೇಲರ್‌ಗಳನ್ನು ನಿಲುಗಡೆಗೊಳಿಸಲಾಗಿದೆ. ಬಾತಿಕೆರೆ ಹತ್ತಿರ ಹಾಗೂ ಹದಡಿ ರಸ್ತೆ ಭದ್ರಾ ಚಾನಲ್ ಬಳಿ ಕೃತಕ ಹೊಂಡಗಳನ್ನು ನಿರ್ಮಿಸಲಾಗಿದೆ.

ಸದರಿ ಸ್ಥಳಗಳಲ್ಲಿ ಮಾತ್ರ ಶ್ರೀ ಗಣೇಶ ಮೂರ್ತಿಗಳನ್ನು ವಿಸರ್ಜಿಸಿ, ಜಲಮಾಲಿನ್ಯ ಮತ್ತು ಪರಿಸರ ಮಾಲಿನ್ಯ ತಡೆಯುವಲ್ಲಿ ಮಹಾನಗರ ಪಾಲಿಕೆಯೊಂದಿಗೆ ಸಹಕರಿಸುವಂತೆ ನಗರ ಪಾಲಿಕೆ ಕೋರಿದೆ. ಸಾರ್ವಜನಿಕ, ಖಾಸಗಿ ಬಾವಿ, ಕೆರೆ, ಕಾಲುವೆ, ಹಳ್ಳ - ಕೊಳ್ಳಗಳಲ್ಲಿ ಯಾವುದೇ ಕಾರಣಕ್ಕೂ ವಿಸರ್ಜನೆ ಮಾಡತಕ್ಕದ್ದಲ್ಲ. ಇಂತಹ ಪ್ರಕರಣಗಳು ಕಂಡುಬಂದಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಪಾಲಿಕೆ ಆಯುಕ್ತ ವಿಶ್ವನಾಥ್ ಮುದಜ್ಜಿ ತಿಳಿಸಿದ್ದಾರೆ.

**ಟ್ರ್ಯಾಕ್ಟರ್ ಟ್ರೇಲರ್‌ಗಳನ್ನು ನಿಲುಗಡೆಗೊಳಿಸಲಾಗುವ ಸ್ಥಳಗಳು :** 1) ವೆಂಕಟೇಶ್ವರ ವೃತ್ತ, ಬೇತೂರು ರಸ್ತೆ, 2) ಬಂಬೂಬಜಾರ್ (ಗಣೇಶ ಹೋಟೆಲ್ ಹತ್ತಿರ), 3) ಹಗೇದಿಬ್ಬ ವೃತ್ತ, 4) ದುರ್ಗಾಂಬಿಕಾ ದೇವಸ್ಥಾನ (ಶಿವಾಜಿ ವೃತ್ತ), 5) ಹೊಂಡದ ವೃತ್ತ, 6) ಬಸವೇಶ್ವರ ವೃತ್ತ, ಕಾಯಿಪೇಟೆ, 7) ಕುರುಬರ ಕೇರಿ, 8) ಡಾಂಗೆ ಪಾರ್ಕ್, 9) ರಾಮ್ ಅಂಡ್ ಕೋ ಸರ್ಕಲ್, 10) ಗಣೇಶ ದೇವಸ್ಥಾನ ಹತ್ತಿರ, ಬಾಪೂಜಿ ಶಾಲೆ, 11) ಆಂಜನೇಯ ದೇವಸ್ಥಾನ, ಆಂಜನೇಯ ಬಡಾವಣೆ, 12) ಈಶ್ವರ ಪಾರ್ವತಿ ದೇವಸ್ಥಾನ, ವಿದ್ಯಾನಗರ, 13) 3ನೇ ಮುಖ್ಯರಸ್ತೆ, ವಿನೋಬನಗರ, 14) ವಿಠಲ ಮಂದಿರ, ಮಹಾರಾಜ ಪೇಟೆ, 15) ಆವರಗೆರೆ, 16) ಗುಂಡಿ ಮಹಾದೇವಪ್ಪ ಸರ್ಕಲ್, 17) ದುರ್ಗಾಂಬಿಕಾ ದೇವಸ್ಥಾನ, ನಿಟುವಳ್ಳಿ, 18) ಹೆಚ್.ಕೆ.ಆರ್. ಸರ್ಕಲ್, 19) ಸಂಜೀವಿನಿ ಆಂಜನೇಯ ದೇವಸ್ಥಾನ, ಶಿವಕುಮಾರ ಸ್ವಾಮಿ ಬಡಾವಣೆ, 1ನೇ ಹಂತ, 20) ಮೈಲಾರಲಿಂಗೇಶ್ವರ ದೇವಸ್ಥಾನ, ಕೊಂಡಜ್ಜಿ ರಸ್ತೆ (ಶಿಬಾರ), 21) ಬನ್ನಿಮರದ ಹತ್ತಿರ, ರಿಂಗ್ ರಸ್ತೆ, ಎಸ್.ಎಸ್. ಲೇ ಔಟ್, 22) ಜಯದೇವ ವೃತ್ತ, 23) ಗಣೇಶ ದೇವಸ್ಥಾನ ಹತ್ತಿರ, ಬಕ್ಕೇಶ್ವರ ಸ್ಕೂಲ್ ಮುಂಭಾಗ, ಎಂ.ಸಿ.ಸಿ. 'ಎ' ಬ್ಲಾಕ್, 24) ಪಂಚಮುಖಿ ಆಂಜನೇಯ ದೇವಸ್ಥಾನ, ಸರಸ್ವತಿ ಬಡಾವಣೆ, 25) ಕೋರ್ಟ್ ಹಿಂಭಾಗ, ದೇವರಾಜ ಅರಸು ಬಡಾವಣೆ, 26) ಬಾಪೂಜಿ ಬ್ಯಾಂಕ್ ಹತ್ತಿರ, ಆಂಜನೇಯ ಬಡಾವಣೆ, ಬಿ.ಐ.ಇ.ಟಿ. ರಸ್ತೆ, 27) ಡಿ.ಸಿ.ಎಂ. ಲೇ ಔಟ್ ಸರ್ಕಲ್ ಹತ್ತಿರ, 28) ಹಳೇ ಕುಂದುವಾಡ, 29) ಹಾಸಬಾವಿ ವೃತ್ತ, 30) ಶಾಮನೂರು.

# ನೀಟ್ ಪರೀಕ್ಷೆ ಮುಂದೂಡಲು ಸುಬ್ರಮಣ್ಯಂ ಸ್ವಾಮಿ ಒತ್ತಾಯ

ನವದೆಹಲಿ, ಆ. 21 - ನೀಟ್, ಜೆಇಇ ಹಾಗೂ ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ದೀಪಾವಳಿಯ ನಂತರ ಕೈಗೊಳ್ಳುವಂತೆ ಕೇಂದ್ರ ಸರ್ಕಾರಕ್ಕೆ ಬಿಜೆಪಿ ನಾಯಕ ಹಾಗೂ ರಾಜ್ಯಸಭಾ ಸದಸ್ಯ ಸುಬ್ರಮಣ್ಯಂ ಸ್ವಾಮಿ ಒತ್ತಾಯಿಸಿದ್ದಾರೆ.

ಈ ಬಗ್ಗೆ ಟ್ವಿಟ್ಟರ್‌ನಲ್ಲಿ ಹೇಳಿಕೆ ನೀಡಿರುವ ಸ್ವಾಮಿ, ನಾನು ಶಿಕ್ಷಣ ಸಚಿವ ರಮೇಶ್ ಪೊಖ್ರಿಯಾಲ್ ಅವರ ಜೊತೆ ಮಾತನಾಡಿದ್ದು, ನೀಟ್ ಹಾಗೂ ಇತರೆ ಪರೀಕ್ಷೆಗಳನ್ನು ದೀಪಾವಳಿ ನಂತರ ನಡೆಸುವಂತೆ ಕೇಳಿದ್ದೇನೆ ಎಂದಿದ್ದಾರೆ. ಈ ಪರೀಕ್ಷೆಗಳ ದಿನಾಂಕ ನಿಗದಿಯ ವಿಷಯವನ್ನು ಸುಪ್ರೀಂ ಕೋರ್ಟ್ ಸರ್ಕಾರದ ನಿರ್ಧಾರಕ್ಕೆ ಬಿಟ್ಟಿದೆ. ಈ ಹಿನ್ನೆಲೆಯಲ್ಲಿ ಪ್ರಧಾನ ನರೇಂದ್ರ ಮೋದಿ ಅವರಿಗೆ ತುರ್ತು ಪತ್ರವನ್ನೂ ಬರೆದಿದ್ದೇನೆ ಎಂದವರು ಹೇಳಿದ್ದಾರೆ.

ಪರೀಕ್ಷೆಗಳು ವಿದ್ಯಾರ್ಥಿಗಳಿಗೆ ಮಾಡು ಇಲ್ಲವೇ ಮಡಿ ಎಂಬಂತಾಗಿವೆ. ಹೀಗಾಗಿ ಅವರು ಪೂರ್ಣ ಸಿದ್ಧತೆ ಮಾಡಿಕೊಳ್ಳಬೇಕಿದೆ. ಈ ಹಂತದಲ್ಲಿ ಪರೀಕ್ಷೆಗಳನ್ನು ನಡೆಸುವುದು ಯುವಕರಲ್ಲಿ ಆತ್ಮಹತ್ಯೆ ಹೆಚ್ಚಾಗಲು ಕಾರಣವಾಗಲಿದೆ ಎಂದು ಸ್ವಾಮಿ ಎಚ್ಚರಿಸಿದ್ದಾರೆ. ಪ್ರಸಕ್ತ ವಿದ್ಯಾರ್ಥಿಗಳ ಪರೀಕ್ಷೆಗಳಿಗೆ ಅಗತ್ಯವಾದ ಸೌಲಭ್ಯಗಳಿಲ್ಲ. ಮುಂಬೈನಲ್ಲಿ ಸಾರ್ವಜನಿಕ ಸಾರಿಗೆ ಇಲ್ಲ. ಜನರು ಪರೀಕ್ಷೆಗಾಗಿ ದೂರ ದೂರದಿಂದ ಪರೀಕ್ಷಾ ಕೇಂದ್ರಗಳಿಗೆ ಬರಬೇಕಾಗುತ್ತದೆ ಎಂದವರು ಹೇಳಿದ್ದಾರೆ.

ಸೆಪ್ಟೆಂಬರ್ 1ರಿಂದ 6ರವರೆಗೆ ಜೆಇಇ ಮೇನ್, ಸೆಪ್ಟೆಂಬರ್ 27ರಂದು ಜೆಇಇ ಅಡ್ವಾನ್ಸ್ ಹಾಗೂ ಸೆಪ್ಟೆಂಬರ್ 13ರಂದು ನೀಟ್ ಪರೀಕ್ಷೆ ನಡೆಸಲು ಉದ್ದೇಶಿಸಲಾಗಿದೆ.

ಜೆಇಇ ಪರೀಕ್ಷೆ ಮುಂದೂಡಬೇಕೆಂದು ದಾಖಲಾಗಿದ್ದ ಅರ್ಜಿಯನ್ನು ತಳ್ಳಿ ಹಾಕಿದ್ದ ಸುಪ್ರೀಂ ಕೋರ್ಟ್, ವಿದ್ಯಾರ್ಥಿಗಳ ಜೀವನ ವ್ಯರ್ಥ ಮಾಡಲಾಗದು. ಜೀವನ ಮುಂದುವರೆಯಲೇಬೇಕು ಎಂದು ತಿಳಿಸಿತ್ತು.

# ಚನ್ನಗಿರಿ : ಐಟಿಐ ಪ್ರವೇಶಕ್ಕಾಗಿ ಅರ್ಜಿ

ಚನ್ನಗಿರಿ, ಆ. 21 - ಇಲ್ಲಿನ ಸರ್ಕಾರಿ ಕೈಗರಿಕಾ ತರಬೇತಿ ಸಂಸ್ಥೆ (ಐಟಿಐ) ನಲ್ಲಿ ಎರಡು ವೃತ್ತಿಗಳಲ್ಲಿ (ವಿದ್ಯುತ್ ಕರ್ಮಿ ಮತ್ತು ಜೋಡಣೆ) ತರಬೇತಿಯನ್ನು ನೀಡಲಾಗುತ್ತಿದ್ದು, ಐಟಿಐ ಪ್ರವೇಶ ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.ಪಿ.ಪಿ.ಪಿ ಯೋಜನೆಯಡಿ ಮೂರು ವೃತ್ತಿಗಳಲ್ಲಿ (ವಿದ್ಯುತ್ ಕರ್ಮಿ, ಜೋಡಣೆ ಮತ್ತು ಎಂ.ಆರ್.ಎ.ಸಿ) ಶುಲ್ಕ ಸಹಿತ ಆಫ್‌ಲೈನ್ ಪ್ರವೇಶಗಳು ಲಭ್ಯವಿರುತ್ತವೆ. ಅರ್ಜಿ ಸಲ್ಲಿಸಲು ಇದೇ ದಿನಾಂಕ 31 ಕಡೆಯ ದಿನವಾಗಿದೆ. ಮಾಹಿತಿಗಾಗಿ ಕಚೇರಿ ಸಮಯದಲ್ಲಿ ಪ್ರಾಚರ್ಯರನ್ನು ಇಲಾಖೆಯ ಜಾಲತಾಣ- www.emptrg.kar.nic.in ಸಂಪರ್ಕಿಸಿ ವಿವರಗಳನ್ನು ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ. ಸಂಖ್ಯೆ 8217608288 ಸಂಪರ್ಕಿಸುವಂತೆ ಚನ್ನಗಿರಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರು ಕೋರಿದ್ದಾರೆ.


**ಎರೆಹುಳು ಗೊಬ್ಬರ ಹಾಗೂ ಸಿಟಿ ಕಾಂಪೋಸ್ಟ್ ದೊರೆಯುತ್ತದೆ**
License No - JDA/F&PP/KAR/FE19-200282/2019-20
93411 71212, 81054 98069

**ಎಸ್.ಎಸ್.ಎಸ್. (SSS) ಎಂಟರ್ ಪ್ರೈಸಸ್ ರವರಿಂದ**
ಗಣೇಶ ಹಬ್ಬದ ಪ್ರಯುಕ್ತ ರಿಯಾಯಿತಿಯಲ್ಲಿ ಸೈಟುಗಳು ಲಭ್ಯ
ಕೆ.ಹೆಚ್.ಬಿ. ಎದುರು, ಜಿನಿಸಿಸ್ ಪಕ್ಕ, ನ್ಯಾಷನಲ್ ಹೈವೇಯಲ್ಲಿರುವ ಸಿಟಿಗೆ ಹತ್ತಿರವಿರುವ ಎಂ.ಬಿ ಸಿಟಿ ಯಲ್ಲಿ ಈ ಹಿಂದೆ ಮಾರಾಟ ಮಾಡಿದ್ದ ರೂ. 1200/- ರಿಂದ 1250/-ಗಳ ಬದಲಿಗೆ ಕೇವಲ ರೂ.999/- ಗಳಲ್ಲಿ ಫೈನಲ್ ಅಪ್ರೂವಲ್ ನೋಂದಾವಣೆಗೆ ಸಿದ್ಧವಿರುವ ಹಾಗೂ ಬ್ಯಾಂಕ್ ಸಾಲ ದೊರೆಯುವ ಸೈಟುಗಳು ದೊರೆಯುತ್ತವೆ. ಸಂಪರ್ಕಿಸಿ :
ಪಠಾಣ್ : 81399-88555, 81973-00410

**ಸೈಟುಗಳು ಮಾರಾಟಕ್ಕಿವೆ**
ವಾಜಪೇಯಿ ಬಡಾವಣೆಯಲ್ಲಿ, ಶಿವಪಾರ್ವತಿ ಬಡಾವಣೆಯಲ್ಲಿ, ಬನಶಂಕರಿ ಬಡಾವಣೆಯಲ್ಲಿ, ಬನಶ್ರೀ ಬಡಾವಣೆಯಲ್ಲಿ, ರಶ್ಮಿ ಸ್ಕೂಲ್ ಹತ್ತಿರ.
ರುದ್ರೇಶ್, ಏಜೆಂಟ್
87226 08529

**ಮನೆ ಬಾಡಿಗೆಗೆ ಇದೆ**
# 1885/74 A B ಸಿಂಗಲ್ ಬೆಡ್‌ರೂಂ ಎಲ್ಲಾ ವ್ಯವಸ್ಥೆವುಳ್ಳ ಗ್ರೌಂಡ್ ಫ್ಲೋರ್ ಮನೆ. ಜೈನ್ ಲೇಔಟ್, 2ನೇ ಮೇನ್, ಎನ್‌ಟ್ರೇನ್ಸ್ ಕುಂದವಾಡ ರೋಡ್, ಬನ್ನಿ ಮಹಾಕಾಳಿ ದೇವಸ್ಥಾನದ ಹತ್ತಿರ.
99862 26977

**ಶ್ರೇಯಸ್ ಉದರ, ಲಿವರ್, ಕರುಳು ರೋಗಗಳ ಚಿಕಿತ್ಸಾ ಕೇಂದ್ರ**
ಡಾ. ಇ.ಆರ್. ಸಿದ್ದೇಶಿ
M.D. (MED), D.M. (Gastro), F.A.C.G. (USA), P.G.C.C. Diab. Care (Aust)
ಉದರ, ಲಿವರ್, ಕರಳು, ಪ್ಯಾನ್‌ಕ್ರಿಯಾಸ್, ಎಂಡೋಸ್ಕೋಪಿ, ಸಕ್ಕರೆ ಕಾಯಿಲೆ ತಜ್ಞರು
8th Main, 8th Cross, P.J. Extension, Davangere.
08192-237325, 94837 23166

**FULLY FURNISHED HOUSE FOR LONG TERM AND SHORT TERM**
with all Amenities cot, bed, fan, light, UPS, internet, T.V Dining table, Geyser, Kitchen, Stove, Gas etc.
94800 73451

**ಕಾರು ಬೇಕಾಗಿದೆ**
2000-2005ರ ಮಾಡೆಲ್, ರನ್ನಿಂಗ್ ಕಂಡೀಷನ್ ಉಳ್ಳ ಮಾರುತಿ - 800 ಕಾರು / ವ್ಯಾನ್ ಖರೀದಿಗೆ ಬೇಕಾಗಿದೆ.
ಸಂಪರ್ಕಿಸಿ: 89517-16682, 97432-18549

**JCB ಬಾಡಿಗೆಗೆ ಇದೆ**
ಪ್ರತಿ ಗಂಟೆಗೆ ರೂ. 750/- ಮಾತ್ರ
Concrete Breaker
ಗಂಟೆಗೆ ರೂ. 1300/- ಮಾತ್ರ
ಸಂಪರ್ಕಿಸಿ : 80502 19547

**ಮನೆ ಬಾಡಿಗೆಗೆ/ಲೀಜ್‌ಗೆ**
1 BHK, 2 BHK, 3 BHK
ರುದ್ರೇಶ್, ಏಜೆಂಟರು
87226 08529

**ಹೋಟಲ್‌ಗೆ ಮಳಿಗೆ ಬಾಡಿಗೆಗಿದೆ**
ದಾವಣಗೆರೆ, ಮಧ್ಯಭಾಗದ ಪಿ.ಜೆ ಬಡಾವಣೆ, 3ನೇ ಮುಖ್ಯ ರಸ್ತೆ, # 190, ನಟರಾಜ ನರ್ಸಿಂಗ್ ಹೋಂ ಮುಂಭಾಗ ತಕ್ಷಣ ಬಾಡಿಗೆಗೆ ಇದೆ.
ಕೆ.ಸಿ. ರವೀಂದ್ರನಾಥ್ (ರವಿ),
98454 66233, 9845 613079

**ಬೇಕಾಗಿದ್ದಾರೆ**
ಎಸ್.ಎಸ್.ಎಲ್.ಸಿ, ಪಿ.ಯು.ಸಿ. ಪಾಸ್ ಅಥವಾ ಫೇಲ್ ಆಗಿರುವ ಆಫೀಸ್ ಮತ್ತು ಕ್ಲಿನಿಕ್ ನೋಡಿಕೊಳ್ಳಲು ಯುವತಿ ಬೇಕಾಗಿದ್ದಾರೆ. ಚೌಕಿಪೇಟೆ. ಮಹಿಳೆಯರು ಮಾತ್ರ.
ಫೋ.: 97409 55345

**ಆಫೀಸ್/ಕ್ಲಿನಿಕ್‌ಗೆ ಮಳಿಗೆ ಬಾಡಿಗೆಗಿದೆ**
(550Sqft) ಗ್ರೌಂಡ್ ಫ್ಲೋರ್ 2068/2, 2ನೇ ಮೇನ್, ಚರ್ಚ್ ರೋಡ್ ಎಂ.ಸಿ.ಸಿ. 'ಎ' ಬ್ಲಾಕ್, ಸೂಪರ್ ಮಾರ್ಕೆಟ್ ಹತ್ತಿರ, ದಾವಣಗೆರೆ.
99012 16456, 90089 00405

**ಗೋಡಾನ್ ಲೀಜ್ / ಬಾಡಿಗೆಗೆ**
ದಾವಣಗೆರೆ ಪಿ.ಬಿ.ರಸ್ತೆ, ವಾಣಿ ಹೋಂಡ ಶೋ ರೂಂ ಹತ್ತಿರ 20 ಹೆಚ್.ಪಿ ಕರೆಂಟ್‌ವುಳ್ಳ, 40X60 ಅಳತೆಯ ಚಾಲೂ ಸ್ಥಿತಿಯಲ್ಲಿರುವ ಗೋಡಾನ್ (ಬಿಲ್ಡಿಂಗ್) ಲೀಜ್ ಅಥವಾ ಬಾಡಿಗೆಗೆ ಇದೆ.
934101 4406, 73538 79207

**ಅಡುಗೆ ಮಾಡಲು ಮಹಿಳೆ ಬೇಕಾಗಿದ್ದಾರೆ**
ಪ್ರತಿದಿನ ಬೆಳಿಗ್ಗೆ 8 ರಿಂದ ಮಧ್ಯಾಹ್ನ 12ರವರೆಗೆ ಅಡುಗೆ ಮಾಡಲು ಮಹಿಳೆ ಬೇಕಾಗಿದ್ದಾರೆ. ಸಂಪರ್ಕಿಸಿ :
ಮೊ.98440-63507

**ಬಾಡಿಗೆಗೆ/ಭೋಗ್ಯಕ್ಕೆ ಇದೆ**
ದಾವಣಗೆರೆಯಲ್ಲಿ ಬೆಂಗಳೂರು - ಮುಂಬಯಿ ರಸ್ತೆ 4 ಸರ್ಕ್ಯೂಟ್ ಹೌಸ್ ಹತ್ತಿರ ಪ್ರವಾಸಿ, ಲಾಜಿಸ್ಟಿಕ್ ಟ್ರಾನ್ಸ್ ಪೋರ್ಟ್, ಕೋರಿಯರ್ ಬುಕಿಂಗ್ ಆಫೀಸ್‌ಗೆ ಯೋಗ್ಯವಾದ ಸೋಲಾರ್ ಮತ್ತು ಪಾರ್ಕಿಂಗ್ ಕಾಂಪೌಂಡ್ ಸೌಲಭ್ಯದ ಎರಡು ಮಳಿಗೆಗಳು ಹೊಸಮನೆ ಇದೆ.
94800 00417 / 94801 11416

**ರೂಂ ಬಾಡಿಗೆಗೆ ಇದೆ**
ಹೊಸ ಕೋರ್ಟ್ ಹಿಂಭಾಗ, BSNL ಆಫೀಸ್‌ಗೆ ಹತ್ತಿರ, ಎಲ್ಲಾ ಸೌಕರ್ಯವುಳ್ಳ ದೇವರಾಜ ಅರಸು ಬಡಾವಣೆ, ಎ ಬ್ಲಾಕ್, 5ನೇ ಕ್ರಾಸ್‌ನಲ್ಲಿ ಬಾಡಿಗೆಗೆ ಇದೆ.
ಫೋ. : 97310 63330

**ಹೊಸ ಮನೆ ಮಾರಾಟಕ್ಕಿದೆ**
30x 35, ದಕ್ಷಿಣ ದಿಕ್ಕು ಎಸ್.ಎಸ್. ಆಸ್ಪತ್ರೆ ಹಿಂಭಾಗ, ಗಣಪತಿ ನಗರ. ಸಂಪರ್ಕಿಸಿರಿ:
ಜಿ. ಭಾಸ್ಕರ್ ರೆಡ್ಡಿ
94489 23785
95359 67499

**ಚಾಲಕರು ಬೇಕಾಗಿದ್ದಾರೆ**
ಶಾಲಾ ವಾಹನ ಮತ್ತು ಕಾರು ಓಡಿಸಲು ನುರಿತ ಚಾಲಕರು ಬೇಕಾಗಿದ್ದಾರೆ. ವಿಚಾರಿಸಿ :
94488 39229
94492 66133

**JOB OPPORTUNITY**
Qualification : Diploma civil / BE Civil (Auto cad)
Place : Harihar
80731 80500

**ಮನೆ ಬಾಡಿಗೆಗೆ ಇದೆ**
ಜಿಲ್ಲಾ ಪಂಚಾಯತ್ ಎದುರುಗಡೆ, ಸರ್ಕ್ಯೂಟ್ ಹೌಸ್ ಪಕ್ಕದ , ಎಸ್.ಎ ರವೀಂದ್ರನಾಥ್ ಬಡಾವಣೆಯಲ್ಲಿ, ಗ್ರೌಂಡ್ ಫ್ಲೋರ್ ಹಾಗೂ ಫಸ್ಟ್ ಫ್ಲೋರ್‌ನಲ್ಲಿ ಡಬಲ್ ಬೆಡ್‌ರೂಂ ಇರುವ ಮುನ್ಸಿಪಲ್ ಹಾಗೂ ಬೋರ್‌ವೆಲ್ ನೀರು ಸೌಲಭ್ಯವುಳ್ಳ ಮನೆ ಬಾಡಿಗೆಗೆ ಇದೆ. (ನೂತನವಾಗಿ ನಿರ್ಮಾಣವಾಗಿರುವ ಸರ್.ಎಂ.ವಿ ಕಾಲೇಜ್ ಹತ್ತಿರ)
97319 68465

**ಮಾರಾಟಕ್ಕೆ**
ಕೊಟ್ಟೂರೇಶ್ವರ ಬಡಾವಣೆ ಮನೆ-20×35, ಮೇಡಂ ಲೇಔಟ್ ಮನೆ 30×40, ಅಶೋಕನಗರ ಮನೆ -20×40, ನಿಟುವಳ್ಳಿ ಹೊಸ ಬಡಾವಣೆಯ ಮನೆಗಳು, 15×42, 30×42 15×42, KHB ಸೈಟ್ 30×40, ಬನಶ್ರೀ ಲೇಔಟ್ ಸೈಟ್ (ಶ್ಯಾಮನೂರು) 30×40 30×42, (ಸೈಟ್ ದರ ಹಳೆಯ ಆರ್ ಸಿ ಸಿ ಮನೆ ನಿಟುವಳ್ಳಿ ಹೊಸ ಬಡಾವಣೆ)
7899636597 9916525828

**ನೀರಾವರಿ ಜಮೀನು ಮಾರಾಟಕ್ಕಿದೆ**
25 ಲಕ್ಷ ಎಕರೆಗೆ
ಶರ್ಮ:
94484 82561

**ಮನೆ ಮಾರಾಟಕ್ಕಿದೆ**
ಯರಗುಂಟೆ ವಾರ್ಡ್ ನಂ 45ರಲ್ಲಿ ಹೊಸದಾಗಿ ಕಟ್ಟಿಸಿರುವ 30x40 ಅಡಿ ಅಳತೆಯ 2 ಬೆಡ್ ರೂಂ, ಬೋರ್ ವೆಲ್/ ಕಾರ್ಪೊರೇಷನ್ ನೀರಿನ ಸೌಲಭ್ಯವಿರುವ ಪಶ್ಚಿಮ ದಿಕ್ಕಿನ ಸುಸಜ್ಜಿತ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ.
9844958093, 9844779947

**ಮನೆ ಬಾಡಿಗೆಗೆ ಇದೆ**
ನೆಲಮಹಡಿಯಲ್ಲಿ 2 ಬೆಡ್‌ರೂಂವುಳ್ಳ ಮುನ್ಸಿಪಲ್/ಬೋರ್ ನೀರಿನ ಸೌಲಭ್ಯವುಳ್ಳ ವಿನಾಯಕ ಬಡಾವಣೆ, 1ನೇ ಮುಖ್ಯ ರಸ್ತೆ, 5ನೇ ಕ್ರಾಸ್, ವಿದ್ಯಾನಗರದಲ್ಲಿ ಮನೆ ಬಾಡಿಗೆಗೆ ಇದೆ.
ಫೋ. : 87626 21495

**ಜಾಗ ಮಾರಾಟಕ್ಕಿದೆ**
ದಾವಣಗೆರೆ ಮುದ್ದಳ್ಳಿ ತೋಟ, ಪೊಲೀಸ್ ಪೆರೇಡ್ ಗ್ರೌಂಡ್ ಎದುರು 6.4 ಗುಂಟೆ ಜಾಗ ಮಾರಾಟಕ್ಕಿದೆ. ಸಂಪರ್ಕಿಸಿ:
87109 64433

**ಅಡಿಕೆ ಸಸಿಗಳು ದೊರೆಯುತ್ತವೆ**
ನಮ್ಮಲ್ಲಿ 3 ವರ್ಷದ ಮತ್ತು 2 ವರ್ಷದ 2 ಕೆ.ಜಿ ಪ್ಯಾಕೆಟ್‌ನ ಅಡಿಕೆ ಸಸಿಗಳು ಹಾಗೂ ತೆಂಗಿನ ಸಸಿಗಳು ದೊರೆಯುತ್ತವೆ
ದೇವರಬೆಳಕೆರೆ ನಿಂಗರಾಜ್
96114 46331

**ಬೇಕಾಗಿದ್ದಾರೆ**
ಅನುಭವವುಳ್ಳ ನುರಿತ ಕಾರು ಚಾಲಕರು ಬೇಕಾಗಿದ್ದಾರೆ.
ಸಂಪರ್ಕಿಸಿ: 97439-00369

**House For Rent**
2 BHK house rent at Swamy Vivekananda Badavane 1st Main, 2nd cross. opposite to Bapuji Polytechnic # 2104 Near S.P.S.M.R School
74110 77419, 99807 27419

**WORK FROM HOME**
ಆಸಕ್ತಿಯುಳ್ಳವರಿಗೆ ಸದಾವಕಾಶ
74118 89988

**House For Rent**
Ground floor 2BHK, East Facing S.S. Layout 'B' Block 4th Main, 7th cross.
90084 18081

**3BHK ಮನೆ ಬಾಡಿಗೆಗೆ ಇದೆ**
ತುಳಸಿ ಆಯುರ್ವೇದಿಕ ಆಸ್ಪತ್ರೆ ಹತ್ತಿರ # 1691/53 'ಸೈನಿಕ ಸದನ' ಗ್ರೌಂಡ್ ಫ್ಲೋರ್‌ನಲ್ಲಿ 3 ಬೆಡ್‌ರೂಂ ಮನೆ, ಬೋರ್/ಮುನ್ಸಿಪಲ್ ಹಾಗೂ ಸೋಲಾರ್ ವಾಟರ್ + ಯು.ಪಿ.ಎಸ್. ಎಲ್ಲಾ ಅನುಕೂಲವಿರುವ ಮನೆ ಬಾಡಿಗೆಗೆ ಇದೆ.
94483 39238, 72590 25983

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಹುಡುಗರು ಬೇಕಾಗಿದ್ದಾರೆ**
10th or 12th Pass or Fail
ದುರ್ಗಾಶ್ರೀ ಟಿಂಬರ್ಸ್
ಆರ್.ಎಂ.ಸಿ ರೋಡ್ ದಾವಣಗೆರೆ
ಭೇಟಿಯ ಸಮಯ: ಬೆ.9 ರಿಂದ ಸಂಜೆ 6ರವರೆಗೆ
88844 45445
98442 10443

**Best Quality Car Covers & Bike Covers**
Available @ Affordable Price
Diamond Tarpalin Co
No.17 R.M.C Link Road
76763 88918
www.diamondtarpalin.com

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯತ ವಧು-ವರರ ಕೇಂದ್ರ,
Vidya Nagara, Nutan College Road, Davangere.
Web.: www.bhoomikamatrimony.com
7760316576, 9008055813

**ವಾಹ್ ಕಾಫಿ !! ರಿಚ್ ಕಾಫಿ !!**
SRK COFFEE
ಶ್ರೀ ರಾಮಕೃಷ್ಣ ಕಾಫಿ ಕಂಪನಿ
ಮಂಡಿಪೇಟೆ, ದಾವಣಗೆರೆ.
ಮೊಬೈಲ್ : 94487 27084

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ,**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಮಾಂತ್ರಿಕ ಮೋಡಿ ಬೆಟ್ಟಪ್ಪ ವಶೀಕರಣ ಸ್ಪೆಷಲಿಸ್ಟ್**
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು ಶೀಘ್ರದಲ್ಲಿ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ:
ಗಾಂಧಿ ಸರ್ಕಲ್, ದಾವಣಗೆರೆ.
ಮೊ. : 8971699826

**ಶ್ರೀ ಸಾಯಿಬಾಲಾಜಿ ಜ್ಯೋತಿಷ್ಯಾಲಯ**
ಪಂಡಿತ್ ಸಾಯಿನಾಥ್ ಕುಡ್ಲ
ಇವರು ನಿಮ್ಮ ಜೀವನದ ಸಂಪೂರ್ಣ ಭವಿಷ್ಯವನ್ನು ಹೇಳುತ್ತಾರೆ. ವಿದ್ಯೆ, ಉದ್ಯೋಗ, ಮಾಟ-ಮಂತ್ರ, ವಶೀಕರಣ, ಸಾಲಬಾಧೆ ಇನ್ನೂ ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ. ವಿಳಾಸ: ವಿದ್ಯಾನಗರ 1ನೇ ಬಸ್ ಸ್ಟಾಪ್ ಹತ್ತಿರ, ಕೆನರಾ ಬ್ಯಾಂಕ್ ಪಕ್ಕ, ದಾವಣಗೆರೆ.
ಮೊ: 95919 84627

**ನೇರ ಪರೀಕ್ಷೆಗಳು**
PUC, ARTS, COMMERCE, SCIENCE ಮತ್ತು SSLC
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ.
ಮಾನಸ ಎಜುಕೇಷನ್ ಟ್ರಸ್ಟ್,
ಎಲ್.ಕೆ. ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

**ಸಸಿಗಳು ದೊರೆಯುತ್ತವೆ**
ನಮ್ಮಲ್ಲಿ ಉತ್ತಮ ತಳಿಯ ತೆಂಗು, ಅಡಿಕೆ, ಮಾವು, ಸಪೋಟ, ಪಪ್ಪಾಯಿ, ಬೆಟ್ಟದ ನೆಲ್ಲಿ, ತೇಗ, ಸಿಲ್ವರ್, ಹೆಬ್ಬೇವು, ಶ್ರೀಗಂಧ, ರಕ್ತಚಂದನ, ಗುಲಾಬಿ ಹಾಗೂ ಇತರೆ ಸಸಿಗಳು ದೊರೆಯುತ್ತವೆ ಹಾಗೂ ಸಾವಯವ ಗೊಬ್ಬರ ದೊರೆಯುತ್ತದೆ.
ವಿಳಾಸ: ಸುಬ್ರಮಣ್ಯ ಅಗ್ರೋ ಟೆಕ್ ಶಕ್ತಿನಗರ, ನಿಟುವಳ್ಳಿ, ದಾವಣಗೆರೆ.
ಮೊ: 94484 39639
63665 96479

**ಪ್ರವೇಶ ಪ್ರಕಟಣೆ**
SSLC, PUC, ITI - Pass/Fail
ಡಿಪ್ಲೋಮಾ ಇನ್ ಪೇಷಂಟ್ ಕೇರ್ ನರ್ಸಿಂಗ್ - 2 ವರ್ಷ
6 ತಿಂಗಳ ತರಬೇತಿ ನಂತರ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್
ಎಲ್.ಕೆ. ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

ನಮ್ಮಲ್ಲಿ ಎಲ್ಲಾ ಕಂಪನಿಯ
**RO WATER Purifiers**
Sales and Service ಮತ್ತು ಎಲ್ಲಾ ಬಿಡಿ ಭಾಗಗಳು ಹೋಲ್‌ಸೇಲ್ ದರದಲ್ಲಿ ಲಭ್ಯವಿರುತ್ತವೆ.
BHUSHAN ENTERPRISES
99807 27767


## ವಿನಾಯಕ ಚೌತಿ

ಭಾದ್ರಪದ ಶುಕ್ಲದ
ಚೌತಿಯಂದು
ಬರುವನು ಗಣಪ
ಭೂಮಿಗಿಂದು
ಭಕ್ತರು ಗಣಪತಿಯ ಮನೆಗೆ
ತಂದು
ಭಕ್ತಿಯಿಂದ ಪೂಜಿಸುವ
ದಿನವಿಂದು

ಮನೆಯು ಒಪ್ಪ ಓರಣವಾಗಿದೆ
ಪೂಜೆಗೆ ಅಡಿಗೆಗೆ ಸಿದ್ಧವಾಗಿದೆ
ಬಟ್ಟೆ ವಸ್ತ್ರಗಳು ಶುದ್ಧವಾಗಿವೆ
ವಿಘ್ನ ವಿನಾಶಕನ
ಆಗಮನವಾಗಿದೆ

ಬಣ್ಣ ಬಣ್ಣದ ಹೂಗಳ ತಂದು
ವಿಧವಾದ ಹಣ್ಣು ಕಾಯಿಗಳಿಂದು
ಕಡುಬು ಕಜ್ಜಾಯದ
ಅಲಂಕಾರವು
ಚಿತ್ರಾನ್ನ ಮೊಸರನ್ನದ ನೈವೇದ್ಯವು

ಮನೆಯಲ್ಲಿ ಹಬ್ಬದ ಸಡಗರವು
ಕೊರೋನಾ ಭೀತಿ ನಡುವೆಯು
ಮಾಸ್ಕನ್ನು ಧರಿಸಿ ಅಂತರ
ಕಾಯ್ದುಕೊಂಡು
ಹಬ್ಬ ಆಚರಿಸುವ ಸಂತಸದ
ಸಂಭ್ರಮವು

- ಹೆಚ್.ಕೆ.ಸತ್ಯಭಾಮ
ಮಂಜುನಾಥ,
ದಾವಣಗೆರೆ.


**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಶನಿವಾರ, ಆಗಸ್ಟ್ 22, 2020




## ಮನೆಯಲ್ಲಷ್ಟೇ ಗಣಪತಿ ಹಬ್ಬದ ಸಡಗರ

### ಗಣೇಶನ ಮೂರ್ತಿಗಳಿಗೆ ಹೆಚ್ಚಿದ್ದ ಬೇಡಿಕೆ, ಸಾರ್ವಜನಿಕ ಗಣಪತಿ ವಿರಳ

ದಾವಣಗೆರೆ, ಆ. 21- ಕೊರೊನಾ ವಿಘ್ನದಿಂದಾಗಿ ನಗರದಲ್ಲಿ ಗಣಪತಿ ಹಬ್ಬದ ಸಂಭ್ರಮ ತುಸು ಕ್ಷೀಣಿಸಿದೆ. ಸಾರ್ವಜನಿಕ ಗಣಪತಿಗಳ ಸಂಖ್ಯೆ ನಿರೀಕ್ಷೆಯಂತೆ ಇಳಿಮುಖವಾಗಿದೆ.

ಬೃಹತ್ ಪೆಂಡಾಲ್ ನಿರ್ಮಿಸಿ, ವಿವಿಧ ಬಗೆಯ ನೃತ್ಯ ರೂಪಕಗಳು, ವಿವಿಧ ಆಕೃತಿಯ ಗಣೇಶನ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ಹಬ್ಬದ ಕಳೆ ಹೆಚ್ಚಿಸುತ್ತಿದ್ದ ಸಂಘ ಸಂಸ್ಥೆಗಳು ಕೊರೊನಾ ಹಿನ್ನೆಲೆಯಲ್ಲಿ ಸರಳವಾಗಿ ಹಬ್ಬ ಆಚರಿಸಲು ನಿರ್ಧರಿಸಿವೆ.

ಹಬ್ಬದ ಒಂದೆರಡು ವಾರಗಳ ಮುನ್ನವೇ ವಿನಾಯಕನ ಸ್ವಾಗತಕ್ಕೆ ಸಿದ್ಧತೆಗಳು ನಡೆಯುತ್ತಿದ್ದವು. ಮನೆಗಳಲ್ಲಿ ನೆಂಟರಿಷ್ಟರನ್ನು ಆಹ್ವಾನಿಸಲಾಗುತ್ತಿತ್ತು. ಹಬ್ಬದ ಹಿಂದಿನ ದಿನವೇ ಸಂಬಂಧಿಗಳ ಗೃಹ ಪ್ರವೇಶದಿಂದಾಗಿ ಹಬ್ಬದ ಸಂಭ್ರಮ ಇಮ್ಮಡಿಸುತ್ತಿತ್ತು. ಆದರೆ ಸದ್ಯದ ಪರಿಸ್ಥಿತಿಯಲ್ಲಿ ನಗರದಲ್ಲಿ ನೆಂಟರಿಷ್ಟರ ಆಗಮನ ಕಡಿಮೆಯಾಗಿದೆ. ಕುಟುಂಬಸ್ಥರಷ್ಟೇ ಸೇರಿ ಹಬ್ಬ ಆಚರಿಸುವ ನಿರ್ಧಾರದಲ್ಲಿದ್ದಾರೆ. ಸಾರ್ವಜನಿಕವಾಗಿ ಪ್ರತಿಷ್ಠಾಪಿಸಲ್ಪಡುತ್ತಿದ್ದ ಜಾಗದಲ್ಲಿ ಉತ್ಸವದ ಯಾವ ಕುರುಹೂಗಳೂ ಇರಲಿಲ್ಲ.

ಪ್ರತಿ ವರ್ಷವೂ ಬೀದಿ ಬದಿಗಳಲ್ಲಿ ನಾ ಮುಂದು, ತಾ ಮುಂದು ಎಂದು ಗಣೇಶನನ್ನು ಕೂರಿಸಲು ಮುಂದಾಗುತ್ತಿದ್ದ ಯುವಕರು ಕೊರೊನಾ ಭಯಕ್ಕಾಗಿ ಕೈ ಚೆಲ್ಲಿ ಕುಳಿತಿದ್ದಾರೆ.

**ಕೊರೊನಾ ಭಯದಲ್ಲೇ ಗಣೇಶನ ಸ್ವಾಗತಕ್ಕೆ ಸಜ್ಜಾದ ದೇವನಗರಿ**

**ಮೂರ್ತಿಗಳ ಕೊರತೆ, ಹೆಚ್ಚಿದ ಬೇಡಿಕೆ :** ನಗರದ ಮಂಡಿಪೇಟೆ, ಚಾಮರಾಜ ನಗರ, ಹೊಂಡದ ವೃತ್ತ, ಹದಡಿ ರಸ್ತೆ ಸೇರಿದಂತೆ ಹಲವು ಪ್ರಮುಖ ವೃತ್ತ ರಸ್ತೆಗಳಲ್ಲಿ ಗಣಪತಿ ಮೂರ್ತಿಗಳ ಮಾರಾಟದ ಭರಾಟೆ ಪ್ರತಿವರ್ಷ ಹೆಚ್ಚಾಗಿರುತ್ತಿತ್ತು. ಆದರೆ ಈ ಬಾರಿ ಹೊರ ಜಿಲ್ಲೆ, ಹೊರ ರಾಜ್ಯಗಳಿಂದ ಮಾರಾಟಗಾರರು ಅಷ್ಟಾಗಿ ಬಾರದ ಕಾರಣ, ಮೂರ್ತಿಗಳಿಗೆ ಬೇಡಿಕೆ ಹೆಚ್ಚಾಗಿತ್ತು.

ಆರಂಭದಲ್ಲಿಯೇ ಕೊರೊನಾ ಕಂಟಕದಿಂದ ಚಿಂತೆಗೀಡಾಗಿದ್ದ ಮೂರ್ತಿ ತಯಾರಕರು ದೊಡ್ಡ ಗಾತ್ರದ ಮೂರ್ತಿಗಳ ನಿರ್ಮಿಸಿರಲಿಲ್ಲ. ಈ ಹಿನ್ನೆಲೆಯಲ್ಲಿ ಮೂರ್ನಾಕ್ಕು ಅಡಿಗಳ ಎತ್ತರದ ಗಣಪತಿ ಮೂರ್ತಿಗಳ ಸಂಖ್ಯೆ ತೀರಾ ವಿರಳವಾಗಿತ್ತು.

ದರ ಹೆಚ್ಚು: ಮನೆಯಲ್ಲಿ ಪ್ರತಿಷ್ಠಾಪಿಸುವಂತಹ ಒಂದು ಅಥವಾ ಒಂದೂವರೆ ಅಡಿ ಗಾತ್ರದ ಗಣಪತಿ ಮೂರ್ತಿಗಳನ್ನು 600 ರಿಂದ 800 ರೂ. ಬೆಲೆಗಳಿಗೆ ಮಾರಾಟ ಮಾಡಲಾಗುತ್ತಿತ್ತು. ಜನರು ಚೌಕಾಸಿ ಮಾಡಿ ಖರೀದಿಸುತ್ತಿದ್ದುದು ಕಂಡು ಬಂತು.

**ಹಣ್ಣು-ಹೂ ದುಬಾರಿ:** ಶುಕ್ರವಾರ ಮಂಗಳಗೌರಿ ಪೂಜೆ ಹಾಗೂ ಶನಿವಾರ ಚತುರ್ಥಿ ಹಿನ್ನೆಲೆಯಲ್ಲಿ ಮಾರುಕಟ್ಟೆಯಲ್ಲಿ ಹೂವಿಗೆ ಹೆಚ್ಚಿನ ಬೇಡಿಕೆ ಇತ್ತು. ಪರಿಣಾಮ ಹೂ ಬೆಲೆ ದಿಢೀರ್ ಏರಿಕೆಯಾಗಿತ್ತು. ಹಣ್ಣುಗಳ ಬೆಲೆ ಏರಿಕೆಯ ನಡುವೆಯೂ ಅನಿವಾರ್ಯವಾಗಿ ಜನರು ಖರೀದಿಯಲ್ಲಿ ನಿರತರಾಗಿದ್ದರು.

ಪರಿಸರ ಸ್ನೇಹಿ ಗಣಪತಿಗೆ ಬೇಡಿಕೆ: ಕಳೆದ ನಾಲ್ಕೈದು ವರ್ಷಗಳಿಂದ ಪರಿಸರ ಸ್ನೇಹಿ ಗಣೇಶನ ಮೂರ್ತಿಗಳಿಗೆ ಬೇಡಿಗೆ ಹೆಚ್ಚಾಗುತ್ತಿದೆ. ಈ ವರ್ಷವೂ ಸಹ ಬಣ್ಣ ಬಣ್ಣದ ಗಣಪತಿಗಳ ಜೊತೆ ಬಣ್ಣ ಹಚ್ಚದ ಪರಿಸರ ಸ್ನೇಹಿ ಗಣೇಶನ ಮೂರ್ತಿಗಳನ್ನು ಮಾರಾಟಗಾರರು ತಂದಿದ್ದರು. ಈ ರೀತಿ ಮೂರ್ತಿಗಳ ಸಂಖ್ಯೆ ವಿರಳವಾಗುತ್ತಿದ್ದರಿಂದ ಮೊದಲೇ ಮುಂಗಡ ಕೊಟ್ಟು ಖರೀದಿಸುತ್ತಿದ್ದುದು ಕಂಡು ಬಂತು.

## ಸಿಇಟಿ ಫಲಿತಾಂಶ: ಇಂಜಿನಿಯರಿಂಗ್‌ಗೆ 1.53 ಲಕ್ಷ ವಿದ್ಯಾರ್ಥಿಗಳ ಅರ್ಹತೆ

ಬೆಂಗಳೂರು, ಆ. 21 - ವೃತ್ತಿ ಶಿಕ್ಷಣ ಪ್ರವೇಶ ಪರೀಕ್ಷೆ ಫಲಿತಾಂಶ ಪ್ರಕಟಗೊಂಡಿದ್ದು, ಇಂಜಿನಿಯರಿಂಗ್ ವಿಭಾಗದಲ್ಲಿ ನಗರದ ಆರ್‌ವಿ ಕಾಲೇಜಿನ ಎಂ. ರಕ್ಷಿತ್ ಮೊದಲ ರಾಂಕ್ ಗಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಶಿಕ್ಷಣ ಇಲಾಖೆ ಹೊಣೆ ಹೊತ್ತಿರುವ ಉಪಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವತ್ಥ್‌ನಾರಾಯಣ್ ಫಲಿತಾಂಶ ಪ್ರಕಟಿಸಿದ್ದಲ್ಲದೆ, ಪರೀಕ್ಷೆ ಮುಗಿದ 21ನೇ ದಿನಕ್ಕೆ ಫಲಿತಾಂಶ ನೀಡಿದ್ದೇವೆ ಎಂದಿದ್ದಾರೆ.

ಇಂಜಿನಿಯರಿಂಗ್ ವಿಭಾಗಕ್ಕೆ 1,53,470 ವಿದ್ಯಾರ್ಥಿಗಳು ಅರ್ಹತೆ ಪಡೆದಿದ್ದಾರೆ. ಕೃಷಿ ಪದವಿಗೆ 1,27,626, ಪಶುವೈದ್ಯಕೀಯ 1,29,666, ಬಿ ಮತ್ತು ಡಿ ಫಾರಂ ಕೋರ್ಸ್‌ಗೆ 1,55,552 ವಿದ್ಯಾರ್ಥಿಗಳು ಅರ್ಹತೆ ಪಡೆದಿದ್ದಾರೆ ಎಂದು ತಿಳಿಸಿದರು.

ಇಡೀ ಜಗತ್ತೇ ಕೋವಿಡ್ ಬಿಕ್ಕಟ್ಟಿನಲ್ಲಿದ್ದಾಗ, ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ನಡೆಸಲು ಸಾಧ್ಯವೇ ಇಲ್ಲ ಎನ್ನುತ್ತಿದ್ದ ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿ ಈ ಪರೀಕ್ಷೆಯನ್ನು ನಡೆಸಲಾಯಿತು ಎಂದವರು ಹೇಳಿದ್ದಾರೆ.

ಜೆಇಇ, ನೀಟ್ ಮುಂತಾದ ಪರೀಕ್ಷೆಗಳ ಕೌನ್ಸೆಲಿಂಗ್ ವೇಳಾಪಟ್ಟಿಯನ್ನು ನೋಡಿಕೊಂಡು ಸಿಇಟಿ ಕೌನ್ಸೆಲಿಂಗ್ ವೇಳಾಪಟ್ಟಿಯನ್ನು ಬಹುತೇಕ ಅಕ್ಟೋಬರ್‌ನಲ್ಲಿ ನಡೆಸುವುದಾಗಿ ಇದೇ ಸಂದರ್ಭದಲ್ಲಿ ತಿಳಿಸಿದರು.

ಆನ್‌ಲೈನ್ ಕೌನ್ಸೆಲಿಂಗ್‌ಗೆ ತಯಾರಿ ಮಾಡಿಕೊಂಡಿದ್ದೇವೆ. ಒಟ್ಟು ಎರಡು ಸುತ್ತಿನ ಕೌನ್ಸೆಲಿಂಗ್ ಮತ್ತು ಅಂತಿಮವಾಗಿ ಒಂದು ವಿಸ್ತರಣಾ ಸುತ್ತು ಇರುತ್ತದೆ. ಇದು





ಕೇವಲ ಬದಲಾವಣೆ ಇತ್ಯಾದಿಗಳಿಗೆ ಸಂಬಂಧಿಸಿದ ಮಾಪಪ್ ರೌಂಡ್ ಆಗಿರುತ್ತದೆ ಎಂದು ಉಪಮುಖ್ಯಮಂತ್ರಿ ಮಾಹಿತಿ ನೀಡಿದರು.

2ನೇ ಸುತ್ತಿನ ಕೌನ್ಸೆಲಿಂಗ್ ಮುಗಿಯುತ್ತಿದ್ದಂತೆ ತಮ್ಮ ಕಾಲೇಜುಗಳನ್ನು ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳು ಕೊಂಚವೂ ತಡ ಮಾಡದೇ ತಮ್ಮ ಮೂಲ ದಾಖಲೆಗಳನ್ನು ಸಲ್ಲಿಸಿ ಕಾಲೇಜುಗಳಲ್ಲಿ ಪ್ರವೇಶಾತಿ ಪಡೆಯಬೇಕು. ಒಂದು ವೇಳೆ ಶುಲ್ಕ ಪಾವತಿ ಮಾಡಿ ದಾಖಲೆಗಳನ್ನು ಸಲ್ಲಿಸದಿದ್ದರೆ ಆ ಪ್ರವೇಶಾತಿ ತಾನಾಗಿಯೇ ರದ್ದಾಗುತ್ತದೆ. ಈ ಅಂಶವನ್ನು ವಿದ್ಯಾರ್ಥಿಗಳು ಮತ್ತು ಪೋಷಕರು ತಪ್ಪದೇ ಗಮನದಲ್ಲಿ ಇಟ್ಟುಕೊಳ್ಳಬೇಕು ಎಂದು ಉಪ ಮುಖ್ಯಮಂತ್ರಿ ಹೇಳಿದರು.

ಇಡೀ ದೇಶಕ್ಕೆ ಸಿಇಟಿಯನ್ನು ಕೊಟ್ಟು ಉನ್ನತ ಶಿಕ್ಷಣಕ್ಕೆ ಹೊಸ ಆಯಾಮ ನೀಡಿದ ಕರ್ನಾಟಕದಲ್ಲಿ ಈ ವರ್ಷ ಕೊರೊನಾ ಕಾರಣಕ್ಕೆ ಪರೀಕ್ಷೆ ನಡೆಸುವುದೇ ಕಷ್ಟವೆನ್ನುವ ಪರಿಸ್ಥಿತಿ ತಲೆದೋರಿತ್ತು. ಆದರೆ, ವಿದ್ಯಾರ್ಥಿಗಳು ಹಾಗೂ ಪೋಷಕರ ಹಿತದೃಷ್ಟಿಯಿಂದ ಪರೀಕ್ಷೆಯನ್ನು ನಡೆಸಲಾಯಿತಲ್ಲದೆ, ಕೊರೊನಾ ಪಾಸಿಟಿವ್ ಇದ್ದ 63 ವಿದ್ಯಾರ್ಥಿಗಳಿಗೂ ಪ್ರತ್ಯೇಕವಾಗಿ ಪರೀಕ್ಷೆ ಬರೆಯಲು ಅವಕಾಶ ನೀಡಿದ್ದು, ಸಿಇಟಿ ಇತಿಹಾಸದಲ್ಲಿ ಮೈ ಲು ಗ ಲ್ಲಾ ಗಿ (11ನೇ ಪುಟಕ್ಕೆ)

### ಚಿನ್ಮಯ್ ಗೆ 6ನೇ ರ್‍ಯಾಂಕ್



ದಾವಣಗೆರೆ, ಆ. 21- ನಗರದ ಎಸ್.ಎಂ.ವಿ. ಪಿಯು ಕಾಲೇಜು ವಿದ್ಯಾರ್ಥಿ ಚಿನ್ಮಯ್ ಎಸ್. ಭಾರಧ್ವಾಜ್ ಬಿಎಸ್ಸಿ ಅಗ್ರಿಕಲ್ಚರ್ ವಿಭಾಗದಲ್ಲಿ ರಾಜ್ಯಕ್ಕೆ 6ನೇ ರ್‍ಯಾಂಕ್ ಹಾಗೂ ಜಿಲ್ಲೆಗೆ ಪ್ರಥಮ ರ್‍ಯಾಂಕ್ ಪಡೆದಿದ್ದಾರೆ.


ದಾವಣಗೆರೆ ಸರಸ್ವತಿ ನಗರದ ವಾಸಿ, ಯುಬಿಡಿಟಿ ಕಾಲೇಜಿನಲ್ಲಿ ಪ್ರಾಧ್ಯಾಪಕ, ಡಾ. ಶ್ರೀಧರ ಮೂರ್ತಿ ಹಾಗೂ ಎಸ್.ವಿ. ಅನಿತಾ ಮೂರ್ತಿ ಅವರ ಪುತ್ರ ಚಿನ್ಮಯ್, ನ್ಯಾಚುರೋಪತಿಯಲ್ಲೂ 17ನೇ ರ್‍ಯಾಂಕ್, ವೆಟರ್ನರಿ ಸೈನ್ಸ್‌ನಲ್ಲಿ 19ನೇ ರ್‍ಯಾಂಕ್, ಡಿ.ಫಾರ್ಮ ಹಾಗೂ ಬಿ. ಫಾರ್ಮನಲ್ಲಿ 26ನೇ ರ್‍ಯಾಂಕ್, ಇಂಜಿನಿಯರಿಂಗ್‌ನಲ್ಲಿ 74ನೇ ರ್‍ಯಾಂಕ್ ಗಳಿಸಿದ್ದಾರೆ.

'ಜನತಾವಾಣಿ'ಯೊಂದಿಗೆ ಸಂತಸ ಹಂಚಿಕೊಂಡ ಚಿನ್ಮಯ್, 6ನೇ ರ್‍ಯಾಂಕ್ ನಿರೀಕ್ಷೆ ಇರಲಿಲ್ಲ. ಆದರೆ ನೂರಕ್ಕೆ ನೂರರಷ್ಟು ಶ್ರಮ ಪಟ್ಟು ಓದುತ್ತಿದ್ದೆ. ಬಿಎಸ್ಸಿ ಅಗ್ರಿ ಕಲ್ಚರ್ ವಿಭಾಗದಲ್ಲಿ 6ನೇ ರ್‍ಯಾಂಕ್ ಬಂದಿರುವುದು ಸಂತಸವಾಗಿದೆ. ಮುಂದೆ ನೀಟ್ ಪರೀಕ್ಷೆಗೆ ತಯಾರಿ ಮಾಡಿಕೊಳ್ಳುತ್ತೇನೆ ಎಂದು ಹೇಳಿದರು.

ದಾವಣಗೆರೆ ಜಿಲ್ಲೆಯಿಂದ ಸಿಇಟಿ ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದ 6972 ವಿದ್ಯಾರ್ಥಿಗಳ ಪೈಕಿ 6423 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು.

ಪ್ರಕೃತಿ ಚಿಕಿತ್ಸೆ ಹಾಗೂ ಯೋಗ ವಿಜ್ಞಾನಗಳ ವಿಭಾಗದಲ್ಲಿ 5326, ಇಂಜಿನಿಯರಿಂಗ್ ವಿಭಾಗದಲ್ಲಿ 5668, ಬಿಎಸ್ಸಿ ಅಗ್ರಿ 5291, ಪಶು ವೈದ್ಯಕೀಯ ವಿಜ್ಞಾನದಲ್ಲಿ 5326, ಬಿ ಫಾರ್ಮಾ 5703 ಹಾಗೂ ಡಿ ಫಾರ್ಮಾದಲ್ಲಿ 5710 ವಿದ್ಯಾರ್ಥಿಗಳು ರ್‍ಯಾಂಕ್ ಪಡೆದಿದ್ದಾರೆ.

## 237 ಪಾಸಿಟಿವ್, 7 ಸಾವು, 158 ಬಿಡುಗಡೆ



ದಾವಣಗೆರೆ, ಆ. 21- ಜಿಲ್ಲೆಯಲ್ಲಿ ಶುಕ್ರವಾರ 237 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟ ವರದಿಯಾಗಿದೆ. 7 ಜನರು ಸಾವನ್ನಪ್ಪಿದ್ದು, 158 ಜನರು ಸೋಂಕು ಮುಕ್ತರಾಗಿ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ.

ಇಲ್ಲಿಯವರೆಗೆ ಜಿಲ್ಲೆಯಲ್ಲಿ 6507 ಜನರಲ್ಲಿ ಸೋಂಕು ಕಾಣಿಸಿಕೊಂಡಿದ್ದು, 4388 ಜನರು ಗುಣಮುಖರಾಗಿದ್ದಾರೆ. ಜಿಲ್ಲೆಯಲ್ಲಿ ಒಟ್ಟು 237 ಸಕ್ರಿಯ ಪ್ರಕರಣಗಳಿವೆ.

ದಾವಣಗೆರೆ ತಾಲ್ಲೂಕಿನಲ್ಲಿ 90, ಹರಿಹರ 15, ಜಗಳೂರು 17, ಚನ್ನಗಿರಿ 43, ಹೊನ್ನಾಳಿ 68 ಹಾಗೂ ಹೊರ ಜಿಲ್ಲೆಯ 4 ಜನರಲ್ಲಿ ಸೋಂಕು ದೃಢಪಟ್ಟಿದೆ.

ದಾವಣಗೆರೆ ಜೆಜೆಎಂಸಿ ಕಾಲೇಜಿನ ಮಕ್ಕಳ ವಿಭಾಗ 25ರ ಪುರುಷ, ಆವರೆಗೆರೆಯ ಕೆಎಸ್ಆರ್‌ಟಿಸಿ ಬಡಾವಣೆಯ 29ರ ಪುರುಷ, ಮಣಿಕಂಠ ವೃತ್ತದ ಬಳಿಯ 25ರ ಪುರುಷ, ಶಿವಾಜಿ ವೃತ್ತದ 32ರ ಪುರುಷ, ಕೆಟಿಜೆ ನಗರದ 45ರ ಪುರುಷ, ಐಗೂರಿನ 58ರ ಪುರುಷ, ಭಾರತ್ ಕಾಲೋಜನಿಯ 60ರ ಪುರುಷ, 20ರ ಪುರುಷ, ವಿದ್ಯಾನಗರ 9ನೇ ಕ್ರಾಸ್‌ನ 45 ರ ಮಹಿಳೆ, 21ರ ಪುರುಷ, 20ರ ಪುರುಷ, 10ನೇ ಕ್ರಾಸ್‌ನ 42ರ ಪುರುಷ, ಯಲ್ಲಮ್ಮನಗರದ 11ನೇ ಕ್ರಾಸ್‌ನ 42ರ ಮಹಿಳೆ.

ಆಂಜನೇಯ ಬಡಾವಣೆಯ 52ರ ಮಹಿಳೆ, ಕಾಯಿಪೇಟೆ ಮುಖ್ಯ ರಸ್ತೆಯ 48ರ ಪುರುಷ, ಕೊಗ್ಗನೂರಿನ 45ರ ಮಹಿಳೆ, ಸರಸ್ವತಿ ನಗರದ 21ರ ಪುರುಷ, ಶಿವಕುಮಾರ ಸ್ವಾಮಿ ಬಡಾವಣೆಯ 40ರ ಪುರುಷ, ಕೆಬಿ ಬಡಾವಣೆಯ 65ರ ಪುರುಷ, ವಿನಾಯಕ ಬಡಾವಣೆಯ 26ರ ಪುರುಷ, ಎಂ.ಸಿ.ಸಿ. ಬಿ ಬ್ಲಾಕ್‌ನ 73ರ ಮಹಿಳೆ, ಕೊಟ್ಟುರೇಶ್ವರ ಬಡಾವಣೆಯ 29ರ ಮಹಿಳೆ, ಶ್ರೀರಾಮ ಡಾವಣೆ 1ನೇ ಕ್ರಾಸ್‌ನ 10 ಬಾಲಕಿ.

ವಿನೋಬನಗರ 14ನೇ ಕ್ರಾಸ್‌ನ 18ರ ಮಹಿಳೆ, ಕೆಟಿಜೆ ನಗರ 13ನೇ ಕ್ರಾಸ್‌ನ 6ರ ಬಾಲಕಿ, 9ರ ಬಾಲಕ, 35ರ (11ನೇ ಪುಟಕ್ಕೆ)

## ಜೆಇಇ, ನೀಟ್ ಪರೀಕ್ಷೆಗಳ ಮುಂದೂಡಿಕೆ ಇಲ್ಲ: ಕೇಂದ್ರ

ನವದೆಹಲಿ, ಆ. 21 - ಜೆಇಇ ಮೇನ್ ಹಾಗೂ ನೀಟ್ ಪರೀಕ್ಷೆಗಳನ್ನು ಈ ಹಿಂದೆ ನಿಗದಿಯಾದ ರೀತಿಯಲ್ಲಿ ನಡೆಸಲಾಗುವುದು ಎಂದು ಕೇಂದ್ರ ಸರ್ಕಾರ ತಿಳಿಸಿದೆ.



ಪರೀಕ್ಷೆ ನಡೆಸಲು ಸುಪ್ರೀಂ ಕೋರ್ಟ್ ಆದೇಶ ಹೊರಡಿಸಿದ ನಂತರ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್.ಟಿ.ಎ.) ಜೆಇಇ ಪರೀಕ್ಷೆಗಳಿಗೆ ಪ್ರವೇಶ ಪತ್ರಗಳನ್ನು ಬಿಡುಗಡೆ ಮಾಡಿದೆ. ಶುಕ್ರವಾರದವರೆಗೆ 9.49 ಲಕ್ಷ ಅಭ್ಯರ್ಥಿಗಳು ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಂಡಿದ್ದಾರೆ.

ಜೆಇಇ ಮೇನ್ ಪರೀಕ್ಷೆಯನ್ನು ಸೆಪ್ಟೆಂಬರ್ 1ರಿಂದ 6ರ ನಡುವೆ ಮತ್ತು ನೀಟ್ ಪರೀಕ್ಷೆಯನ್ನು ಸೆಪ್ಟೆಂಬರ್ 13ರಂದು ನಡೆಸಲು ನಿರ್ಧರಿಸಲಾಗಿತ್ತು.

ಈ ಬಗ್ಗೆ ಹೇಳಿಕೆ ನೀಡಿರುವ ಉನ್ನತ ಶಿಕ್ಷಣ ಸಚಿವಾಲಯದ ಕಾರ್ಯದರ್ಶಿ ಅಮಿತ್ ಖರೆ, ಪರೀಕ್ಷೆಗಳನ್ನು ಮುಂದೂಡುವುದಿಲ್ಲ. ಒಂದು ವರ್ಷ ಪೋಲಾಗಬಾರದು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಮತ್ತೊಂದೆಡೆ ಲಕ್ಷಾಂತರ ಪೋಷಕರು ಹಾಗೂ ಅಭ್ಯರ್ಥಿಗಳು ನಮಗೆ ಪತ್ರಗಳನ್ನು ಬರೆಯುತ್ತಿದ್ದು ನಿಗದಿಯಂತೆಯೇ ಪರೀಕ್ಷೆ ನಡೆಸಬೇಕೆಂದು ಒತ್ತಾಯಿಸುತ್ತಿದ್ದಾರೆ ಎಂದಿದ್ದಾರೆ.

## ಚುನಾವಣೆಗಾಗಿ ಮಾರ್ಗಸೂಚಿ ಪ್ರಕಟ

ನವದೆಹಲಿ, ಆ. 21 - ಕೊರೊನಾ ಸಮಯದಲ್ಲಿ ಚುನಾವಣೆ ನಡೆಸಲು ಮಾರ್ಗಸೂಚಿ ಪ್ರಕಟಿಸಿರುವ ಚುನಾವಣಾ ಆಯೋಗ, ಮತ ಯಂತ್ರ ಬಳಸುವಾಗ ಮತದಾರರಿಗೆ ಗ್ಲೌವ್ಸ್ ನೀಡಬೇಕು ಹಾಗೂ ಕ್ವಾರಂಟೈನ್‌ನಲ್ಲಿರುವ ಕೊರೊನಾ ರೋಗಿಗಳ ಮತದಾನದ ಕೊನೆ ಗಂಟೆಯಲ್ಲಿ ಮತದಾನ ಮಾಡಲುಅವಕಾಶ ನೀಡಬೇಕು ಎಂದು ತಿಳಿಸಿದೆ.

**ಮತದಾರರಿಗೆ ಗ್ಲೌಸ್, ಸೋಂಕಿತರಿಗೂ ಮತದಾನಕ್ಕೆ ಅವಕಾಶ**

ಕಂಟೈನ್‌ಮೆಂಟ್ ವಲಯದಲ್ಲಿರುವ ಮತದಾರರಿಗೆ ಪ್ರತ್ಯೇಕ ಮಾರ್ಗಸೂಚಿಗಳನ್ನು ಪ್ರಕಟಿಸಲಾಗಿದೆ.

ಅಂಗವೈಕಲ್ಯತೆಯನ್ನು ಎದುರಿಸುತ್ತಿರುವವರು ಹಾಗೂ 80 ವರ್ಷ ಮೀರಿದವರು ಅಂಚೆ ಮತದಾನ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಕೊರೊನಾ ಸೋಂಕು ಹೊಂದಿರುವವರು, ಸೋಂಕಿನ ಶಂಕೆಯಲ್ಲಿರುವವರು, ಮನೆಯಲ್ಲಿ (11ನೇ ಪುಟಕ್ಕೆ)

## ವಾರದೊಳಗೆ ಆರೋಗ್ಯಾಧಿಕಾರಿ ಆತ್ಮಹತ್ಯೆ ತನಿಖೆ

### 50 ಲಕ್ಷ ರೂ. ಪರಿಹಾರಕ್ಕೆ ಮುಖ್ಯಮಂತ್ರಿ ಯಡಿಯೂರಪ್ಪ ಆದೇಶ

ಬೆಂಗಳೂರು, ಆ. 21 - ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಆರೋಗ್ಯಾಧಿಕಾರಿ ಡಾ. ಎಸ್.ಆರ್. ನಾಗೇಂದ್ರ ಆತ್ಮಹತ್ಯೆ ಮಾಡಿಕೊಂಡ ಪ್ರಕರಣದ ಬಗ್ಗೆ ತನಿಖೆ ನಡೆಸಲು ಆದೇಶಿಸಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಕುಟುಂಬಕ್ಕೆ 50 ಲಕ್ಷ ರೂ.ಗಳ ಪರಿಹಾರ ಪ್ರಕಟಿಸಿದ್ದಾರೆ.

ಹಿರಿಯ ಅಧಿಕಾರಿಗಳ ಪೀಡನೆಯಿಂದಾಗಿ ನಾಗೇಂದ್ರ ಆತ್ಮಹತ್ಯೆ ಮಾಡಿಕೊಂಡಿದ್ದಾರೆನ್ನಲಾಗಿದೆ. ಈ ಬಗ್ಗೆ ತನಿಖೆ ನಡೆಸಿ ಸತ್ಯ ಬಯಲಿಗೆ ತರಲಾಗುವುದು. ವಾರದಲ್ಲಿ ತನಿಖೆ ಪೂರ್ಣಗೊಳಿಸಲಾಗುವುದು ಎಂದು ಯಡಿಯೂರಪ್ಪ ಹೇಳಿದ್ದಾರೆ.

ಮೈಸೂರಿನ ಆಲನಹಳ್ಳಿಯ ಸ್ವಂತ ನಿವಾಸದಲ್ಲಿ ಡಾ. ನಾಗೇಂದ್ರ ಆತ್ಮಹತ್ಯೆ ಮಾಡಿಕೊಂಡಿದ್ದರು. ಈ ಬಗ್ಗೆ ಯಡಿಯೂರಪ್ಪ ವಿಷಾದ ವ್ಯಕ್ತಪಡಿಸಿದ್ದಾರೆ.

ಕರ್ತವ್ಯದಲ್ಲಿರುವಾಗ ಸಾವನ್ನಪ್ಪುವ ವೈದ್ಯರಿಗೆ 30 ಲಕ್ಷ ರೂ. ಪರಿಹಾರ ನೀಡಲಾಗುತ್ತದೆ. ಇದನ್ನು ವಿಶೇಷ ಪ್ರಕರಣ ಎಂದು ಪರಿಗಣಿಸಿ ಕುಟುಂಬದವರಿಗೆ 50 ಲಕ್ಷ ರೂ. ಪರಿಹಾರ ನೀಡಲಾಗುವುದು. ಕುಟುಂಬದ ಒಬ್ಬರು ಅವಲಂಬಿತರಿಗೆ ಉದ್ಯೋಗ ಹಾಗೂ ಇತರೆ ಸೌಲಭ್ಯ ಕಲ್ಪಿಸಲಾಗುವುದು ಎಂದು ಯಡಿಯೂರಪ್ಪ ಹೇಳಿದ್ದಾರೆ.

ಈ ನಡುವೆ, ಉನ್ನತ ಅಧಿಕಾರಿಗಳ ಜೊತೆ ನಾಗೇಂದ್ರ ಮಾತನಾಡಿದ್ದಾರೆ ಎಂಬ ಆಡಿಯೋ ವೈರಲ್ ಆಗಿದೆ.

ಇದರಲ್ಲಿ ಉನ್ನತ ಅಧಿಕಾರಿಯೊಬ್ಬರು ಎಷ್ಟು ಸ್ವಾಬ್ ತೆಗೆಯೋಕೆ ಹೇಳಿದ್ದರೆ ಎಷ್ಟು ತೆಗೆದಿದ್ದೀರಿ? ನೀವು ತಮಾಷೆ ಮಾಡ್ತೀರಾ? ಆಟ ಆಡಲಿಕ್ಕಾ ಕಿಟ್ ಕೊಟ್ಟಿರುವುದು? ನೀವು ನನ್ನ ತಾಳ್ಮೆಯ ಜೊತೆ ಆಟವಾಡುತ್ತಿದ್ದೀರ. ಒಂದು ವಾರದಿಂದ (11ನೇ ಪುಟಕ್ಕೆ)

**ವೈದ್ಯಗೆ ಹಿರಿಯ ಅಧಿಕಾರಿ ತರಾಟೆಗೆ ತೆಗೆದುಕೊಂಡ ಆಡಿಯೋ ವೈರಲ್**

**ಅಮಾನತ್ತು ಕ್ರಮ ತೆಗೆದುಕೊಳ್ಳದೇ ಇದ್ದರೆ ಪ್ರತಿಭಟನೆಗೆ ವೈದ್ಯಕೀಯ ಒಕ್ಕೂಟದ ಎಚ್ಚರಿಕೆ**

## ಐವರಿಗೆ ಖೇಲ್ ರತ್ನ ಪ್ರಶಸ್ತಿ

### 27 ಕ್ರೀಡಾಪಟುಗಳಿಗೆ ಅರ್ಜುನ ಪ್ರಶಸ್ತಿ

### ಸಾಕ್ಷಿ, ಮೀರಾಬಾಯಿಗೆ ಅರ್ಜುನ ಪ್ರಶಸ್ತಿ ಇಲ್ಲ

ನವದೆಹಲಿ, ಆ.21 - ಈ ಹಿಂದೆ ಖೇಲ್ ರತ್ನ ಪ್ರಶಸ್ತಿ ಪಡೆದಿದ್ದ ಸಾಕ್ಷಿ ಮಲಿಕ್ ಹಾಗೂ ಮಿರಾಬಾಯಿ ಚಾನು ಅವರಿಗೆ ಕೇಂದ್ರ ಕ್ರೀಡಾ ಸಚಿವಾಲಯ ಅರ್ಜುನ ಪ್ರಶಸ್ತಿ ನೀಡದಿರಲು ನಿರ್ಧರಿಸಿದೆ. ಉಳಿದಂತೆ ಶಿಫಾರಸ್ಸು ದೊರೆ 27 ಕ್ರೀಡಾಪಟುಗಳಿಗೆ ಅರ್ಜುನ ಪ್ರಶಸ್ತಿ ನೀಡಲಾಗುವುದು.

ಕಳೆದ ವಾರ ಶಿಫಾರಸ್ಸು ಸಲ್ಲಿಸಿದ್ದ ನಿವೃತ್ತ ನ್ಯಾಯಮೂರ್ತಿ ಮುಕುಂದಕಮ್ ಶರ್ಮಾ ನೇತೃತ್ವದ ಆಯ್ಕೆ ಸಮಿತಿ 29 ಕ್ರೀಡಾಪಟುಗಳಿಗೆ ಅರ್ಜುನ ಪ್ರಶಸ್ತಿ ನೀಡುವಂತೆ ಕ್ರೀಡಾ ಸಚಿವಾಲಯಕ್ಕೆ ಶಿಫಾರಸ್ಸು ಮಾಡಿತ್ತು.

ರಿಯೋ ಒಲಂಪಿಕ್ಸ್‌ನಲ್ಲಿ ಕಂಚಿನ ಪದಕ ಪಡೆದಿದ್ದ ಕುಸ್ತಿ ಪಟು ಸಾಕ್ಷಿ ಹಾಗೂ 2017ರ ವೇಯ್ಟ್‌ಲಿಫ್ಟಿಂಗ್ ವರ್ಲ್ಡ್ ಚಾಂಪಿಯನ್ ಮೀರಾಬಾಯಿ ಅವರಿಗೆ ಪ್ರಶಸ್ತಿ ನೀಡಲು ಶಿಫಾರಸ್ಸು ಮಾಡಲಾಗಿತ್ತು. ಆದರೆ, ಅರ್ಜುನ ಪ್ರಶಸ್ತಿ ನೀಡುವ ವಿಷಯವನ್ನು ಕ್ರೀಡಾ ಸಚಿವ ಕಿರಣ್ ರಿಜಿಜು ಅವರ ವಿವೇಚನೆಗೆ ಬಿಡಲಾಗಿತ್ತು.

ಉಭಯ ಕ್ರೀಡಾಪಟುಗಳಿಗೆ ಈಗಾಗಲೇ ದೇಶದ ಅತ್ಯುನ್ನತ ಕ್ರೀಡಾ (11ನೇ ಪುಟಕ್ಕೆ)

**ಕೊರೊನಾ ಹಿನ್ನೆಲೆ: ಆನ್‌ಲೈನ್ ಮೂಲಕ ಪ್ರಶಸ್ತಿ ಪ್ರದಾನ**

## ಕೆಪಿಎಸ್‌ಸಿ ಪರೀಕ್ಷೆ: ಸಾರಿಗೆ ಸೌಲಭ್ಯ

ಬೆಂಗಳೂರು, ಆ. 21 - ಕರ್ನಾಟಕ ಲೋಕಸೇವಾ ಆಯೋಗವು (ಕೆಪಿಎಸ್ಸಿ) ಆ. 24ರಂದು ನಡೆಸುವ ಗೆಜೆಟೆಡ್ ಪ್ರೊಬೆಷನರ್ಸ್ ಹುದ್ದೆಗಳ ಪೂರ್ವಭಾವಿ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳ ಅನುಕೂಲಕ್ಕಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಬಸ್ ಸೇವೆ ಕಲ್ಪಿಸಿದೆ.

ಪರೀಕ್ಷೆಯ ಹಿಂದಿನ ದಿನ ಅಂದರೆ ಆಗಸ್ಟ್ 23ರಂದು ಮತ್ತು ಪರೀಕ್ಷೆ ದಿನ ಪ್ರಮುಖ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಿಂದ ಪರೀಕ್ಷೆ ನ ಡೆ ಯು ವ (11ನೇ ಪುಟಕ್ಕೆ)

**ಭದ್ರಾ ಜಲಾಶಯ**

ಇಂದಿನ ಮಟ್ಟ : 181 ಅಡಿ 1 ಇಂಚು
ಒಳ ಹರಿವು : 7341 ಕ್ಯೂಸೆಕ್ಸ್
ಹೊರ ಹರಿವು : 2712 ಕ್ಯೂಸೆಕ್ಸ್
ಹಿಂದಿನ ವರ್ಷದ್ದು : 185.3 ಅಡಿ

# SIR MV bagged many

## Congratulations to the CET rankers from SIR MV

**STATE 6th Rank**



CHINMAYA S. B
H.T. NO. Lh386

B.Sc., Agri : 6
BNYS : 17
Vet. Sc., : 19
B. Pharma : 26
D. Pharma : 26
Engg. : 74

**DIST. 1st Rank**

NISARGA H.S — 13
BNYS : 13
VET Sc., : 20
B. Pharma : 28
D. Pharma : 28
B.Sc., Agri : 78
Engg : 494

CHIRANTAN — 37
B.Sc., Agri : 37
BNYS : 104
VET Sc., : 172
B. Pharma : 285
D. Pharma : 285
Engg : 290

DAR — 55

PRAVEEN — 136
BNYS : 136
VET Sc., : 175
B.Sc., Agri : 232
B. Pharma : 275
D. Pharma : 275
Engg : 1046

BHARATH GOWDA — 185
BNYS : 185
VET Sc., : 242
B.Sc., Agri : 314
B. Pharma : 435
D. Pharma : 435
Engg : 1243

VR — 216

ANOOP — 370
Engg : 370
B.Sc., Agri : 427
B. Pharma : 920
D. Pharma : 920
BNYS : 2223
VET Sc., : 2641

ANUSHREE — 420
B.Sc., Agri : 420
Engg : 794
BNYS : 1487
VET Sc., : 2166
B. Pharma : 2832
D. Pharma : 2832

SHESHADRI — 422
B.Sc., Agri : 422
BNYS : 610
VET Sc., : 920
B. Pharma : 1410
D. Pharma : 1410
Engg : 1552

VINAY G. K. — 463
BNYS : 463
B.Sc., Agri : 509
VET Sc., : 723
B. Pharma : 1072
D. Pharma : 1072
Engg : 1676

GAGAN — 497
BNYS : 497
VET Sc., : 616
B.Sc., Agri : 819
B. Pharma : 1028
D. Pharma : 1028
Engg : 2909

CHETAN K — 532
B.Sc., Agri : 532
VET Sc., : 702
BNYS : 746
B. Pharma : 1069
D. Pharma : 1069
Engg : 1797

DISHA — 574
BNYS : 574
B.Sc., Agri : 581
VET Sc., : 775
B. Pharma : 1158
D. Pharma : 1158
Engg : 1986

CHANDANA — 678
BNYS : 678
B.Sc., Agri : 860
VET Sc., : 982
B. Pharma : 1516
D. Pharma : 1516
Engg : 2879

POORNIMA — 695
BNYS : 695
B.Sc., Agri : 750
VET Sc., : 1086
B. Pharma : 1592
D. Pharma : 1592
Engg : 2335

BHARATH — 732
BNYS : 732
B.Sc., Agri : 1320
VET Sc., : 1115
B. Pharma : 1554
D. Pharma : 1554
Engg : 3184

ARA — 732

KHAZI DANIYAL 1005 · AVVANNA 1036 · SOMYUKTHA 1061 · HARSHITHA 1090 · VIDYASAGAR 1113 · TEJASHWINI 1148 · RAMESH 1174 · ROSHAN 1182 · AISHWARYA 1195 · CHITRA 1210 · SA 1211

SPOORTHY 1650 · SIDHARTHA 1719 · GIRISH 1868 · VISHWAS 1903 · PRAJWAL 1964 · CHANDANA 1969 · PAVAN KUMAR 1993 · SYEDA SAMREEN 2071 · RAJESH 2124 · SANJANA 2143 · SIDD 2155

PRAMOD 2468 · MANJUNATH 2474 · RAMITHA 2482 · SPOORTHI 2492 · SHAHEENTAG 2533 · MANOJ 2633 · MOHAN 2669 · NISARGA 2672 · ANANYA 2756 · KAVANA 2781 · KI 2783

ANANYA 3075 · VARUN 3081 · VISHNAVI 3086 · CHAYA 3287 · ANUSHA 3304 · VINAYAKA 3311 · GHANASHREE 3337 · SAHANA 3461 · DIVYA 3497 · JANHAVI 3526 · AKS 3547

HEMANTH 4036 · SPANDANA 4047 · DIYA 4064 · SHIRISHA 4129 · ANANYA 4222 · SUHAS 4309 · NEHA 4320 · NIHARIKA 4337 · GOWRI 4364 · HARSHA 4398 · SAN 4404

**Below 500 — 121 Ranks**

**Below 1000 — 183 Ranks**

**Below 2000 — 325 Ranks**

**Below 5000 — 6**

# top ranks in CET-2020

SHAN
S : 55
c., : 58
ma : 103
ma : 103
gri : 125
: 625

YUVARAJA
60
BNYS : 60
B.Sc., Agri : 68
VET Sc., : 102
B. Pharma : 159
D. Pharma : 159
Engg : 481

SANGANAGOWDA
66
VET Sc., : 66
BNYS : 88
B. Pharma : 119
D. Pharma : 119
B.Sc., Agri : 153
Engg : 888

MANJUNATH
76
VET Sc., : 76
B.Sc., Agri : 104
BNYS : 130
B. Pharma : 147
D. Pharma : 147
Engg : 640

JITHENDRA
86
BNYS : 86
VET Sc., : 132
B.Sc., Agri : 140
B. Pharma : 214
D. Pharma : 214
Engg : 731

SANDEEP
90
B.Sc., Agri : 90
Engg : 137
BNYS : 402
B. Pharma : 479
D. Pharma : 479
VET Sc., : 543

ANUSHA
91
BNYS : 91
B.Sc., Agri : 107
VET Sc., : 182
B. Pharma : 280
D. Pharma : 280
Engg : 566

SUMUKHA
97
BNYS : 97
B.Sc., Agri : 151
VET Sc., : 178
B. Pharma : 288
D. Pharma : 288
Engg : 702

HARISH BABU
117
B.Sc., Agri : 117
Engg : 118
B. Pharma : 278
D. Pharma : 278
BNYS : 808
VET Sc., : 1042

DARSHAN V.
123
Engg : 123
B. Pharma : 235
D. Pharma : 235

SACHIN B.
124
VET Sc., : 124
BNYS : 207
B. Pharma : 228
D. Pharma : 228
B.Sc., Agri : 513
Engg : 1842

INDA
Agri : 216
g : 296
rma : 453
rma : 453
c., : 1041
S : 1132

NISHANTH
245
VET Sc., : 245
BNYS : 365
B. Pharma : 429
D. Pharma : 429
B.Sc., Agri : 586
Engg : 1743

NITHIN
249
BNYS : 249
VET Sc., : 387
B.Sc., Agri : 415
B. Pharma : 703
D. Pharma : 703
Engg : 1780

RAHUL
254
VET Sc., : 254
B.Sc., Agri : 264
BNYS : 383
B. Pharma : 416
D. Pharma : 416
Engg : 1107

VEDASHREE
262
BNYS : 262
VET Sc., : 319
B.Sc., Agri : 447
B. Pharma : 587
D. Pharma : 587
Engg : 1784

ANUSHA
273
BNYS : 273
VET Sc., : 337
B.Sc., Agri : 439
B. Pharma : 571
D. Pharma : 571
Engg : 1557

AMAN
296
B.Sc., Agri : 296
BNYS : 334
VET Sc., : 468
B. Pharma : 754
D. Pharma : 754
Engg : 1007

VENKATESH
305
BNYS : 305
VET Sc., : 357
B.Sc., Agri : 457
B. Pharma : 620
D. Pharma : 620
Engg : 1987

KHAZI S. ALI
325
VET Sc., : 325
BNYS : 468
B.Sc., Agri : 560
B. Pharma : 585
D. Pharma : 585
Engg : 1777

ABHISHEK
347
BNYS : 347
B.Sc., Agri : 355
VET Sc., : 461
B. Pharma : 772
D. Pharma : 772
Engg : 1282

PRATHYUSHA
363
BNYS : 363
B.Sc., Agri : 388
VET Sc., : 612
B. Pharma : 1035
D. Pharma : 1035
Engg : 1799

DHANA
Agri : 732
YS : 982
c., : 1462
rma : 2119
rma : 2119
g : 2464

TARANNUM
761
Engg : 761
B.Sc., Agri : 786
B. Pharma : 2347
D. Pharma : 2347
BNYS : 3464
VET Sc., : 4681

VIKAS
766
B.Sc., Agri : 766
BNYS : 1188
VET Sc., : 1339
Engg : 1561
B. Pharma : 1815
D. Pharma : 1815

CHANDAN
775
B.Sc., Agri : 775
BNYS : 1306
VET Sc., : 1847
Engg : 2284
B. Pharma : 2564
D. Pharma : 2564

ADARSH
792
Engg : 792
B. Pharma : 1933
D. Pharma : 1933

YASHASWI
797
B.Sc., Agri : 797
BNYS : 823
VET Sc., : 1188
B. Pharma : 1761
D. Pharma : 1761
Engg : 2412

SRUSHTI
827
B.Sc., Agri : 827
BNYS : 1049
VET Sc., : 1608
B. Pharma : 2206
D. Pharma : 2206
Engg : 2285

Md. ADIL FAROOQ
874
Engg : 874
B. Pharma : 1131
D. Pharma : 1131

TEJASHWNI
939
BNYS : 939
B.Sc., Agri : 993
VET Sc., : 1157
B. Pharma : 1752
D. Pharma : 1752
Engg : 3034

SNEHA
984
BNYS : 984
B.Sc., Agri : 1128
VET Sc., : 1472
B. Pharma : 2075
D. Pharma : 2075
Engg : 3453

VARSHA
986
BNYS : 986
B.Sc., Agri : 1153
VET Sc., : 1177
B. Pharma : 1735
D. Pharma : 1735
Engg : 3020

CHIN
SRUJAN 1270
SUDEEP 1295
NIRANJAN 1340
SUMUKH 1354
GANESH 1361
INDU 1414
PRAVALIKA 1428
GANESH 1442
SUMEETH 1555
MANOJ KUMAR 1595

ARTH
KISHAN 2221
PAVAN KUMAR 2237
SANJANA 2258
RAKESH 2264
ABHISHEK 2356
JNANENDRA 2382
RAHUL 2406
SUDEEP 2434
GURUTEJ 2439
ANVITHA 2442

RAN
SHREYAS 2785
ROHAN 2851
NANDINI 2859
PREETHU 2938
SRINIVAS 2961
PRASAD 2964
VIDYA 3004
SHREYA 3016
DHAWAL 3027
YUKTHI 3069

IATHA
ACHYUTH 3599
THASHWINI 3642
ADARSH 3678
VINUTHA 3686
VIDYASHREE 3721
JYOTHIKA 3868
MANASA 3876
RANJITHA 3957
MIZBA 3992
ADITHI 4007

DESH
ULLAS 4444
ROSHINI 4451
PRAJWAL 4493
ABHISHEK 4566
RAKSHITHA 4577
VARSHA 4657
MANOJ 4830
SAINATH 4845
HANUMANTHA RAYA 4857
RAJANEESH 4890

And Many More...

41
Ranks

# SIR M V P U COLLEGE

BRANCHES

● Near Govt. ITI College, Hadadi Road, DAVANGERE-5.
Ph: 08192-261200, 9243312223/25/26, 87221 41400.

● St. JOHN'S SCIENCE PU COLLEGE
Shivakumara Swamy Badavane, H.R.B. Layout, DAVANGERE-05.

● Sri Vidyabharathi Pre-University (Ind) College
SUDA Layout, 'A' Block, Kuvempu Nagar, Extn., SHIVAMOGGA-1 Mob : 90351 41142, 91486 84483, 93792 53476

● Sri Basaveshwara Science & Commerce PU College
Lokikere Road, S A Ravindranatha Nagar, DAVANGERE-05

## ತೆಲಂಗಾಣ : ಜಲ ವಿದ್ಯುತ್ ಕೇಂದ್ರದಲ್ಲಿ ಬೆಂಕಿ, 9 ಸಾವು

ಹೈದರಾಬಾದ್, ಆ. 21 – ತೆಲಂಗಾಣದ ಶ್ರೀಶೈಲಂ ಜಲ ವಿದ್ಯುತ್ ಘಟಕದಲ್ಲಿ ಪ್ರಮುಖ ಅಗ್ನಿ ದುರಂತ ಸಂಭವಿಸಿದ್ದು, ಒಂಭತ್ತು ಜನರು ಮೃತಪಟ್ಟಿದ್ದಾರೆ ಹಾಗೂ ಮೂವರು ಗಂಭೀರವಾಗಿ ಗಾಯಗೊಂಡಿದ್ದಾರೆ.

ತೆಲಂಗಾಣ ರಾಜ್ಯ ವಿದ್ಯುತ್ ನಿಗಮಕ್ಕೆ ಸೇರಿದ ಈ ಘಟಕದಲ್ಲಿ ಗುರುವಾರ ತಡ ರಾತ್ರಿಯಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಆಗ ಅಲ್ಲಿ 17 ಜನರಿದ್ದರು. ಎಂಟು ಜನರು ಹೊರ ಬರುವಲ್ಲಿ ಯಶಸ್ವಿಯಾಗಿದ್ದಾರೆ.

ಆದರೆ, ಉಳಿದವರು ಬೆಂಕಿಯಲ್ಲಿ ಸಿಲುಕಿ ಅಸು ನೀಗಿದ್ದಾರೆ. ಮೃತರಲ್ಲಿ ಏಳು ಜನರು ನಿಗಮದ ಉದ್ಯೋಗಿಗಳಾಗಿದ್ದರೆ, ಇನ್ನಿಬ್ಬರು ಖಾಸಗಿ ಉದ್ಯಮದ ಉದ್ಯೋಗಿಗಳು.

ಮೃತರ ದೇಹಗಳಲ್ಲಿ ಸಣ್ಣಪುಟ್ಟ ಸುಟ್ಟ ಗಾಯಗಳು ಕಂಡು ಬಂದಿವೆ. ಹೀಗಾಗಿ ಅವರು ಉಸಿರು ಕಟ್ಟಿ ಸಾವನ್ನಪ್ಪಿರಬಹುದು ಎಂದು ಶಂಕಿಸಲಾಗಿದೆ.

ಬೆಂಕಿಯಲ್ಲಿ ಸಿಲುಕಿದ್ದ ಉದ್ಯೋಗಿಗಳು, ತಮ್ಮ ಮೊಬೈಲ್ ಫೋನ್‌ಗಳಿಂದ ಬೆಂಕಿಯ ದೃಶ್ಯಗಳನ್ನು ತೆಗೆದು ಅವುಗಳನ್ನು ಪ್ರಕಟಿಸುತ್ತಿದ್ದರು. ಆ ಮೂಲಕ ಹೊರಗಿದ್ದ ಅಧಿಕಾರಿಗಳಿಗೆ ಪರಿಸ್ಥಿತಿಯನ್ನು ವಿವರಿಸುವ ಯತ್ನ ನಡೆಸುತ್ತಿದ್ದರು ಎಂದು ತೆಲಂಗಾಣ ಇಂಧನ ಸಚಿವ ಜಿ. ಜಗದೀಶ್ ರೆಡ್ಡಿ ತಿಳಿಸಿದ್ದಾರೆ.

ಅತಿ ವೋಲ್ಟೇಜ್ ಕಾರಣದಿಂದಾಗಿ ಬ್ಯಾಟರಿ ಭಾಗದಲ್ಲಿ ಬೆಂಕಿ ಕಾಣಿಸಿಕೊಂಡಿರಬಹುದು ಎಂದು ಶಂಕಿಸಲಾಗುತ್ತಿದೆ.

### ಡಿ. ದೇವರಾಜ ಅರಸು ಜಯಂತಿ



ದಾವಣಗೆರೆ, ಆ.21- ಮಾಜಿ ಮುಖ್ಯ ಮಂತ್ರಿ ಡಿ.ದೇವರಾಜ ಅರಸು ಅವರ 105ನೇ ಜನ್ಮ ದಿನಾಚರಣೆಯನ್ನು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರುಗಳ ಸಂಯುಕ್ತಾಶ್ರಯದಲ್ಲಿ ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಿನ್ನೆ ಸರಳವಾಗಿ ಆಚರಿಸಲಾಯಿತು. ಜಿ.ಪಂ. ಅಧ್ಯಕ್ಷರಾದ ಶ್ರೀಮತಿ ದೀಪಾ ಜಗದೀಶ್, ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ, ಎಎಸ್‌ಪಿ ರಾಜೀವ್, ಜಿ.ಪಂ. ಉಪ ಕಾರ್ಯದರ್ಶಿ ಆನಂದ್, ಜಿಲ್ಲಾ ಮಡಿವಾಳ ಸಮಾಜದ ಜಿಲ್ಲಾಧ್ಯಕ್ಷ ಎಂ.ಉಮಾಪತಿ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಶ್ರೀಮತಿ ನಜ್ಮಾ ಇತರರು ಉಪಸ್ಥಿತರಿದ್ದರು.

## 'ಕೃಷಿ ಲಕ್ಷ್ಮೀ ಯೋಜನೆ' ಜಾರಿಗೆ ಶಾಂತರಾಜ್ ಪಾಟೀಲ್ ಒತ್ತಾಯ



ಹೊನ್ನಾಳಿ

ಹೊನ್ನಾಳಿ, ಆ.21- ರೈತ ಯುವಕರನ್ನು ವರಿಸುವ ಮಹಿಳೆಯರಿಗೆ 'ಕೃಷಿ ಲಕ್ಷ್ಮೀ ಯೋಜನೆ'ಯನ್ನು ಜಾರಿಗೊಳಿಸಬೇಕು ಎಂದು ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಬಲಮುರಿ ಶಾಂತರಾಜ್ ಪಾಟೀಲ್ ಒತ್ತಾಯಿಸಿದರು.

ಶಾಸಕ ಎಂ.ಪಿ. ರೇಣುಕಾಚಾರ್ಯ ಅವರ ನಿವಾಸಕ್ಕೆ ನಿನ್ನೆ ಆಗಮಿಸಿದ್ದ ಕೃಷಿ ಸಚಿವ ಬಿ.ಸಿ. ಪಾಟೀಲ್ ಅವರನ್ನು ಭೇಟಿಯಾದ ಸಂದರ್ಭದಲ್ಲಿ ಅವರು ಈ ಒತ್ತಾಯ ಮಾಡಿದರು. ಇತ್ತೀಚೆಗೆ ನಮ್ಮ ಸಮಾಜದಲ್ಲಿ ಬಹುತೇಕ ಎಲ್ಲಾ ಯುವತಿಯರೂ ಸರ್ಕಾರಿ ಇಲ್ಲವೇ ಅರೆ ಸರ್ಕಾರಿ ನೌಕರಿಯಲ್ಲಿರುವವರನ್ನೇ ವರಿಸಲು ಮುಂದಾಗುತ್ತಿದ್ದಾರೆ. ಕೃಷಿ ಕೆಲಸ ಮಾಡುವ ರೈತ ಯುವಕರನ್ನು ಮದುವೆ ಆಗಲು ಯಾರೂ ಮುಂದೆ ಬರುತ್ತಿಲ್ಲ. ರೈತರನ್ನು ಮದುವೆ ಮಾಡಿಕೊಳ್ಳಿ ಎಂದು ಯಾವುದೇ ಮನೆಗಳಲ್ಲಿ ಪೋಷಕರು ತಮ್ಮ ಹೆಣ್ಣುಮಕ್ಕಳಿಗೆ ತಿಳಿ ಹೇಳುವುದಿಲ್ಲ.

ರೈತ ಯುವಕರನ್ನು ಮದುವೆ ಆಗಲು ಮುಂದೆ ಬರುವ ಮಹಿಳೆಯರಿಗೆ ಕೃಷಿ ಲಕ್ಷ್ಮೀ ಯೋಜನೆಯನ್ನು ಜಾರಿಗೊಳಿಸಬೇಕು. ಈ ಯೋಜನೆಯಡಿ ಮಹಿಳೆಗೆ 2 ಲಕ್ಷ ರೂ.ಗಳ ಬಾಂಡ್ ನೀಡಬೇಕು ಎಂದು ಸಚಿವರನ್ನು ಆಗ್ರಹಿಸಿದರು. ಮುಖ್ಯಮಂತ್ರಿಗಳು ಈ ಸಂಬಂಧ ಸೂಕ್ತ ನಿರ್ಧಾರ ಕೈಗೊಳ್ಳಬೇಕು ಎಂದು ಪಾಟೀಲ್ ವಿನಂತಿಸಿದರು.

# ಭೂ ಸುಧಾರಣಾ ಕಾಯ್ದೆ ವಿರೋಧಿಸಿ ಹರಪನಹಳ್ಳಿಯಲ್ಲಿ ಕಾಂಗ್ರೆಸ್ ಪ್ರತಿಭಟನೆ



ಹರಪನಹಳ್ಳಿ, ಆ.21- ಭೂ ಸುಧಾರಣಾ ತಿದ್ದುಪಡಿ, ಎಪಿಎಂಸಿ ತಿದ್ದುಪಡಿ ಹಾಗೂ ಕಾರ್ಮಿಕ ಕಾಯ್ದೆಗಳ ತಿದ್ದುಪಡಿ ವಿರೋಧಿಸಿ ಹಾಗೂ ಕೊರೊನಾ ನಿಯಂತ್ರಣದಲ್ಲಿ ನಡೆದಿರುವ ಭ್ರಷ್ಟಾಚಾರವನ್ನು ಉಚ್ಚ ನ್ಯಾಯಾಲಯದ ಹಾಲಿ ನ್ಯಾಯಾಧೀಶರಿಂದ ನ್ಯಾಯಾಂಗ ತನಿಖೆ ನಡೆಸಬೇಕೆಂದು ಆಗ್ರಹಿಸಿ ಪಟ್ಟಣದಲ್ಲಿ ಬ್ಲಾಕ್ ಕಾಂಗ್ರೆಸ್ ವತಿಯಿಂದ ನಿನ್ನೆ ಪ್ರತಿಭಟನೆ ನಡೆಸಿ ತಹಶೀಲ್ದಾರರಿಗೆ ಮನವಿ ಸಲ್ಲಿಸಿದರು.

ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬೇಲೂರು ಅಂಜಪ್ಪ ಮಾತನಾಡಿ, ಸುಗ್ರೀವಾಜ್ಞೆ ತರುವ ಮೂಲಕ ಪ್ರಗತಿಪರ ಭೂ ಸುಧಾರಣಾ ಕಾಯ್ದೆಯನ್ನು ತಿದ್ದುಪಡಿ ತಂದು ರೈತ ವಿರೋಧಿ ನೀತಿ ಅನುಸರಿಸಲು ಹೊರಟಿರುವುದು ಖಂಡನೀಯ ಎಂದು ಕಾರ್ಯಕರ್ತರು ಆರೋಪಿಸಿದರು.

ಎಂ.ಪಿ. ಪ್ರಕಾಶ ಸಮಾಜ ಮುಖಿ ಟ್ರಸ್ಟ್ ಅಧ್ಯಕ್ಷರಾದ ಎಂ.ಪಿ. ವೀಣಾ ಮಹಾಂತೇಶ ಚರಂತಿ ಮಠ್ ಮಾತನಾಡಿ, ಕಾರ್ಮಿಕರ ವಿರೋಧಿ ನೀತಿಯನ್ನು ಕಾಯ್ದೆ ತಿದ್ದುಪಡಿ ಮಾಡುತ್ತಿರುವುದು ದುರದೃಷ್ಟಕರ. ಅತಿವೃಷ್ಟಿ ನಿರ್ವಹಣೆಯಲ್ಲೂ ರಾಜ್ಯ ಬಿಜೆಪಿ ಸರ್ಕಾರ ಎಡವಿದೆ. ರೈತವಿರೋಧಿ, ಕಾರ್ಮಿಕರ ವಿರೋಧಿ ತಿದ್ದುಪಡಿ ಕೈ ಬಿಡಬೇಕು ಎಂದು ಆಗ್ರಹಿಸಿದರು.

ಜಿ.ಪಂ. ಸದಸ್ಯ ಎಚ್ .ಬಿ. ಪರಶುರಾಮಪ್ಪ, ಹರಪನಹಳ್ಳಿ ಬ್ಲಾಕ್ ಟಾಸ್ಕ್‌ಫೋರ್ಸ್ ಸಮಿತಿ ಅಧ್ಯಕ್ಷ ಎಚ್ .ಕೆ. ಹಾಲೇಶ, ಎಪಿಎಂಸಿ ಅಧ್ಯಕ್ಷ ಅಶೋಕಗೌಡ, ಪಿಕಾರ್ಡ್ ಬ್ಯಾಂಕ್ ನಿರ್ದೇಶಕ ಪಿ. ಎಲ್. ಪೋಮ್ಯನಾಯ್ಕ, ಶಶಿಧರ ಪೂಜಾರ, ಜಿ.ಪಂ. ಮಾಜಿ ಸದಸ್ಯ ತೆಲಿಗಿ ಈಶ್ವರಪ್ಪ, ಎಂ.ಟಿ. ಬಸವನಗೌಡ, ಮುಖಂಡರಾದ ಮತ್ತಿಹಳ್ಳಿ ಅಜ್ಜಣ್ಣ, ಚಿಗಟೇರಿ ಟಾಸ್ಕ್ ಫೋರ್ಸ್ ಸಮಿತಿ ಅಧ್ಯಕ್ಷ ಸಾಬಳ್ಳಿ ಜಂಬಣ್ಣ, ಪುರಸಭಾ ಸದಸ್ಯರುಗಳಾದ ಜಾಕೀರ್, ಯುವ ಕಾಂಗ್ರೆಸ್ ಅಧ್ಯಕ್ಷ ಪಿ.ಶಿವಕುಮಾರನಾಯ್ಕ, ಪಿ.ಅರುಣಕುಮಾರ, ಪ್ರೇಮಕುಮಾರ್, ಪುರಸಭಾ ಮಾಜಿ ಅಧ್ಯಕ್ಷೆ ಕವಿತಾ ವಾಗೀಶ್. ಶಂಕರ್, ಎಂ.ಕೆ. ಸಿದ್ದಿಕ್, ಗಾಯಿತ್ರಮ್ಮ, ಸಿದ್ದಲಿಂಗನಗೌಡ್ರು, ದಾದಾಪೀರ್, ಚಂದ್ರಶೇಖರ್, ರವಿ ರಾಗಿಮಸಲವಾಡ, ಸಿಂಗ್ರಿಹಳ್ಳಿ ಬಸವರಾಜ ಇನ್ನಿತರರಿದ್ದರು.

## ಎಚ್ಚರ... ! ಇದು ದಾವಣಗೆರೆ ಎಪಿಎಂಸಿ ಮೇಲ್ಸೇತುವೆ




ದಾವಣಗೆರೆ, ಆ. 21- ನಗರದ ಪಿ.ಬಿ. ರಸ್ತೆಯಿಂದ ಎಪಿಎಂಸಿಗೆ ಸಂಪರ್ಕ ಕಲ್ಪಿಸುವ ಮೇಲ್ಸೇತುವೆಯ ಆರಂಭ ಹಾಗೂ ಅಂತ್ಯದಲ್ಲಿ ಗುಂಡಿಗಳು ಬಿದ್ದು ವಾಹನ ಸವಾರರು ತೀವ್ರ ಸಂಕಷ್ಟ ಎದುರಿಸುವ ಪರಿಸ್ಥಿತಿ ನಿರ್ಮಾಣವಾಗಿದೆ.

ಸದ್ಯ ಡಿಸಿಎಂ ಬಳಿಯ ರೈಲ್ವೇ ಮೇಲ್ಸೇತುವೆ ಕಾಮಗಾರಿ ಆಮೆಗತಿಯಲ್ಲಿ ನಡೆಯುತ್ತಿದ್ದು, ಬೆಂಗಳೂರು ಮಾರ್ಗವಾಗಿ ಸಂಚರಿಸುವ ವಾಹನಗಳು ಎಪಿಎಂಸಿ ಮೇಲ್ಸೇತುವೆ ಮೂಲಕ ಸಾಗುತ್ತಿವೆ. ಇದರಿಂದಾಗಿ ವಾಹನಗಳ ಸಂಚಾರವೂ ಹೆಚ್ಚಾಗಿದೆ. ಆದರೆ ಪಿ.ಬಿ. ರಸ್ತೆ ಪಕ್ಕದಲ್ಲಿಯೇ, ಮೇಲ್ಸೇತುವೆ ಆರಂಭದಲ್ಲಿಯೇ ಬೃಹತ್ ಗುಂಡಿಗಳು ಬಿದ್ದಿದ್ದು, ಇದುವರೆಗೂ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನ ಹರಿಸದಿರುವುದು ಸ್ಥಳೀಯರ ದುರ್ದೈವವೇ ಸರಿ. ಇನ್ನು ಮಳೆ ಬಂದಾಗಂತೂ ಇಲ್ಲಿ ರಸ್ತೆಯಾವುದೆಂದು ತಿಳಿಯದೆ, ದ್ವಿಚಕ್ರ ವಾಹನ ಸವಾರರು ಬಿದ್ದು-ಎದ್ದು ಸಾಗುವುದು ಸಾಮಾನ್ಯವಾಗಿದೆ. ಇನ್ನು ಮೇಲ್ಸೇತುವೆ ಮೇಲ್ಭಾಗದಲ್ಲೂ ಗುಂಡಿಗಳು ಬಿದ್ದಿದ್ದು, ಸೇತುವೆ ಕಾಮಗಾರಿ ಗುಣಮಟ್ಟವನ್ನು ಪ್ರಶ್ನಿಸುವಂತಿವೆ.

## ಕಾನೂನು ಪರೀಕ್ಷೆ ರದ್ದುಪಡಿಸಲು ಎಸ್.ಎಫ್.ಐ. ಆಗ್ರಹ




ದಾವಣಗೆರೆ, ಆ.21- ಕರ್ನಾಟಕ ಹಾಗೂ ಯುಜಿಸಿ ಆದೇಶದಂತೆ ಪ್ರಥಮ ಹಾಗೂ ದ್ವಿತೀಯ ವರ್ಷದ ಕಾನೂನು ಪರೀಕ್ಷೆಗಳನ್ನು ರದ್ದುಪಡಿಸಬೇಕೆಂದು ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್ ಎಫ್ ಐ) ಜಿಲ್ಲಾ ಸಮಿತಿ ಕಾರ್ಯಕರ್ತರು ನಗರದಲ್ಲಿಂದು ಪ್ರತಿಭಟನೆ ನಡೆಸಿದರು. ನಂತರ ಉಪವಿಭಾಗಾಧಿಕಾರಿಗಳ ಮೂಲಕ ಹುಬ್ಬಳ್ಳಿಯ ಕರ್ನಾಟಕ ಕಾನೂನು ವಿಶ್ವವಿದ್ಯಾಲಯ ಕುಲಸಚಿವರಿಗೆ ಮನವಿ ಸಲ್ಲಿಸಿದರು.

ವಿದ್ಯಾರ್ಥಿಗಳ ದೃಷ್ಟಿಯಿಂದ ಕರ್ನಾಟಕ ಕಾನೂನು ವಿಶ್ವವಿದ್ಯಾಲಯದ ವತಿಯಿಂದ ಪರೀಕ್ಷೆ ನಡೆಸಲು ಮುಂದಾಗಿರುವ ಕ್ರಮವನ್ನು ಈ ಕೂಡಲೇ ಹಿಂಪಡೆಯಬೇಕೆಂದು ಎಸ್ ಎಫ್ ಐ ಜಿಲ್ಲಾ ಸಂಚಾಲಕ ಲಕ್ಷ್ಮಣ್ ರಾಮಾವತ್ ಒತ್ತಾಯಿಸಿದರು.

**ಪ್ರತಿಭಟನೆಯಲ್ಲಿ ಜಿಲ್ಲಾ ಸಹ ಸಂಚಾಲಕ :** ರಾಕೇಶ್, ಸಲ್ಲಾವುದ್ದಿನ್, ಕಾನೂನು ವಿದ್ಯಾರ್ಥಿಗಳಾದ ವೆಂಕಟ್ ನಾಯ್ಕ, ವಿಘ್ನೇಶ್, ಮಂಜುನಾಥ, ಗುರುಬಸವರಾಜ್, ಹರೀಶ್ ಸೇರಿದಂತೆ ಇತರರು ಭಾಗವಹಿಸಿದ್ದರು.

# ಜಗಳೂರು : ಬಿಜೆಪಿ ಸರ್ಕಾರದ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ

ಜಗಳೂರು, ಆ. 21- ರೈತ ವಿರೋಧಿ ಭೂ ಸುಧಾರಣಾ ತಿದ್ದುಪಡಿ, ಎಪಿಎಂಸಿ ಕಾಯ್ದೆ ತಿದ್ದುಪಡಿ, ಕಾರ್ಮಿಕ ವಿರೋಧಿ, ಕಾರ್ಮಿಕ ಕಾಯ್ದೆ ತಿದ್ದುಪಡಿಗಳನ್ನು ವಾಪಸ್ ತೆಗೆದುಕೊಳ್ಳಬೇಕು. ರಾಜ್ಯದಲ್ಲಿ ಅತಿವೃಷ್ಟಿಯಿಂದ ಆಗಿರುವ ತೀವ್ರ ಹಾನಿಗೆ ಪರಿಹಾರ ಒದಗಿಸಲು ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿ ಇಂದು ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಲಾಯಿತು.

ಇಲ್ಲಿನ ಪ್ರವಾಸಿ ಮಂದಿರದಿಂದ ಕಾಂಗ್ರೆಸ್ ಕಾರ್ಯಕರ್ತರು ನಿನ್ನೆ ಮೆರವಣಿಗೆ ನಡೆಸಿ ರಾಜ್ಯ ಸರ್ಕಾರದ ಜನ ವಿರೋಧಿ ನೀತಿಗಳ ವಿರುದ್ಧ ಘೋಷಣೆ ಕೂಗಿದರು.

ನಂತರ ತಾಲ್ಲೂಕು ಕಛೇರಿ ಮುಂಭಾಗ ಮಾತನಾಡಿದ ಮಾಜಿ ಶಾಸಕ ಹೆಚ್.ಪಿ. ರಾಜೇಶ್, ಕೋವಿಡ್-19 ಇಡೀ ಮನುಕುಲವನ್ನೇ ಆಂತಕಕ್ಕೀಡುಮಾಡಿದೆ. ಈ ವೈರಾಣುವಿನ ದಾಳಿಗೆ ಸಿಕ್ಕಿ ರಾಜ್ಯದ ಜನರು ಜೀವನ್ಮರಣ ಹೋರಾಟ ನಡೆಸುತ್ತಿರುವ ಸಂದರ್ಭದಲ್ಲಿ ರಾಜ್ಯದ ಬಿಜೆಪಿ ಸರ್ಕಾರವು ಈ ವಿಷಯದಲ್ಲೂ ಬ್ರಹ್ಮಾಂಡ ಭ್ರಷ್ಟಾಚಾರದಲ್ಲಿ ಎಸಗಿದ್ದು ಸಮಗ್ರ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.



ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಂಷೀರ್ ಅಹ್ಮದ್ ಮಾತನಾಡಿ, ಕೋವಿಡ್ -19 ನಿಯಂತ್ರಿಸಲು ಸರ್ಕಾರ ಖರೀದಿಸಿರುವ ಸಾಮಗ್ರಿಗಳಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿದೆ. ಕರ್ನಾಟಕ ಸರ್ಕಾರವು 8 ವಿಧದ ಇಲಾಖೆಗಳಿಂದ ಇದುವರೆಗೆ 4167 ಕೋಟಿ ರೂಪಾಯಿ ಬಿಡುಗಡೆ ಮಾಡಿದೆ. ವೆಂಟಿಲೇಟರ್, ಪಿಪಿಇ ಕಿಟ್‌ಗಳು, ಆಕ್ಸಿಜನ್ ಉಪಕರಣಗಳು ಹಾಗೂ ಥರ್ಮಲ್ ಸ್ಕ್ಯಾನರ್‌ಗಳ ಖರೀದಿಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿದ ಅವರು ಸಮಗ್ರ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

ಕೆಪಿಸಿಸಿ ಎಸ್ಸಿ ಘಟಕದ ರಾಜ್ಯಾಧ್ಯಕ್ಷ ಕೆ.ಪಿ. ಪಾಲಯ್ಯ ಮಾತನಾಡಿ, ಲಾಕ್‌ಡೌನ್ ಸಂದರ್ಭದಲ್ಲಿ 83 ಲಕ್ಷ ಜನರಿಗೆ ಆಹಾರ ಪ್ಯಾಕೆಟ್‌ಗಳನ್ನು ನೀಡುತ್ತೇವೆ ಎಂದು ಹೈಕೋರ್ಟ್‌ಗೆ ಅಫಿಡವಿಟ್ ಸಲ್ಲಿಸಿದ್ದ ರಾಜ್ಯ ಸರ್ಕಾರ ಎಲ್ಲಿಗೆ ಯಾರಿಗೆ, ಎಲ್ಲಿಗೆ ಎಷ್ಟು ನೀಡಿದ್ದೇವೆ ಎಂಬ ವಿವರಗಳು ಲಭ್ಯವಿಲ್ಲ. 13 ಲಕ್ಷ ವಲಸೆ ಕಾರ್ಮಿಕರಿಗೆ ಒಂದು ಊಟಕ್ಕೆ 1200 ಬಿಲ್ ಮಾಡಿದ್ದಾರೆ. ಒಬ್ಬ ವ್ಯಕ್ತಿಗೆ 14 ದಿನಗಳ ಚಿಕಿತ್ಸೆ ಕೊಡಿಸಲು ರೂ. 3,50,000 ಖರ್ಚಾಗಿದೆ ಎಂದು ಸರ್ಕಾರ ಲೆಕ್ಕ ತೋರಿಸುತ್ತಿದೆ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಕಾಂಗ್ರೆಸ್ ಮುಖಂಡರಾದ ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ತಿಪ್ಪೇಸ್ವಾಮಿ ಗೌಡ, ಬೈರೇಶ್, ಜಿ.ಬಿ. ಕರಿಬಸವನಗೌಡ, ಕಮ್ಮತ್ತಳ್ಳಿ ಮಂಜಣ್ಣ, ಎಸ್ಸಿ ಘಟಕದ ತಾಲ್ಲೂಕು ಅಧ್ಯಕ್ಷ ಲೋಕೇಶ್, ಬ್ಲಾಕ್ ಕಾಂಗ್ರೆಸ್ ಮಹಿಳಾ ಅಧ್ಯಕ್ಷರಾದ ಕೆಂಚಮ್ಮ ಧನ್ಯಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಲ್ಲಾಗಟ್ಟೆ ಶೇಖರಪ್ಪ, ಕುಬೇಂದ್ರಪ್ಪ, ಚಂದ್ರಶೇಖರ್, ಮುದ್ದೇಗೌಡರ ಬಸವರಾಜ್, ಗಿರೀಶ್ ಒಡೆಯರ್, ಮರೆನಹಳ್ಳಿ ಚಂದ್ರಶೇಖರ್, ಅಕ್ಷಯ್ ಕುಮಾರ್, ವೆಂಕಟೇಶ್ ಮತ್ತಿತರರು ಭಾಗವಹಿಸಿದ್ದರು.

## 'ಪಾರದರ್ಶಕ ತೆರಿಗೆ - ಪ್ರಾಮಾಣಿಕರಿಗೆ ಗೌರವ' ತೆರಿಗೆ ವ್ಯವಸ್ಥೆಗೆ ಮಲಬಾರ್ ಮುಖ್ಯಸ್ಥ ಅಹ್ಮದ್ ಸ್ವಾಗತ

ಬೆಂಗಳೂರು, ಆ.21- ಕೇಂದ್ರ ಸರ್ಕಾರ ಪ್ರಕಟಿಸಿರುವ ಹೊಸ 'ಪಾರದರ್ಶಕ ತೆರಿಗೆ - ಪ್ರಾಮಾಣಿಕರಿಗೆ ಗೌರವ' ಎಂಬ ಉಪಕ್ರಮವು ತೆರಿಗೆ ವ್ಯವಸ್ಥೆಯನ್ನು ಮತ್ತಷ್ಟು ಪಾರದರ್ಶಕವಾಗಿಸಲಿದೆ ಮತ್ತು ಪ್ರಾಮಾಣಿಕ ತೆರಿಗೆದಾರರ ಗೌರವವನ್ನು ಹೆಚ್ಚು ಮಾಡುತ್ತದೆ ಎಂದು ಮಲಬಾರ್ ಗ್ರೂಪ್‌ನ ಅಧ್ಯಕ್ಷ ಎಂ.ಪಿ. ಅಹ್ಮದ್ ಅಭಿಪ್ರಾಯಪಟ್ಟಿದ್ದಾರೆ.

ಕೇಂದ್ರ ಸರ್ಕಾರದ ಹೊಸ ನೀತಿಯನ್ನು ಸ್ವಾಗತಿಸಿ ಮಾತನಾಡಿದ ಅವರು, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಪ್ರಕಟಿಸಿರುವ ಹೊಸ ತೆರಿಗೆ ಪದ್ಧತಿಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಸರಿಯಾಗಿ ಮತ್ತು ನಿಯಮಿತವಾಗಿ ತೆರಿಗೆ ಪಾವತಿ ಮಾಡುವ ಜನರು ಮತ್ತು ವಾಣಿಜ್ಯ ಸಂಸ್ಥೆಗಳಿಗೆ ಉತ್ತೇಜನ ಮತ್ತು ನೆರವು ನೀಡುತ್ತದೆ. ತೆರಿಗೆ ವ್ಯವಸ್ಥೆಯನ್ನು ಸರಳೀಕರಣಗೊಳಿಸಿರುವುದು ಕೇಂದ್ರ ಸರ್ಕಾರದ ತೆರಿಗೆ ಆದಾಯವನ್ನು ಹೆಚ್ಚು ಮಾಡಲಿದೆ ಮತ್ತು ತೆರಿಗೆ ಸಂಗ್ರಹಕ್ಕೆ ಇದು ಮತ್ತಷ್ಟು ಉತ್ತೇಜನ ನೀಡಲಿದೆ. ಅಲ್ಲದೇ, ಇದರಿಂದಾಗಿ ದೇಶದ ಒಟ್ಟಾರೆ ಅಭಿವೃದ್ಧಿಗೆ ಕೊಡುಗೆ ನೀಡಲಿದೆ ಎಂದು ಅಹ್ಮದ್ ತಿಳಿಸಿದ್ದಾರೆ.

## ನಗರದಲ್ಲಿಂದು ಮಾಂಸ ಮಾರಾಟ ನಿಷೇಧ


ಗಣೇಶ ಹಬ್ಬದ ಪ್ರಯುಕ್ತ ಪ್ರಾಣಿ ವಧೆ, ಪ್ರಾಣಿ ಮಾಂಸ ಹಾಗೂ ಮೀನಿನ ಮಾಂಸ ಮಾರಾಟವನ್ನು ಇಂದು ನಿಷೇಧಿಸಲಾಗಿದೆ. ಮಾಂಸ ಮಾರಾಟ ಮಾಡಿದಲ್ಲಿ ಮಹಾನಗರ ಪಾಲಿಕೆ ಕಾಯ್ದೆಯ ಪ್ರಕಾರ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಪಾಲಿಕೆಯ ಸಾರ್ವಜನಿಕ ಸಂಪರ್ಕಾಧಿಕಾರಿ ಹಾಗೂ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

## ಸ್ಪರ್ಧಾತ್ಮಕ ಶಿಬಿರ

ದಾವಣಗೆರೆ, ಆ.21- ಕೈದಾಳೆ ಗ್ರಾಮ ಪಂಚಾಯ್ತಿ ವತಿಯಿಂದ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸುತ್ತಿರುವ ಅಭ್ಯರ್ಥಿಗಳಿಗೆ ಇದೇ ದಿನಾಂಕ 25 ರಿಂದ 28ರವರೆಗೆ ತರಬೇತಿ ನಡೆಯಲಿದೆ.

ಕೈದಾಳೆ ಮತ್ತು ಸುತ್ತಮುತ್ತಲಿನ ಹಳ್ಳಿಗಳ ಆಸಕ್ತರು ಜಯ್ಯಪ್ಪ, ಕಾರ್ಯದರ್ಶಿ (9945611628), ಕರಿಬಸಪ್ಪ (8088535160) ಅವರನ್ನು ಸಂಪರ್ಕಿಸಬಹುದು.

### ಪುಣ್ಯಸ್ಮರಣೆ



ಲಿಂ॥ ವಾಣಿ ಶ್ರೀ ಎಸ್.ಆರ್. ಮುರಿಗೆಪ್ಪ ಅವರ 9ನೇ ವರ್ಷದ



ಲಿಂ॥ ಶ್ರೀಮತಿ ಎಂ. ಚಂದ್ರಕಾಂತಮ್ಮ ಅವರ 12ನೇ ವರ್ಷದ

ಸದಾ ನಿಮ್ಮಗಳ ಸ್ಮರಣೆಯಲ್ಲಿ...

ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

ವಾಣಿ ಶಿವಣ್ಣ ಮತ್ತು ಸಹೋದರರು, ಸಹೋದರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ವಾಣಿವಿಲಾಸ್ ಬಂಧು-ಮಿತ್ರರು.

ಲಿಂ॥ ವಾಣಿ ಶ್ರೀ ಎಸ್.ಆರ್. ಮುರಿಗೆಪ್ಪ ಮತ್ತು ನೇತ್ರದಾನಿ ಲಿಂ॥ ವಾಣಿ ಶ್ರೀಮತಿ ಎಂ. ಚಂದ್ರಕಾಂತಮ್ಮ ಅವರ ಸ್ಮರಣೆಯ ಗೌರವಾರ್ಥವಾಗಿ ದಿನಾಂಕ 22.08.2020ರ ಶನಿವಾರ ಮಧ್ಯಾಹ್ನ 12.30 ಕ್ಕೆ ಶ್ರೀ ವೀರೇಶ್ವರ ಪುಣ್ಯಾಶ್ರಮ (ಬಾಡಾ ಕ್ರಾಸ್)ದಲ್ಲಿ ಅಂಧ ಮಕ್ಕಳಿಗೆ ದಾಸೋಹ ಏರ್ಪಡಿಸಲಾಗಿದೆ.


ಶ್ರೀ ವಾಣಿ ಲ್ಯಾಂಡ್ ಲಿಂಕ್ಸ್
ಪ್ರೊ. : ವಾಣಿ ಶಿವಣ್ಣ, ವಾಣಿ ನಾಗಭೂಷಣ್

ಶ್ರೀ ವಾಣಿ ಆಟೋ ಕನ್ಸಲ್ಟೆನ್ಸಿ
ಪ್ರೊ. : ವಾಣಿ ಸದಾನಂದ

ಶ್ರೀ ವಾಣಿ ಟೂರ್ಸ್ & ಟ್ರಾವೆಲ್ಸ್
ಪ್ರೊ. : ವಾಣಿ ಜಯದೇವ

1ನೇ ಮುಖ್ಯರಸ್ತೆ, ಕೆ.ಬಿ. ಬಡಾವಣೆ, ದಾವಣಗೆರೆ.

98800 88996
78994 59295
91481 84891
91649 19499


### 6ನೇ ವರ್ಷದ ಪುಣ್ಯಸ್ಮರಣೆ




**ಶ್ರೀಮತಿ ವಿ. ಸೌಭಾಗ್ಯರವರು**

ಜನನ : 14.08.1958 ಮರಣ : 22.08.2014

ನೀವು ನಮ್ಮನ್ನಗಲಿ ಇಂದಿಗೆ ಆರು ವರ್ಷಗಳಾದವು.
ಸದಾ ನಿಮ್ಮ ನೆನಪಿನಲ್ಲಿರುವ....

ಪತಿ : ಎಸ್.ಜಿ. ಪರಮೇಶ್ವರಪ್ಪ
ಮಕ್ಕಳು : ವಿಕಾಸ್ ಜಿ.ಪಿ., ವಿನಯ್ ಜಿ.ಪಿ.
ಸೊಸೆಯಂದಿರು: ಅಶ್ವಿನಿ ವಿಕಾಸ್, ಮಂಗಳ ವಿನಯ್
ಸಾಸಲು ಗೌಡ್ರು ವಂಶಸ್ಥರು, ದೊಡ್ಡಘಟ್ಟ ವಂಶಸ್ಥರು. ಹಾಗೂ ಬಂಧು-ಮಿತ್ರರು.

### ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ವಾಮನ ಪಾಂಡುರಂಗ ವೆರ್ಣೇಕರ್



ಶ್ರೀ ಉದಯ್ ಗಂಗಾಧರ್ ವೆರ್ಣೇಕರ್

ದೈವಜ್ಞ ಸಮಾಜದ ಮಾಜಿ ಅಧ್ಯಕ್ಷರಾದ
**ಶ್ರೀ ವಾಮನ ಪಾಂಡುರಂಗ ವೆರ್ಣೇಕರ್**
ಮತ್ತು ದೈವಜ್ಞ ಶ್ರೀ ಗಣೇಶೋತ್ಸವ ಸಮಿತಿಯ ನಿರ್ದೇಶಕರಾದ
**ಶ್ರೀ ಉದಯ್ ಗಂಗಾಧರ್ ವೆರ್ಣೇಕರ್**
ಇವರ ನಿಧನಕ್ಕೆ ನಮ್ಮ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ಕೋರುತ್ತಾ, ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಅಧ್ಯಕ್ಷರು ಹಾಗೂ ಸದಸ್ಯರು
ದೈವಜ್ಞ ಶ್ರೀ ಗಣೇಶೋತ್ಸವ ಸಮಿತಿ (ರಿ.) ದಾವಣಗೆರೆ







## ರಜಾ ಸೂಚನೆ ಗಣೇಶ ಹಬ್ಬದ ಪ್ರಯುಕ್ತ

ದಿನಾಂಕ : 22.08.2020ರ ಶನಿವಾರ ನಮ್ಮ ಅಂಗಡಿಗಳು ರಜಾ ಇರುತ್ತದೆ.
ಮಾನ್ಯ ನಮ್ಮೆಲ್ಲಾ ಗ್ರಾಹಕರು ಸಹಕರಿಸಬೇಕಾಗಿ ವಿನಂತಿ.

**ಶಾಂತಲಾ ವೆಡ್ಡಿಂಗ್ ಮಾಲ್,** ಚಾಮರಾಜ ಪೇಟೆ, ದಾವಣಗೆರೆ-577 001.
**ಶಾಂತಲಾ ಬ್ರಾಂಚ್,** ಡೆಂಟಲ್ ಕಾಲೇಜ್ ರೋಡ್, ದಾವಣಗೆರೆ.







## ಪ್ರಥಮ ವರ್ಷದ ಪುಣ್ಯಸ್ಮರಣೆ



**ದಿ|| ಯಲ್ಲಪ್ಪ ಎಸ್.ವೈ.**

ನಿವೃತ್ತ ಡಿ.ವೈ.ಎಸ್.ಪಿ, ಮೆದಿಕೆರೆ, ಚನ್ನಗಿರಿ ತಾ||, ದಾವಣಗೆರೆ ಜಿಲ್ಲೆ.

ನೀವು ನಮ್ಮನ್ನಗಲಿ ದಿನಾಂಕ: 23.08.2020ಕ್ಕೆ ಒಂದು ವರ್ಷವಾಯಿತು.
ನಿಮ್ಮ ನೆನಪು ಸದಾ ಹಚ್ಚ ಹಸಿರಾಗಿದ್ದು, ನಿಮ್ಮ ಸ್ಮರಣೆಯಲ್ಲಿರುವ

ಇಂತಿ ದುಃಖತಪ್ತ ಬಂಧುಗಳು

**ಶ್ರೀಮತಿ ಪುಟ್ಟಮ್ಮ ಕೋಂ ಲೇಟ್ ಯಲ್ಲಪ್ಪ**
**ಮೃತರ ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ವರ್ಗದವರು ಹಾಗೂ ಸನ್ಮಿತ್ರರು.**

## 9ನೇ ವರ್ಷದ ಪುಣ್ಯಸ್ಮರಣೆ



**ಶರಣ ಕೆ.ಆರ್.ರಮೇಶ್**


ನಿಧನ : 23.08.2011

ನೀನು ನಮ್ಮನ್ನಗಲಿ ಇಂದಿಗೆ ಒಂಭತ್ತು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ,

**ಶ್ರೀಮತಿ ಕೆ.ಜಿ. ಗಿರಿಜಮ್ಮ ಮತ್ತು ಶ್ರೀ ಕೆ.ಜಿ.ರೇವಣಸಿದ್ದಪ್ಪ**
1ನೇ ದರ್ಜೆ ಗುತ್ತಿಗೆದಾರರು ಹಾಗೂ
ಮಾಜಿ ಪ್ರಧಾನರು, ಕುರ್ಕಿ, ದಾವಣಗೆರೆ ತಾಲ್ಲೂಕು.


ಪತ್ನಿ : **ಶ್ರೀಮತಿ ಸವಿತಾ ರಮೇಶ್ ಕೆ.ಆರ್.**
**ಕು|| ಅನುಷಾ, ಕು|| ಅಮೂಲ್ಯ**
**ಸಹೋದರಿಯರು ಹಾಗೂ ಮಾವಂದಿರು**
**ಬಂಧು-ಮಿತ್ರರು, ಕುರ್ಕಿ.**
**ಜಿ.ಆರ್. ಸರ್ವೀಸ್ ಸ್ಟೇಷನ್, ತೋಳಹುಣಸೆ.**
**ಜ್ಯೋತಿ ಸರ್ವೀಸ್ ಸ್ಟೇಷನ್, ಅಣಜಿ.**



# ಬೆಲೆ ಬಾಳುವಂತಹ ಬದುಕಿನಿಂದ ಮನುಷ್ಯನಿಗೆ ಬೆಲೆ ಬರುತ್ತದೆ : ಶ್ರೀ ಬಸವ ಪ್ರಭು ಸ್ವಾಮೀಜಿ

## ಕೊರೊನಾ ವಾರಿಯರ್ಸ್‌ಗೆ ಸನ್ಮಾನಿಸುವುದರೊಂದಿಗೆ ಜನ್ಮದಿನ ಆಚರಿಸಿಕೊಂಡ ಲೋಕಿಕೆರೆ ನಾಗರಾಜ್



ದಾವಣಗೆರೆ, ಆ.21- ಬಿಜೆಪಿ ರೈತ ಮೋರ್ಚಾ ಅಧ್ಯಕ್ಷರಾದ ಲೋಕಿಕೆರೆ ನಾಗರಾಜ್ ಅವರು ನಗರದ ಕನ್ನಡ ಭವನದಲ್ಲಿ ನಿನ್ನೆ ಕೊರೊನಾ ವಾರಿಯರ್ಸ್‌ಗಳನ್ನು ಸನ್ಮಾನಿಸುವುದರ ಮೂಲಕ ತಮ್ಮ ಜನ್ಮ ದಿನವನ್ನು ಅರ್ಥಪೂರ್ಣವಾಗಿ ಆಚರಿಸಿಕೊಂಡರು.

ಇದೇ ಸಂದರ್ಭದಲ್ಲಿ ಆಟೋರಿಕ್ಷಾ ಚಾಲಕರಿಗೆ ಸಮವಸ್ತ್ರಗಳನ್ನು ನೀಡಿದ ಲೋಕಿಕೆರೆ ನಾಗರಾಜ್ ಅವರು, ರಾಜಕೀಯದಲ್ಲಿ ಯಾವುದೇ ಸ್ಥಾನ-ಮಾನ ಸಿಗಲಿ, ಬಿಡಲಿ ಸಮಾಜ ಸೇವೆಯನ್ನು ನಿರಂತರವಾಗಿ ಮುಂದುವರಿಸಿಕೊಂಡು ಹೋಗುವುದಾಗಿ ಸ್ಪಷ್ಟಪಡಿಸಿದರು.

ರಾಜಕೀಯದಲ್ಲಿ ಮುಂದೆ ಬರುವುದು ಈಗಿನ ಕಾಲದಲ್ಲಿ ಕಷ್ಟವಾದರೂ, ಜನರ ಹತ್ತಿರವೇ ಇದ್ದು, ಸಮಸ್ಯೆಗಳನ್ನು ಪರಿಹರಿಸಿದರೆ ಮುಂದೊಂದು ದಿನ ರಾಜಕೀಯದಲ್ಲಿ ಉನ್ನತ ಸ್ಥಾನ ಪಡೆದೇ ಪಡೆಯುವುದಾಗಿ ಆತ್ಮವಿಶ್ವಾಸ ವ್ಯಕ್ತಪಡಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಶಾಸಕ ಎಸ್.ಎ. ರವೀಂದ್ರನಾಥ್ ಅವರು, ರಾಜಕೀಯದಲ್ಲಿ ಎತ್ತರವಾಗಿ ಬೆಳೆಯುವುದು ಕಷ್ಟವಾಗಿದೆ. ಇಂತಹ ಸಂದರ್ಭದಲ್ಲಿ ಲೋಕಿಕೆರೆ ನಾಗರಾಜ್ ರವರು ಛಲದಿಂದ ರಾಜಕೀಯದಲ್ಲಿ ಬೆಳೆದು, ಉನ್ನತ ಸ್ಥಾನವನ್ನು ಗಳಿಸಲೆಂದು ಆಶಿಸಿದರು.

ಜಿಲ್ಲಾಧಿಕಾರಿ ಮಹಂತೇಶ್ ಬೀಳಗಿ ಅವರು, ಗಳಿಸಿದ ಜ್ಞಾನ, ಸಂಪತ್ತು ಮತ್ತು ಅನುಭವವನ್ನು ಸಮಾಜಕ್ಕೆ ಖರ್ಚು ಮಾಡುವುದರಲ್ಲಿ ಸಂತೋಷ ಸಿಗುತ್ತದೆ. ಈ ಹಿನ್ನೆಲೆಯಲ್ಲಿ ಲೋಕಿಕೆರೆ ನಾಗರಾಜ್ ಅವರ ಸಮಾಜಮುಖಿ ಸೇವೆ ಮುಂದುವರಿಯಲೆಂದು ಶುಭ ಕೋರಿದರು.

ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್ ಅವರು, ದಕ್ಷಿಣ ವಿಧಾನಸಭಾ ಕ್ಷೇತ್ರವನ್ನು ತಾವು ಲೋಕಿಕೆರೆ ನಾಗರಾಜ್ ಅವರಿಗೆ ಬಿಟ್ಟುಕೊಡಲು ಸಿದ್ಧರಿರುವುದಾಗಿ ಘೋಷಿಸಿದರು.

ನಗರ ಪಾಲಿಕೆ ಮಹಾಪೌರರಾದ ಬಿ.ಜಿ. ಅಜಯಕುಮಾರ್ ಅವರು, ಯಾರ ಸಹಾಯವೂ ಇಲ್ಲದೇ ರಾಜಕೀಯ, ಸಮಾಜ ಸೇವೆಯಲ್ಲಿ ಮುಂದುವರಿಯುತ್ತಿರುವ ಲೋಕಿಕೆರೆ ನಾಗರಾಜ್ ಅವರಿಗೆ ರಾಜಕೀಯ ಸ್ಥಾನ-ಮಾನ ಸಿಕ್ಕೇ ಸಿಗುತ್ತದೆ ಎಂಬ ಆಶಾಭಾವನೆ ವ್ಯಕ್ತಪಡಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಚ್.ಎಸ್. ಮಂಜುನಾಥ್ ಕುರ್ಕಿ, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ನಗರಪಾಲಿಕೆ ಸದಸ್ಯ ಎಸ್.ಟಿ. ವೀರೇಶ್ ಮತ್ತಿತರರು ಲೋಕಿಕೆರೆ ನಾಗರಾಜ್ ಅವರ ಸಮಾಜ ಸೇವೆಯನ್ನು ಮುಕ್ತ ಕಂಠದಿಂದ ಪ್ರಶಂಸಿಸಿದರು.

ಸಾನ್ನಿಧ್ಯ ವಹಿಸಿದ್ದ ವಿರಕ್ತ ಮಠದ ಶ್ರೀ ಬಸವಪ್ರಭು ಸ್ವಾಮೀಜಿ, ಬೆಲೆ ಬಾಳುವಂತಹ ಬದುಕಿನಿಂದ ಮಾತ್ರ ಮನುಷ್ಯನಿಗೆ ಬೆಲೆ ಬರುತ್ತದೆ ಎಂದು ಪ್ರತಿಪಾದಿಸಿದರು.

ಮುಖ್ಯ ಅತಿಥಿಗಳಾಗಿ ನಗರಪಾಲಿಕೆ ಉಪಮಹಾಪೌರರಾದ ಶ್ರೀಮತಿ ಸೌಮ್ಯ ನರೇಂದ್ರಕುಮಾರ್, ಸದಸ್ಯರಾದ ಶ್ರೀಮತಿ ಗೀತಾ ದಿಳ್ಯಪ್ಪ, ಶ್ರೀಮತಿ ಗೌರಮ್ಮ, ಶ್ರೀಮತಿ ಗಾಯತ್ರಮ್ಮ, ಮಂಜುನಾಯ್ಕ, ಆಯುಕ್ತ ವಿಶ್ವನಾಥ ಮುದಜ್ಜಿ, ಬಿಜೆಪಿ ಮುಖಂಡರಾದ ಬೇತೂರು ಸಂಗನಗೌಡ್ರು ಮತ್ತಿತರರು ಆಗಮಿಸಿದ್ದರು.

ವಿಜಯ ಪ್ರಾರ್ಥಿಸಿದರು. ಜಿಲ್ಲಾ ಶೋಷಿತ ವರ್ಗಗಳ ಒಕ್ಕೂಟದ ಅಧ್ಯಕ್ಷ ಬಾಡದ ಆನಂದರಾಜ್ ನಿರೂಪಿಸಿದರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ದಿಳ್ಳೆಪ್ಪ ಸ್ವಾಗತಿಸಿದರು. ನರೇಂದ್ರ ವಂದಿಸಿದರು.

# ನ್ಯಾ. ಪ್ರಶಾಂತ್ ವಿರುದ್ಧದ ನ್ಯಾಯಾಂಗ ನಿಂದನೆ, ತೀರ್ಪು ವಾಪಸ್‌ಗೆ ಆಗ್ರಹ



ದಾವಣಗೆರೆ, ಆ.21- ಹಿರಿಯ ನ್ಯಾಯವಾದಿ ಪ್ರಶಾಂತ್ ಭೂಷಣ್ ಅವರ ವಿರುದ್ಧದ ನ್ಯಾಯಾಂಗ ನಿಂದನೆ ಪ್ರಕರಣವನ್ನು ಪುನರ್ ಪರಿಶೀಲಿಸುವಂತೆ ಆಗ್ರಹಿಸಿ ನಗರದಲ್ಲಿ ಇಂದು ಪ್ರಗತಿ ಪರ ವಕೀಲರ ವೇದಿಕೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಜಮಾಯಿಸಿದ್ದ ಪ್ರತಿಭಟನಾಕಾರರು, ಪ್ರಶಾಂತ್ ಭೂಷಣ್ ಅವರ ವಿರುದ್ಧ ನ್ಯಾಯಾಂಗ ನಿಂದನೆಯ ತೀರ್ಪನ್ನು ವಾಪಸ್ ಪಡೆಯುವಂತೆ ಒತ್ತಾಯಿಸಿದರು. ನಂತರ ಉಪವಿಭಾಗಾಧಿಕಾರಿಗಳ ಕಚೇರಿಗೆ ತೆರಳಿ ಉಪವಿಭಾಗಾಧಿಕಾರಿಗಳ ಮುಖಾಂತರ ರಾಷ್ಟ್ರಪತಿ ಅವರಿಗೆ ಮನವಿ ಸಲ್ಲಿಸಿದರು.

ನ್ಯಾಯವಾದಿಗಳು ಹಾಗೂ ಹಿರಿಯ ಹೋರಾಟಗಾರ ಪ್ರಶಾಂತ ಭೂಷಣ ಅವರ ಮೇಲಿನ ನ್ಯಾಯಾಂಗ ನಿಂದನೆಯ ಪ್ರಕರಣವು ದುರುದ್ದೇಶ ಪೂರಿತವಾಗಿದೆ. ನ್ಯಾಯವಾದಿ ಮಾಡಿದ ಎರಡು ಸಾಲುಗಳ ಟ್ವೀಟ್ ನಿಂದ ತನ್ನ ಘನತೆ ಮತ್ತು ಗೌರವಕ್ಕೆ ಬೆದರಿಕೆ ಉಂಟಾಗಿದೆ ಎಂದು ಭಾವಿಸುವಷ್ಟರ ಮಟ್ಟಿಗೆ ಭಾರತದ ಸರ್ವೋಚ್ಛ ನ್ಯಾಯಾಲಯವು ತನ್ನದೇ ಸ್ವಂತ ಸಮಗ್ರತೆ ಮತ್ತು ನೈತಿಕತೆಯ ಮೇಲೆ ವಿಶ್ವಾಸ ಕಳೆದುಕೊಂಡಿದೆ ಎಂಬುದನ್ನು ನಾವು ಗಂಭೀರ ಕಾಳಜಿಯಿಂದ ಗಮನಿಸುತ್ತಿದ್ದೇವೆ. ಪ್ರಜೆಗಳ ಜನತಾಂತ್ರಿಕ ಹಕ್ಕುಗಳಿಗೆ ಮತ್ತು ನಾಗರಿಕ ಹಕ್ಕುಗಳಿಗೆ ಸಂಬಂಧಿಸಿದ ಹಲವಾರು ತುರ್ತು ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇರುವಾಗ, ಈ ಸ್ವಯಂ ಪ್ರೇರಿತ ನ್ಯಾಯಾಂಗ ನಿಂದನೆಯ ಪ್ರಕರಣವನ್ನು ತರಾತುರಿಯಲ್ಲಿ ಕೈಗೆತ್ತಿಕೊಂಡು ಮೂವರು ನ್ಯಾಯಾಧೀಶರ ಪೀಠ ನೀಡಿದ ತೀರ್ಪು ಉತ್ತರಕ್ಕಿಂತ ಹೆಚ್ಚಿನ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಪ್ರತಿಭಟನೆಯಲ್ಲಿ ಪ್ರಗತಿಪರ ವಕೀಲರ ವೇದಿಕೆ ಸಂಚಾಲಕ ಅನೀಸ್ ಪಾಶ, ಮಂಜುಳಾ, ಕಲೀಲ್, ಕರ್ನಾಟಕ ರಾಜ್ಯ ರೈತ ಸಂಘದ ಬಲ್ಲೂರು ರವಿಕುಮಾರ್, ಎಐಡಿವೈಓ ಮಧು ತೊಗಲೇರಿ , ಪರಶುರಾಮ್ , ಎಐಎಂಎಸ್ ಎಸ್. ಭಾರತಿ, ಸ್ಮಿತಾ, ನಾವು ಭಾರತೀಯರು ಸಂಘಟನೆಯ ಜಬೀನಾ ಖಾನಂ , ಅಜ್ಜರ್, ಕೆವಿಎಸ್ ನ ಸತೀಶ್ ಅರವಿಂದ್ ಸೇರಿದಂತೆ ಇತರರಿದ್ದರು.

# ಇಂಜಿನಿಯರಿಂಗ್‌ಗೆ 1.53 ಲಕ್ಷ ವಿದ್ಯಾರ್ಥಿಗಳ ಅರ್ಹತೆ

(5ನೇ ಪುಟದಿಂದ) ಉಳಿಯಲಿದೆ ಎಂದು ಅಶ್ವತ್ಥ ನಾರಾಯಣ್ ಹೇಳಿದರು.

ಕೊರೊನಾದಿಂದ ಎಷ್ಟೇ ಸಮಸ್ಯೆ ಎದುರಾದರೂ ಸರಕಾರ ಪರೀಕ್ಷೆ ನಡೆಸಿತು. ಯಾವುದೇ ಕಾರಣಕ್ಕೂ ಶೈಕ್ಷಣಿಕ ಚಟುವಟಿಕೆಗಳಿಗೆ ಧಕ್ಕೆ ಆಗಬಾರದು ಎಂಬುದು ಸರಕಾರದ ಅಚಲ ನಂಬಿಕೆಯಾಗಿತ್ತು. ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಎಲ್ಲಾ ಇಲಾಖೆಗಳ ಸಹಕಾರದಿಂದ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಲಾಯಿತು ಎಂದವರು ತಿಳಿಸಿದ್ದಾರೆ.

ಎಂಜಿನಿಯರಿಂಗ್ ಕೋರ್ಸ್‌ಗೆ 1,94,419 ವಿದ್ಯಾರ್ಥಿಗಳು, ಅರ್ಜಿ ಸಲ್ಲಿಸಿದ್ದರೆ, ಆ ಪೈಕಿ 1,75,349 ವಿದ್ಯಾರ್ಥಿಗಳು ಪರೀಕ್ಷೆ ಬರೆದರು. ಇವರಲ್ಲಿ 1,53,470 ವಿದ್ಯಾರ್ಥಿಗಳಿಗೆ ರ್‍ಯಾಂಕ್ ನೀಡಲಾಗಿದೆ ಎಂದು ಉಪ ಮುಖ್ಯಮಂತ್ರಿ ಹೇಳಿದ್ದಾರೆ.

ಬಿಎಸ್ಸಿ ಅಗ್ರಿ ವಿಭಾಗದಲ್ಲೂ 1,27,627, ಪಶುವೈದ್ಯ ವಿಜ್ಞಾನ ವಿಭಾಗದಲ್ಲಿ 1,29,666, ಬಿ-ಫಾರ್ಮಾ, ಡಿ-ಫಾರ್ಮಾ ವಿಭಾಗದಲ್ಲಿ 1,55,552 ವಿದ್ಯಾರ್ಥಿಗಳು ರ್‍ಯಾಂಕ್ ಪಡೆದಿದ್ದಾರೆ ಎಂದವರು ತಿಳಿಸಿದ್ದಾರೆ.

# ಐವರಿಗೆ ಖೇಲ್ ರತ್ನ ಪ್ರಶಸ್ತಿ

(5ನೇ ಪುಟದಿಂದ) ಗೌರವವಾದ ಖೇಲ್ ರತ್ನ ನೀಡಲಾಗಿತ್ತು. ಹೀಗಾಗಿ ಅವರ ಹೆಸರನ್ನು ಅರ್ಜುನ ಪ್ರಶಸ್ತಿಗೆ ಶಿಫಾರಸ್ಸು ಮಾಡಿದ್ದು ವಿಚಿತ್ರವಾಗಿತ್ತು ಹಾಗೂ ಟೀಕೆಗೂ ಕಾರಣವಾಗಿತ್ತು. ಉಳಿದಂತೆ ಈ ವರ್ಷ ಕುಸ್ತಿ ಪಟು ವಿನೇಶ್ ಫೋಗಟ್, ಪ್ಯಾರಾಲಿಂಪಿಕ್ ಬಂಗಾರದ ವಿಜೇತ ಮರಿಯಪ್ಪನ್ ಥಂಗವೇಲು, ಟೇಬಲ್ ಟೆನ್ನಿಸ್ ಆಟಗಾರ್ತಿ ಮನಿಕಾ ಬಾತ್ರಾ, ಮಹಿಳಾ ಹಾಕಿ ತಂಡದ ನಾಯಕಿ ರಾಣಿ ರಾಮಪಾಲ್ ಹಾಗೂ ಕ್ರಿಕೆಟಿಗ ರೋಹಿತ್ ಶರ್ಮಾ ಅವರಿಗೆ ಖೇಲ್ ರತ್ನ ಪ್ರಶಸ್ತಿ ನೀಡುವುದನ್ನು ಖಚಿತ ಪಡಿಸಲಾಗಿದೆ.

ರಾಷ್ಟ್ರೀಯ ಕ್ರೀಡಾ ದಿನವಾದ ಆಗಸ್ಟ್ 29ರಂದು ವರ್ಚುಯಲ್ ಮೂಲಕ ಪ್ರಶಸ್ತಿ ನೀಡಲಾಗುವುದು. ಸಾಮಾನ್ಯವಾಗಿ ರಾಷ್ಟ್ರಪತಿಭವನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿತ್ತು. ಕೊರೊನಾ ಹಿನ್ನೆಲೆಯಲ್ಲಿ ಪದ್ಧತಿ ಬದಲಿಸಲಾಗಿದೆ.

# ಕೆಪಿಎಸ್‌ಸಿ ಪರೀಕ್ಷೆ: ಸಾರಿಗೆ ಸೌಲಭ್ಯ

(5ನೇ ಪುಟದಿಂದ) ಕೇಂದ್ರ ಸ್ಥಾನಗಳಿಗೆ ಅವಶ್ಯಕತೆಗೆ ಅನುಗುಣವಾಗಿ ಹೆಚ್ಚುವರಿ ಬಸ್ ಸೇವೆ ಒದಗಿಸುವುದಾಗಿ ಕೆಎಸ್‌ಆರ್‌ಟಿಸಿ ಮುಖ್ಯ ಸಂಚಾರ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.ಬೆಂಗಳೂರು, ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ ಮತ್ತು ತುಮಕೂರು, ದಾವಣಗೆರೆ, ಚಿತ್ರದುರ್ಗ, ಮಂಗಳೂರು, ಉಡುಪಿ, ಚಾಮರಾಜನಗರ, ಹಾಸನ, ಕೊಡಗು, ಮಂಡ್ಯ, ಮೈಸೂರು, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲಾ ಕೇಂದ್ರಗಳಿಂದ ಮತ್ತು ತಾಲೂಕು ಕೇಂದ್ರಗಳಿಂದ ಮುಖ್ಯ ಪರೀಕ್ಷಾ ಕೇಂದ್ರಗಳಿಗೆ ಹೆಚ್ಚುವರಿ ಬಸ್ ಸೌಲಭ್ಯ ಕಲ್ಪಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ನಿಷೇಧಾಜ್ಞೆ : ಜಿಲ್ಲಾಧಿಕಾರಿ ಆದೇಶ

ದಾವಣಗೆರೆ, ಆ.21- ಕರ್ನಾಟಕ ಲೋಕಸೇವಾ ಆಯೋಗದಿಂದ ಇದೇ ದಿನಾಂಕ 24 ರಂದು ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗಾಗಿ ಪೂರ್ವಭಾವಿ ಪರೀಕ್ಷೆಯನ್ನು ದಾವಣಗೆರೆ ಕೇಂದ್ರದಲ್ಲಿ 30 ಪರೀಕ್ಷಾ ಕೇಂದ್ರದಲ್ಲಿ ನಡೆಸಲಾಗುತ್ತಿದ್ದು, ಪರೀಕ್ಷಾ ಕೇಂದ್ರಗಳಲ್ಲಿ ಅವ್ಯವಹಾರ ತಡೆಗಟ್ಟಲು ಮತ್ತು ಸುಗಮ ರೀತಿಯಲ್ಲಿ ಪರೀಕ್ಷೆಗಳನ್ನು ನಡೆಸುವ ಸಲುವಾಗಿ ಪರೀಕ್ಷಾ ಕೇಂದ್ರಗಳ ಸುತ್ತಮುತ್ತ 200 ಮೀಟರ್ ಪರಿಧಿ ವ್ಯಾಪ್ತಿಯ ಪ್ರದೇಶವನ್ನು ಸಾರ್ವಜನಿಕ ಪ್ರವೇಶಕ್ಕೆ ನಿಷೇಧಿತ ಪ್ರದೇಶವೆಂದು ಹಾಗೂ ಕೇಂದ್ರಗಳ ಸುತ್ತಮುತ್ತಲಿನ ಜೆರಾಕ್ಸ್ ಅಂಗಡಿಗಳು ಮತ್ತು ಸೈಬರ್ ಕೆಫೆಗಳನ್ನು ಪರೀಕ್ಷಾ ಅವಧಿಯಲ್ಲಿ ಮುಚ್ಚಬೇಕೆಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಆದೇಶಿಸಿದ್ದಾರೆ.

# ವೀರಜ್‌ಗೆ ಬಿಎಸ್ಸಿ ಅಗ್ರಿಯಲ್ಲಿ 188ನೇ ರ್‍ಯಾಂಕ್



ದಾವಣಗೆರೆ, ಆ. 21- ನಗರದ ಶ್ರೀ ಸಿದ್ದೇಶ್ವರ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿ ಬಿ.ಎಸ್. ವಿರಾಜ್ ಈ ಬಾರಿಯ ಸಿಇಟಿ ಪರೀಕ್ಷೆಯ ಇಂಜಿನಿಯರಿಂಗ್ ವಿಭಾಗದಲ್ಲಿ 462ನೇ ರ್‍ಯಾಂಕ್ ಪಡೆದಿದ್ದಾರೆ. ಜೊತೆಗೆ ಬಿಎಸ್ಸಿ ಅಗ್ರಿಯಲ್ಲಿ 188 ಹಾಗೂ ವೆಟರ್ನರಿ ವಿಭಾಗದಲ್ಲಿ 974ನೇ ರ್‍ಯಾಂಕ್ ಪಡೆದಿದ್ದಾರೆ.

# ಸುಗ್ರೀವಾಜ್ಞೆ ದುರ್ಬಳಕೆ ಮಾಡಿಕೊಂಡು ಕಾಯ್ದೆ ತಿದ್ದುಪಡಿಗೆ ಮುಂದಾಗಿರುವ ಸರ್ಕಾರ

## ಹರಪನಹಳ್ಳಿ : ಕಾಂಗ್ರೆಸ್ ಪ್ರತಿಭಟನೆಯಲ್ಲಿ ಕಿಡಿಕಾರಿದ ಎಂ.ಪಿ. ಲತಾ ಮಲ್ಲಿಕಾರ್ಜುನ್



ಹರಪನಹಳ್ಳಿ, ಆ.21- ರಾಜ್ಯ ಸರ್ಕಾರ ಸುಗ್ರೀವಾಜ್ಞೆ ದುರ್ಬಳಕೆ ಮಾಡಿಕೊಂಡು ಭೂ ಸುಧಾರಣಾ ಕಾಯ್ದೆ, ಎ ಪಿಎಂಸಿ ಕಾಯ್ದೆ, ಧಾರ್ಮಿಕ, ಕಾರ್ಮಿಕ ಕಾಯ್ದೆಗಳ ತಿದ್ದುಪಡಿಗಳನ್ನು ಜಾರಿಗೆ ತರಲು ಹೊರಟಿರುವುದು ವಿಷಾದದ ಸಂಗತಿ ಎಂದು ಕೆಪಿಸಿಸಿ ಮಹಿಳಾ ಘಟಕದ ಕಾರ್ಯದರ್ಶಿ ಶ್ರೀಮತಿ ಎಂ.ಪಿ. ಲತಾ ಮಲ್ಲಿಕಾರ್ಜುನ್ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರ ವೃತ್ತದಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದ ನಿನ್ನೆ ಆಯೋಜಿಸಿದ್ದ ಜನಧ್ವನಿ ಪ್ರತಿಭಟನಾ ಧರಣಿಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಕಾಯ್ದೆ ಮರಣ ಶಾಸನ ಬರೆದಂತಾಗಿದೆ. ಎಪಿಎಂಸಿ ಕಾಯ್ದೆಯ ತಿದ್ದುಪಡಿಯನ್ನು ವಾಪಸ್ಸು ಪಡೆಯಬೇಕು ಹಾಗೂ ಭೂಮಿ ತಿದ್ದುಪಡಿ ಕಾಯ್ದೆಯಿಂದ ಶ್ರೀಮಂತರಿಗೆ ಹೆಚ್ಚು ಅವಕಾಶ ಸಿಕ್ಕಂತಾಗುತ್ತದೆ. ಸರ್ಕಾರ ಉಳುವವನೇ ಒಡೆಯ ಎನ್ನುವ ತನ್ನ ಧೋರಣೆಯನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಎಂ.ಪಿ.ರವೀಂದ್ರ ಪ್ರತಿಷ್ಠಾನದಿಂದ ಹತ್ತನೇ ತರಗತಿ ಓದುತ್ತಿರುವ 7 ವಿದ್ಯಾರ್ಥಿಗಳಿಗೆ ಸ್ಮಾರ್ಟ್ ಫೋನ್‌ಗಳನ್ನು ವಿತರಿಸಲಾಯಿತು.

ಎಪಿಎಂಸಿ ಅಧ್ಯಕ್ಷ ಅಶೋಕಗೌಡ, ತಾ.ಪಂ ಸದಸ್ಯರಾದ ಹುಲಿಕಟ್ಟಿ ಚಂದ್ರಪ್ಪ, ಮೈದೂರು ಓ.ರಾಮಪ್ಪ, ತಾ.ಪಂ ಮಾಜಿ ಅಧ್ಯಕ್ಷ ಕಿತ್ತೂರು ಓಬಣ್ಣ, ಟಿ.ಎ.ಪಿ.ಸಿ.ಎಂ.ಎಸ್ ಮಾಜಿ ಅಧ್ಯಕ್ಷೆ ಪುಷ್ಪ ದಿವಾಕರ್, ಹಲುವಾಗಲು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷೆ ರತ್ನಮ್ಮ, ಮತ್ತಿಹಳ್ಳಿ ರಾಮಪ್ಪ, ವಕೀಲ ಹಲಗೇರಿ ಮಂಜಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷ ಕಾನಹಳ್ಳಿ ರುದ್ರಪ್ಪ, ಮತ್ತೂರು ಬಸವರಾಜ, ಉದಯಶಂಕರ, ಸುರೇಶ್, ಪುಷ್ಪ ದಿವಾಕರ, ಕಂಚಿಕೇರಿ ಜಯಲಕ್ಷ್ಮಿ, ಗುಂಡಗತ್ತಿ ನೇತ್ರಾವತಿ, ಕವಿತಾ ಸುರೇಶ್, ಬಾಷಾ ಮುಜಾವರ, ಕಲ್ಲಹಳ್ಳಿ ಗೋಣೆಪ್ಪ, ಹುಲಿಕಟ್ಟಿ ಕೃಷ್ಣಪ್ಪ, ಅಗ್ರಹಾರ ಅಶೋಕ, ಕುಂಚೂರು ಇಬ್ರಾಹಿಂ, ಉಮಾಶಂಕರ್. ಕವಿತಾ ಸುರೇಶ್, ಎನ್. ಮಜೀದ್ ಇನ್ನಿತರರಿದ್ದರು.

# ಸಸಿ ವಿತರಣೆ

ದಾವಣಗೆರೆ, ಆ.21- ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಲ್ಲಿ ಹೊಂಗೆ, ಬೇವು, ಬೆಟ್ಟದ ನೆಲ್ಲಿ ಸಸಿಗಳು ಲಭ್ಯವಿದ್ದು, ಅವಶ್ಯಕತೆ ಮತ್ತು ಆಸಕ್ತರು ಮೊ: 9538024422ಕ್ಕೆ ಸಂಪರ್ಕಿಸಿ.

# ಇಂಜಿನಿಯರಿಂಗ್ ನಲ್ಲಿ ದೀಪಕ್ 1377ನೇ ರ್‍ಯಾಂಕ್



ದಾವಣಗೆರೆ, ಆ.21- ಪ್ರಸಕ್ತ ಸಾಲಿನ ಸಿಇಟಿ ಪರೀಕ್ಷೆಯಲ್ಲಿ ನಗರದ ಶ್ರೀ ತರಳಬಾಳು ಜಗದ್ಗುರು ಸಂಯುಕ್ತ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಸಿಇಟಿ ಪರೀಕ್ಷೆಯಲ್ಲಿ ಉತ್ತಮ ಸಾಧನೆಯನ್ನು ಸಾಧಿಸಿರುತ್ತಾರೆ. ಎಸ್.ಬಿ. ದೀಪಕ್ ಇಂಜಿನಿಯರಿಂಗ್‌ನಲ್ಲಿ ರಾಜ್ಯಕ್ಕೆ 1377 ರ್‍ಯಾಂಕ್, ಪಶುವೈದ್ಯಕೀಯದಲ್ಲಿ 277 ಹಾಗೂ ಅಗ್ರಿಯಲ್ಲಿ 424 ಸ್ಥಾನ ಪಡೆದಿದ್ದಾರೆ. ಹದಿನೇಳು ವಿದ್ಯಾರ್ಥಿಗಳು ಉತ್ತಮ ರ್‍ಯಾಂಕ್ ಗಳಿಸಿದ್ದಾರೆ.

# ಆರು ಪತ್ರಕರ್ತರ ಕುಟುಂಬಕ್ಕೆ ತಲಾ 5 ಲಕ್ಷ ಮಂಜೂರು

ಬೆಂಗಳೂರು, ಆ.21- ಕೋವಿಡ್ ಸಂದರ್ಭದಲ್ಲಿ ಮೃತಪಟ್ಟ ಆರು ಜನ ಪತ್ರಕರ್ತರಿಗೆ ತಲಾ 5 ಲಕ್ಷ ರೂ. ಪರಿಹಾರವನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಮಂಜೂರು ಮಾಡಿದ್ದಾರೆ.

ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘದ (ಕೆಯುಡಬ್ಲ್ಯೂಜೆ) ಅಧ್ಯಕ್ಷ ಶಿವಾನಂದ ತಗಡೂರು ನೇತೃತ್ವದಲ್ಲಿ ಭೇಟಿ ಮಾಡಿದ್ದ ಪತ್ರಕರ್ತರ ನಿಯೋಗದ ಮನವಿಗೆ ಸಿಎಂ ಕೂಡಲೇ ಸ್ಪಂದಿಸಿ, ಆದೇಶಿಸಿದ್ದಾರೆ.

ಪತ್ರಕರ್ತರಾದ ಸೋಮಶೇಖರ್ ಯಡವಟ್ಟಿ, ವಿ.ಸಿ.ಹಿರೇಮಠ, ಕೆ.ಎಂ.ಹಾಲಪ್ಪ, ಪರ್ವತಯ್ಯಸ್ವಾಮಿ, ಎಸ್.ಹೆಚ್.ಜಯಣ್ಣ, ಬಿ.ಎಂ. ತ್ರಿಮೂರ್ತಿ ಅವರ ಕುಟುಂಬಕ್ಕೆ ಸೌಲಭ್ಯ ದೊರೆಯಲಿದೆ.

ಹಿರಿಯ ಪತ್ರಕರ್ತರಾದ ವಿನಯ್ (ಟಿವಿ 9), ಚಿದಾನಂದ ಪಟೇಲ್ (ಟಿವಿ 18) ಮತ್ತಿತರರು ನಿಯೋಗದಲ್ಲಿದ್ದರು.

# ಆರೋಗ್ಯಾಧಿಕಾರಿ ಆತ್ಮಹತ್ಯೆ ತನಿಖೆ

(5ನೇ ಪುಟದಿಂದ) 25-26ರ ಹಂತದಲ್ಲೇ ಪರೀಕ್ಷೆ ನಡೆಯುತ್ತಿದೆ. 150ಕ್ಕೆ ಹೇಳಿದರೆ, 100 ಆದರೆ ಒಪ್ಪಿಕೊಳ್ಳುತ್ತೇವೆ. 26 ಆದರೆ ಹೇಗೆ? ಎಂದು ಕೇಳಿದ್ದಾರೆ.

ಪಿ.ಹೆಚ್.ಸಿ.ಯಲ್ಲಿ ಟೆಸ್ಟ್ ಮಾಡಿ. ಜನ ಸುಮ್ನೆ ಟೆಸ್ಟ್ ಮಾಡಿಸಿಕೊಳ್ಳದೇ ಸಾಯುತ್ತಿದ್ದಾರೆ. ಒಂದು ಕಡೆ ಮಾರುಕಟ್ಟೆಯಲ್ಲಿ, ಬೀದಿಯಲ್ಲಿ ಸ್ವಾಬ್ ಮಾಡಿ. ಆಟ ಆಡುತ್ತಿದ್ದೀರಾ, ಕೆಲಸ ಮಾಡದೇ ನಾಟಕ ಮಾಡುತ್ತಿದ್ದೀರಿ ಎಂದು ಅಧಿಕಾರಿ ತರಾಟೆಗೆ ತೆಗೆದುಕೊಂಡಿದ್ದಾರೆ.

ಈ ನಡುವೆ, ಕೊರೊನಾ ಉಸ್ತುವಾರಿ ಹೊಂದಿರುವ ವೈದ್ಯಕೀಯ ಶಿಕ್ಷಣ ಸಚಿವ ಡಾ. ಕೆ. ಸುಧಾಕರ್ ಅವರು ಮೃತರಿಗೆ ಅಂತಿಮ ನಮನ ಸಲ್ಲಿಸಿದ್ದಾರೆ.

ಈ ಸಂದರ್ಭದಲ್ಲಿ ಸಚಿವರ ಜೊತೆ ಮಾತನಾಡಿದ ಇರ್ನೋರ್ವ ಸರ್ಕಾರಿ ವೈದ್ಯ ಡಾ. ರವೀಂದ್ರ, ವೈದ್ಯಕೀಯ ವೃತ್ತಿಪರರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ವಿವರಿಸಿದ್ದಾರೆ.

ಅಟೆಂಡೆನ್ಸ್ ರಿಜಿಸ್ಟರ್ ನೋಡಿ, ಕೊರೊನಾ ಬಂದ ನಂತರ ನಾಗೇಂದ್ರ ಅವರು ರಜೆಯೇ ಪಡೆದಿಲ್ಲ. ಕುಟುಂಬದವರಿಗೆ ಕೊರೊನಾ ಬರಬಾರದು ಎಂದು ಅವರು ಆರು ತಿಂಗಳಿನಿಂದ ಕುಟುಂಬದಿಂದ ದೂರವಿದ್ದಾರು ಎಂದು ರವೀಂದ್ರ ತಿಳಿಸಿದ್ದಾರೆ. ಈ ನಡುವೆ, ಘಟನೆಗೆ ಕಾರಣವಾದವರನ್ನು ಅಮಾನತ್ತುಗೊಳಿಸದೇ ಹೋದರೆ ರಾಜ್ಯವ್ಯಾಪಿ ಪ್ರತಿಭಟನೆ ನಡೆಸುವುದಾಗಿ ರಾಜ್ಯ ವೈದ್ಯರ ಒಕ್ಕೂಟ ಎಚ್ಚರಿಕೆ ನೀಡಿದೆ. ಡಾ. ನಾಗೇಂದ್ರ ಸಾವಿಗೆ ಕಾರಣರಾದವರನ್ನು ಅಮಾನತ್ತು ಮಾಡಬೇಕು. ಇಲ್ಲದೇ ಹೋದರೆ ಸೋಮವಾರದಿಂದ ತುರ್ತು ಸೇವೆ ಹೊರತುಪಡಿಸಿ ಉಳಿದೆಲ್ಲ ಸೇವೆಗಳನ್ನು ಬಂದ್ ಮಾಡಲಾಗುವುದು ಎಂದು ಕೆ.ಎಸ್.ಎಂ.ಡಿ.ಎ. ಅಧ್ಯಕ್ಷ ಡಾ. ಶ್ರೀನಿವಾಸ್ ತಿಳಿಸಿದ್ದಾರೆ.

# 237 ಪಾಸಿಟಿವ್, 158 ಬಿಡುಗಡೆ

(5ನೇ ಪುಟದಿಂದ) ಪುರುಷ, ಜಯನಗರ ಬಿ ಬ್ಲಾಕ್‌ನ 25ರ ಮಹಿಳೆ, ವಿದ್ಯಾನಗರದ 33ರ ಮಹಿಳೆ, ಭಾರತ್ ಕಾಲೋನಿಯ 62ರ ಪುರುಷ, ರಂಗನಾಥ ಬಡಾವಣೆಯ 52ರ ಮಹಿಳೆ.

ವಿದ್ಯಾನಗರದ 40ರ ಪುರುಷ, ಅತ್ತಿಗೆರೆಯ 50ರ ಪುರುಷ, ಲೆನಿನ್ ನಗರದ 12ರ ಬಾಲಕ, ವೆಂಕಟೇಶ್ವರ ಕ್ಯಾಂಪ್‌ನ 60ರ ಪುರುಷ, ಶ್ರೀರಾಮ ಬಡಾವಣೆಯ 4ನೇ ಕ್ರಾಸ್‌ನ 24ರ ಪ ುರುಷ, ಸ್ವಾಮಿ ವಿವೇಕಾನಂದ ಬಡಾವಣೆಯ 31ರ ಮಹಿಳೆ, ಆವರೆಗೆರೆಯ 36 ಪುರುಷ, ಸರಸ್ವತಿ ಬಡಾವಣೆಯ 43ರ ಪುರುಷ, ಐಗೂರಿನ 11ರ ಬಾಲಕಿ, 25 ಪುರುಷ, 45 ಮಹಿಳೆ, 50ರ ಪುರುಷ, 24ರ ಮಹಿಳೆ.

ಎಸ್‌ಪಿಎಸ್ ನಗರದ 42ರ ಮಹಿಳೆ, ಸಿದ್ದವೀರಪ್ಪ ಲೇ ಔಟ್ 9ನೇ ಕ್ರಾಸ್‌ನ 59 ಮಹಿಳೆ, ಡಿಸಿಎಂ ಟೌನ್‌ಶಿಪ್‌ನ 62ರ ಮಹಿಳೆ, ಹೊನ್ನೂರಿನ 70ರ ಮಹಿಳೆ, ಎಸ್.ಎಸ್. ಬಡಾವಣೆ 8ನೇ ಕ್ರಾಸ್‌ನ 58ರ ಪುರುಷ, ಅಣಬೇರು ಗ್ರಾಮದ 41ರ ಮಹಿಳೆ, ಹಳೇ ಬಸ್ ನಿಲ್ದಾಣದ ಬಳಿಯ 33ರ ಪುರುಷ, ಬಾರ್‌ಲೈನ್ ರಸ್ತೆಯ 32ರ ಪುರುಷ, ಎನ್.ಆರ್. ರಸ್ತೆಯ 54ರ ಪುರುಷ, ಶಾಮನೂರಿನ 21 ಮಹಿಳೆ, ನಿಜಲಿಂಗಪ್ಪ ಬಡಾವಣೆಯ 1ನೇ ಕ್ರಾಸ್‌ನ 26ರ ಪುರುಷ, ವಿನಾಯಕ ಬಡಾವಣೆ 48ರ ಪುರುಷ, ನಿಟುವಳ್ಳಿ 3ನೇ ಕ್ರಾಸ್‌ನ 58ರ ಮಹಿಳೆ, ವಿದ್ಯಾನಗರ 9ನೇ ಕ್ರಾಸ್‌ನ 53ರ ಪುರುಷ, 40ರ ಮಹಿಳೆ, ಎಂ.ಸಿ.ಸಿ. ಎ ಬ್ಲಾಕ್ ನ 58ರ ಮಹಿಳೆ, ತರಳಬಾಳು ಬಡಾವಣೆಯ 28ರ ಮಹಿಳೆ ಸೇರಿ ಒಟ್ಟು 237 ಜನರಲ್ಲಿ ಕೊರೊನಾ ದೃಢಪಟ್ಟಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 84, ಹರಿಹರ 34, ಜಗಳೂರು 11, ಚನ್ನಗಿರಿ 02, ಹೊನ್ನಾಳಿ 25 ಹಾಗೂ ಹೊರ ಜಿಲ್ಲೆಯ ಇಬ್ಬರು ಸೋಂಕಿನಿಂದ ಗುಣವಾಗಿ ಬಿಡುಗಡೆಯಾಗಿದ್ದಾರೆ.

# ಚುನಾವಣೆಗಾಗಿ ಮಾರ್ಗಸೂಚಿ ಪ್ರಕಟ

(5ನೇ ಪುಟದಿಂದ) ಇಲ್ಲವೇ ಕೇಂದ್ರಗಳಲ್ಲಿ ಕ್ವಾರಂಟೈನ್‌ನಲ್ಲಿರುವವರೂ ಸಹ ಮತದಾನ ಮಾಡಲು ಅವಕಾಶ ಕಲ್ಪಿಸಲಾಗಿದೆ. ಜನರು ಅಂಚೆ ಮೂಲಕ ಮತದಾನ ಮಾಡುವುದು ಸೇವೆಯಲ್ಲಿರುವವರು ಅಂಚೆ ಮತದಾನ ಮಾಡುವುದಕ್ಕಿಂತ ಭಿನ್ನವಾಗಿರಲಿದೆ. ಅಂಚೆ ಮತದಾನಕ್ಕೆ ಮನವಿ ಸಲ್ಲಿಸಿದಾಗ ಅಧಿಕಾರಿಗಳು ಅವರ ಮನೆಗಳಿಗೆ ಮತಪತ್ರ ತೆಗೆದುಕೊಂಡು ಹೋಗಲಿದ್ದಾರೆ. ಪಾರದರ್ಶಕತೆಗಾಗಿ ಇಡೀ ಪ್ರಕ್ರಿಯೆಯ ಚಿತ್ರೀಕರಣ ನಡೆಸಲಿದ್ದಾರೆ.

ಕೊರೊನಾ ನಂತರದಲ್ಲಿ ವಿಧಾನ ಸಭಾ ಚುನಾವಣೆ ಎದುರಿಸಲಿರುವ ಮೊದಲ ರಾಜ್ಯ ಬಿಹಾರ ಆಗಲಿದೆ. ಆನ್‌ಲೈನ್ ಮೂಲಕ ಚುನಾವಣಾ ಪ್ರಚಾರ ನಡೆಸುವ ಬಗ್ಗೆ ಆರೋಗ್ಯ ಸಚಿವಾಲಯ ಹಾಗೂ ಗೃಹ ಸಚಿವಾಲಯಗಳು ಮಾರ್ಗಸೂಚಿ ಪ್ರಕಟಿಸಲಿವೆ ಎಂದು ಚುನಾವಣಾ ಆಯೋಗ ಹೇಳಿದೆ.

# ಶ್ರೀಸಾಮಾನ್ಯನಿಗೆ ಮೊಬೈಲ್, ದುರ್ಬಲರಿಗೆ ಸಾಮಾಜಿಕ ನ್ಯಾಯ ರಾಜೀವ್ ಗಾಂಧಿ, ದೇವರಾಜ ಅರಸು ಕೊಡುಗೆ



ದಾವಣಗೆರೆ, ಆ. 21 - ಶ್ರೀಸಾಮಾನ್ಯನ ಕೈಯಲ್ಲಿ ಮೊಬೈಲ್ ಬರಲು ದಿ. ರಾಜೀವಗಾಂಧಿ ಅವರು ಹಾಗೂ ದುರ್ಬಲರಿಗೆ ಸಾಮಾಜಿಕ ನ್ಯಾಯ ಪಡೆಯಲು ದೇವರಾಜ ಅರಸು ಅವರು ಕಾರಣರಾಗಿದ್ದಾರೆ ಎಂದು ಕೆಪಿಸಿಸಿ ವಕ್ತಾರ ಡಿ.ಬಸವರಾಜ್ ಅಭಿಪ್ರಾಯಪಟ್ಟರು.

ನಗರದ ಜಿಲ್ಲಾ ಕಾಂಗ್ರೆಸ್ ಸಮಿತಿ ಇಂಟಾಕ್ ವಿಭಾಗದಿಂದ ನಿನ್ನೆ ಏರ್ಪಡಿಸಿದ್ದ ರಾಜೀವಗಾಂಧಿ ಮತ್ತು ದೇವರಾಜ ಅರಸು ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಭಾವಚಿತ್ರಗಳಿಗೆ ಪುಷ್ಪನಮನ ಸಲ್ಲಿಸಿ ಮಾತನಾಡಿದರು.

ರಾಜೀವಗಾಂಧಿ ಅವರು ಅತಿ ಕಿರಿಯ ವಯಸ್ಸಿನಲ್ಲಿ ಭಾರತದ ಪ್ರಧಾನಮಂತ್ರಿಗಳಾಗಿ ಅಧಿಕಾರದ ಚುಕ್ಕಾಣಿ ಹಿಡಿದು ಐದು ವರ್ಷಗಳ ಕಾಲ ಉತ್ತಮ ಆಡಳಿತ ನೀಡಿ ಭಾರತ ದೇಶವನ್ನು ಶಕ್ತಿಶಾಲಿಯಾಗಿಸಿದರು. ರಾಜೀವ್ ಗಾಂಧಿ ಅವರು ಅಲ್ಪ ಸಮಯದಲ್ಲಿ ಧ್ರುವತಾರೆಯಾಗಿ ಮಿಂಚಿದ್ದರು ಎಂದು ಬಣ್ಣಿಸಿದರು.

ರಾಜೀವ್ ಗಾಂಧಿ ಅವರು 18 ವರ್ಷದವರಿಗೆ ಮತದಾನದ ಹಕ್ಕು, ತಂತ್ರಜ್ಞಾನದ ಅಭಿವೃದ್ಧಿಗೆ ಸಾಕಷ್ಟು ಕನಸು ಕಟ್ಟಿಕೊಂಡಿದ್ದು ಅದನ್ನು ಜಾರಿಗೊಳಿಸಿದರು. ಉನ್ನತ ಶಿಕ್ಷಣಕ್ಕೆ ಮಹತ್ವ ನೀಡಿ ಅನೇಕ ವಿವಿಗಳನ್ನು ಸ್ಥಾಪಿಸಿದರು.

ದೇವರಾಜ ಅರಸು ರಾಜ್ಯ ಕಂಡ ಜನಪ್ರಿಯ ಮುಖ್ಯಮಂತ್ರಿಗಳಾಗಿದ್ದರು. ಎರಡು ಬಾರಿ ಮುಖ್ಯಮಂತ್ರಿಗಳಾಗಿದ್ದ ಅವರು ರಾಜ್ಯದಲ್ಲಿ 20 ಅಂಶಗಳ ಕಾರ್ಯಕ್ರಮಗಳನ್ನು ಜಾರಿಗೆ ತಂದರು. ಉಳುವವನೇ ಹೊಲದ ಒಡೆಯ ಎಂಬ ಕಾಯ್ದೆ ಜಾರಿಗೊಳಿಸಿ ತಮಗಿದ್ದ 28 ಎಕರೆ ಜಮೀನನಲ್ಲಿ ತಮ್ಮ ಕೆಳಗೆ ಕೆಲಸ ಮಾಡುತ್ತಿದ್ದವರಿಗೆ 7 ಎಕರೆ ಅವರಿಗೆ ನೀಡುವ ಮೂಲಕ ಮಾದರಿಯಾಗಿದ್ದರು. ರಾಜ್ಯದಲ್ಲಿ ಜೀತ ಪದ್ಧತಿ, ಮಲಹೊರುವ ಪದ್ಧತಿಗಳನ್ನು ರದ್ದು ಮಾಡಿದರು. ಬಡವರು, ದಲಿತರು, ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರಿಗೆ ರಾಜಕೀಯ ಕ್ಷೇತ್ರದಲ್ಲಿ ಅಧಿಕಾರ ನೀಡಿ ದುರ್ಬಲರಿಗೆ ಸಾಮಾಜಿಕ ನ್ಯಾಯ ಒದಗಿಸಿದ ಕೀರ್ತಿ ಅರಸು ಅವರಿಗೆ ಸಲ್ಲುತ್ತದೆ ಎಂದು ಅವರ ಸೇವೆ ಸ್ಮರಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಇಂಟಾಕ್ ವಿಭಾಗದ ಅಧ್ಯಕ್ಷ ಕೆ.ಎಂ. ಮಂಜುನಾಥ, ಜಿಲ್ಲಾ ಕಾಂಗ್ರೆಸ್ ಮುಖಂಡರಾದ ಬಿ.ಎಚ್.ಉದಯಕುಮಾರ್, ಎಂ.ಕೆ. ಲಿಯಾಕತ್ ಅಲಿ, ಅಲ್ಲಾವಲಿ ಸಮೀರಖಾನ್, ಅಲ್ಲಾವಲಿ ಸಜದ್‌ಖಾನ್, ಎಚ್.ಹರೀಶ್, ಡಿ.ಶಿವಕುಮಾರ್, ಎಚ್. ಎಸ್. ಶಶಿಕುಮಾರ್, ಕೇಶವನಾಯಕ್, ಬಾಷಾ, ಎಲ್ ಭೀಮೇಶ್, ಮಂಜುನಾಥ, ಕೆ.ಜೆ.ರಹಮತ್‌ಉಲ್ಲಾ, ಆಶ್ರಫ್ ಅಲಿ, ಮುಜಾಹಿದ್ ಖಾನ್ ಇತರರು ಭಾಗವಹಿಸಿದ್ದರು.




ಗೌರಿ-ಗಣೇಶ ಹಬ್ಬದ ಶುಭಾಶಯಗಳು

ನಮ್ಮೆಲ್ಲಾ ಆತ್ಮೀಯ ಸ್ನೇಹಿತರಿಗೂ, ಬಂಧುಗಳಿಗೂ ಹಾಗೂ ನಗರದ ಸರ್ವ ನಾಗರಿಕರಿಗೂ ಗೌರಿ-ಗಣೇಶ ಹಬ್ಬದ ಹಾರ್ದಿಕ ಶುಭಾಶಯಗಳು.

ಪವಾಡಪ್ಪ ತಿಪ್ಪೇಸ್ವಾಮಿ ದಸ್ತಾವೇಜು ಬರಹಗಾರರು,
ಸಬ್ ರಿಜಿಸ್ಟ್ರಾರ್ ಕಛೇರಿ ಆವರಣ, ಪಿ.ಬಿ. ರಸ್ತೆ, ದಾವಣಗೆರೆ. ಮೊ.: 98443 31765




ರೈತ ಬಾಂಧವರಲ್ಲಿ ವಿನಂತಿ : ಕಡೆಯ ದಿನ, ಕಡೆಯ ಅವಕಾಶ ಸದುಪಯೋಗ ಪಡಿಸಿಕೊಳ್ಳಿ.




JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte